ಸಂಪುಟ 15
ಸಂಚಿಕೆ 48

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
5 ಡಿಸೆಂಬರ್ 1993

ಮೊಯಿಲಿಯವರ ಸರಕಾರದ ಒಂದು ವರ್ಷದ "ಸಾಧನೆ"ಗಳು:

ಮಾತಿಗೂ ಕೃತಿಗೂ ಮೈಲಿಗಳ ಅಂತರ!

--ಪಿ. ರಾಮಚಂದ್ರರಾವ್



ಮೊಯಿಲಿಯವರು ಇಂದಿರಾಗಾಂಧಿಯ ಶಿಷ್ಯರು. ಇಂದಿರಾಗಾಂಧಿ ಕಾಲದಲ್ಲಿ "ಅಗ್ಗದ ಜನಪ್ರಿಯ ಯೋಜನೆ"ಗಳ ಕುರಿತು ಎಷ್ಟು ವ್ಯಾಪಕವಾದ ಅಬ್ಬರದ ಪ್ರಚಾರವಿತ್ತು ಎಂಬುದನ್ನು ನಾವು ನೆನಪು ಮಾಡಿದರೆ, ಅದರಲ್ಲಿ ಮೊಯಿಲಿಯವರ ಪಾತ್ರವೂ (ದೇವರಾಜ ಅರಸರ ಪಾತ್ರದೊಡನೆ) ಇತ್ತು ಎಂಬುದರಲ್ಲಿ ಎರಡು ಮಾತಿಲ್ಲ. ಆಗ ತರಬೇತಿಯಾದ ಮೊಯಿಲಿಯವರು ಈಗ ತಾನೇ ಮುಖ್ಯಮಂತ್ರಿಯಾದಾಗ ಆ ವಿದ್ಯೆಯನ್ನು ಚೆನ್ನಾಗಿ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಅವರ ಮಾತಿಗೂ ಅವರು ಘೋಷಿಸುವ ಸ್ಕೀಮುಗಳಿಗೂ, ಕೃತಿಗೂ ಆ ಸ್ಕೀಮುಗಳ ನಿಜವಾದ ಅನುಷ್ಠಾನಕ್ಕೂ ಬಹಳಷ್ಟು ವ್ಯತ್ಯಾಸವಿದೆಯೆಂಬದು ಎದ್ದು ತೋರುವ ಅಂಶ.

ಇದರ ಅರ್ಥ ಅವರು ಒಳ್ಳೆಯ ಆಶಯದಿಂದ ತಮ್ಮ ಧೋರಣೆಗಳನ್ನು ನಿರೂಪಿಸುತ್ತಾ ಬರಲಿಲ್ಲವೆಂದಲ್ಲ. ತನ್ನ ಕಾಲದಲ್ಲಿ ಕಾಂಗ್ರೆಸ್ (ಐ) ಏನಾದರೂ ಮಾಡಿದೆ ಎಂದು ತೋರಿಸದೆ ಇದ್ದರೆ, ವಿರೇಂದ್ರ ಪಾಟೀಲ್ ಮತ್ತು ಬಂಗಾರಪ್ಪ ಮುಖ್ಯಮಂತ್ರಿಗಳ ಕಾಲದಲ್ಲಿ ಕಾಂಗ್ರೆಸ್(ಐ) ಪಕ್ಷ ಕಾರ್ಯಕ್ರಮದ ಮತ್ತು ಕಾರ್ಯದಕ್ಷತೆಯ ವಿಹೀನತೆಯಿಂದ ತೀವ್ರವಾಗಿ ಕಳೆದುಕೊಳ್ಳುತ್ತಾ ಬಂದ ಜನಾದರವನ್ನು ಪುನಃ ಪಡೆಯಲು ಸಾಧ್ಯವಾಗದು ಎಂಬ ವಿಷಯ ಮೊಯಿಲಿಯವರನ್ನು ಭಾಧಿಸುತ್ತಿದೆ. ಆದ್ದರಿಂದ ಅವರು ಹಲವಾರು ಕಾರ್ಯಕ್ರಮಗಳನ್ನು ಜನತೆಯ ಮುಂದೆ ಆಕರ್ಷಣೀಯವಾಗಿ ಇಡುತ್ತಾ ಬಂದಿದ್ದಾರೆ. ಈ ಲೇಖನದಲ್ಲಿ ನಾವು ಅವುಗಳನ್ನು ಒಂದೊಂದಾಗಿ ವಿಮರ್ಶೆಗೆ ಗುರಿ ಪಡಿಸಿದಾಗಲೇ ಹೇಳಿದ ಅಂಶ. ಮಾತಿಗೂ ಕೃತಿಗೂ ಬಹಳಷ್ಟು ಅಂತರವಿದೆ ಎಂಬ ಅಂಶ ಸ್ಪಷ್ಟವಾಗುವುದು.

ಮಾತು	ಕೃತಿ
1. ರಾಜ್ಯದ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕದ ಪಿಡುಗನ್ನು ಸಂಪೂರ್ಣವಾಗಿ ತೊಲಗಿಸಿ ಉನ್ನತ ವಿದ್ಯಾಕ್ಷೇತ್ರವನ್ನು ರಕ್ತ ಹೀರುವ ವಿದ್ಯಾ ವ್ಯಾಪಾರಿಗಳಿಂದ ಪಾರು ಮಾಡಿದ್ದೇವೆ.	ಧೈರ್ಯದಿಂದ ಸುಪ್ರೀಂ ಕೋರ್ಟಿನ ಆರಂಭದ ತೀರ್ಪಿನ ಹಿನ್ನೆಲೆಯಲ್ಲಿ ಸರ್ವಸಾಧಾರಣವಾಗಿ ಒಪ್ಪಲು ಸಾಧ್ಯವಿರುವ ಮಟ್ಟದಲ್ಲಿ ಫೀಸನ್ನು ಮೊಯಿಲಿ ಸರ್ಕಾರವು ಪ್ರಕಟಿಸಿತು. ಆದರೆ, ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜಿನ ಖಾಸಗಿಯವರು ತಮ್ಮ ಹಿತಗಳ (ಮಠಾಧೀಶರ ಸೇರಿರುವ) ಪ್ರಬಲ ಒತ್ತಡಕ್ಕೆ ಬಲಿಯಾಗಿ ಅದೇ ಸರಕಾರವು ಈ ಫೀಸನ್ನು 5 ವರ್ಷದಲ್ಲಿ 7 ಲಕ್ಷದವರೆಗೆ ಕಟ್ಟಬೇಕೆಂದು ಆಜ್ಞೆ ಹೊರಡಿಸಿತು. ಆದ ಕಾರಣ ಸಂಪೂರ್ಣವಾಗಿ ಕ್ಯಾಪಿಟೇಶನ್ ಶುಲ್ಕದ ಪಿಡುಗನ್ನು ತೊಡೆದು ಹಾಕಿದ್ದು ಕೇವಲ ಮಾತಿನಲ್ಲಿ ಮಾತ್ರ ಕೃತಿಯಲ್ಲಲ್ಲ. ಹಿಂದೆ "ಕ್ಯಾಪಿಟೇಶನ್" ಎಂಬ ಹೆಸರು ಇತ್ತು. "ಈಗ ಅದು ಫೀಸ್" ಮಾತ್ರ ಆಗಿದೆ.
2. ಮದ್ಯದ ದೊರೆಗಳ ಕಪಿಮುಷ್ಠಿಯಿಂದ ರಾಜ್ಯದ ಆಡಳಿತವನ್ನು ಸಂಪೂರ್ಣವಾಗಿ ವಿಮುಕ್ತಗೊಳಿಸಿ ಮದ್ಯದ ಮಾರಾಟವನ್ನು ಸಂಪೂರ್ಣವಾಗಿ ಸರ್ಕಾರದ ಸ್ವಾಮ್ಯಕ್ಕೆ ತೆಗೆದುಕೊಂಡು ಈ ಕ್ಷೇತ್ರದಲ್ಲಿ ನಡೆಯುತ್ತಿದ್ದ ಎಲ್ಲಾ ರೀತಿಯ ಶೋಷಣೆ ಅಕ್ರಮಗಳನ್ನು ಬಲಿಹಾಕಿದ್ದೇವೆ.	ಮಧ್ಯದ ವ್ಯಾಪಾರವನ್ನು ಸಂಪೂರ್ಣವಾಗಿ ಸರ್ಕಾರವೇ ವಹಿಸಿಕೊಂಡಿದೆ ಎನ್ನುವುದು ಸರಿ ಎನಿಸುವುದಿಲ್ಲ. ಕಾರಣ ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್ ನ್ಯಾಶನಲ್ ಸಂಸ್ಥೆಯೇನೋ ಈ ವ್ಯಾಪಾರವನ್ನು ತಾಂತ್ರಿಕವಾಗಿ ವಹಿಸಿಕೊಂಡಿದೆ. ಆದರೆ ವಾಸ್ತವವಾಗಿ ಈ ಸಂಸ್ಥೆ ಅನೇಕ ಖಾಸಗಿಯವರಿಗೆ ಸ್ಯಾಬೆಟ್ ಪುಟ 8ಕ್ಕೆ

ಅಸಂಘಟಿತ ಕಾರ್ಮಿಕರ ಅಭೂತಪೂರ್ವ ಚಳುವಳಿ

ಸೋಲದೆ ಸಾಗಿದೆ ಸಂಗ್ರಾಮ

1948ರ ಕನಿಷ್ಟ ಕೂಲಿ ಕಾಯ್ದೆ ಅಡಿಯಲ್ಲಿ ಬರುವ 67 ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಎಲ್ಲ ಅಸಂಘಟಿತ ಕಾರ್ಮಿಕರಿಗೆ ತಿಂಗಳಿಗೆ 1,800 ರೂ ಕ್ಕಿಂತ ಕಡಿಮೆಯಾಗದಂತೆ ವರಮಾನ ದೊರಕುವಂತೆ ಅವರ ಕೈಗಾರಿಕಾವಾರು ಕನಿಷ್ಟ ವೇತನವನ್ನು ನಿಗದಿಪಡಿಸಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಸಿಐಟಿಯು ನವೆಂಬರ್ 22 ರಿಂದ ವಿಧಾನಸೌಧದ ಎದುರು ಆರಂಭಿಸಿರುವ ಬೃಹತ್ ಸಾಮೂಹಿಕ ಧರಣಿ ಸತ್ಯಾಗ್ರಹ ಅನಿರ್ದಿಷ್ಟವಾಗಿ ಮುನ್ನಡೆದಿದೆ. ಬಿಜಾಪುರ, ಧಾರವಾಡ, ಬಳ್ಳಾರಿ, ತುಮಕೂರು, ಬೆಂಗಳೂರು, ಮಂಗಳೂರು ಮೊದಲಾದ ಜಿಲ್ಲೆಗಳಿಂದ ಆಗಮಿಸಿರುವ ಎರಡು ಸಾವಿರಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರು ಅಂಜದೆ, ಅಳುಕದೆ, ಬೆಂಗಳೂರಿನ ಚಳಿಯನ್ನು ಸಹಿಸಿಕೊಂಡು ಕಬ್ಬನ್ ಪಾರ್ಕಿನಲ್ಲಿ ಬಿಡಾರ ಹೂಡಿರುವುದು ಆಡಳಿತ ನಡೆಸುವವರ ಹುಬ್ಬೇರಿಸಿದೆ. "ಗೆದ್ದರೆ ಮನೆಗೆ, ಸೋತರೆ ಜೈಲಿಗೆ" ಎಂಬ ಸತ್ಯಾಗ್ರಹಿಗಳ ದಿಟ್ಟ ನಿಲುಮೆ ಮಂತ್ರಿಗಳನ್ನು ಸಹಜವಾಗಿಯೇ ಬೆರಗುಗೊಳಿಸಿದೆ.

ಅಸಂಘಟಿತ ಕಾರ್ಮಿಕರ ಈ ಅಭೂತಪೂರ್ವ ಚಳುವಳಿಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಸೂರ್ಯನಾರಾಯಣ ರಾವ್ ಅವರು "ರಾಜ್ಯದ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರಿಗೆ ಅವರ ಮಂತ್ರಿ ಮಂಡಳದ ಒಳಗಿನ ಕಿತ್ತಾಟದಿಂದಾಗಿ ರಾಜ್ಯದ ಅಸಂಖ್ಯಾತ ಅಸಂಘಟಿತ ಕಾರ್ಮಿಕರ ಕೂಗು ಕೇಳಲು ಪುರುಸೊತ್ತಿಲ್ಲ. ಬಾಯ್ತೆರೆದರೆ ಬಡವರ ಬಗ್ಗೆ ಮಾತನಾಡುವ ಕಾಂಗ್ರೆಸ್ (ಐ) ಪಕ್ಷದ ಸರ್ಕಾರ ಅಸಂಘಟಿತ ಕಾರ್ಮಿಕರಿಗೆ ಬಡತನದ ರೇಖೆಗಿಂತ ಕೆಳಮಟ್ಟದ ಕನಿಷ್ಟ ಕೂಲಿಯನ್ನು ನಿಗದಿಪಡಿಸಿರುವ ಮರ್ಮವೇನು?" ಎಂದು ಕೇಳಿದರು. ರಾಜ್ಯದ 50 ಲಕ್ಷಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರ ಜೀವನದಲ್ಲಿ ಬದಲಾವಣೆಯನ್ನು ತರಬಲ್ಲ ಈ ಚಳುವಳಿಯನ್ನು, ಎಲ್ಲ ಅಡ್ಡಿ ಆತಂಕಗಳನ್ನು ಎದುರಿಸಿ, ಯಶಸ್ವಿಗೊಳಿಸಬೇಕೆಂದು ಅವರು ಸತ್ಯಾಗ್ರಹಿಗಳಿಗೆ ಕರೆ ನೀಡಿದರು.

ಇದೇ ಸಂದರ್ಭಧಲ್ಲಿ ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ವಿ.ಜೆ.ಕೆ. ನಾಯರ್ ಅವರು ಬರೆದ "ಕರ್ನಾಟಕದಲ್ಲಿ ಕನಿಷ್ಟ ಕೂಲಿ" ಎಂಬ ಕಿರು ಪುಸ್ತಕವನ್ನು ಬಿಡುಗಡೆ ಮಾಡಿದರು.

-- ನಿತ್ಯಾನಂದಸ್ವಾಮಿ

ಕಾಂ. ವಿ.ಜೆ.ಕೆ.ನಾಯರ್ ಅವರು ಮಾತನಾಡಿ "ಕಾನೂನಿನ ಪ್ರಕಾರ ಕಾಲಕಾಲಕ್ಕೆ ಕನಿಷ್ಟ ವೇತನ ದರಗಳನ್ನು ಪರಿಷ್ಕರಿಸುವ ಬದಲು ಕೂಲಿದರಗಳನ್ನು ಕಡಿಮೆ ಮಾಡುವುದೇ ರಾಜ್ಯದ ಕಾಂಗ್ರೆಸ್ (ಐ) ಸರ್ಕಾರದ ಧೋರಣೆಯಾಗಿದೆ" ಎಂದು ಹೇಳಿದರು. ಗಾರ್ಮೆಂಟ್ಸ್ ಮತ್ತು ಟೈಲರಿಂಗ್ ಕೈಗಾರಿಕೆಯಲ್ಲಿ ದಿನಗೂಲಿಯನ್ನು 3 ರೂ. ಕಡಿಮೆ ಮಾಡಲಾಗಿದೆ. ಕಾಫಿ ಕ್ಯೂರಿಂಗ್‌ನಲ್ಲಿ ರೂ. 5.98 ಕಡಿಮೆ ಮಾಡಲು ಉದ್ದೇಶಿಸಲಾಗಿದೆ. ಊಟ ಒದಗಿಸುವ ನೆವ ತೋರಿಸಿ ಹೋಟೆಲ್ ಕಾರ್ಮಿಕರ ವೇತನವನ್ನು ಕಡಿತ ಮಾಡಲು ಆಲೋಚಿಸಲಾಗಿದೆ. ಕನಿಷ್ಟ ಕೂಲಿ ಸಲಹಾ ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿದ 23.50 ರೂ. ಕನಿಷ್ಟ ಕೂಲಿಯನ್ನು ಕೈಬಿಟ್ಟು ತೋಟ ಕಾರ್ಮಿಕರಿಗೆ ಕೇವಲ ರೂ. 19 ಮತ್ತು ಬೀಡಿ ಕಾರ್ಮಿಕರಿಗೆ ಕೇವಲ ರೂ. 19.65 ಕನಿಷ್ಟ ಕೂಲಿಯನ್ನು ನಿಗದಿಪಡಿಸಿದ್ದು ಬಂಗಾರಪ್ಪ ಸರ್ಕಾರ ಎಂದು ನೆನಪಿಸಿದರು. ಕನಿಷ್ಟ ವೇತನವನ್ನು ನಿಗದಿಪಡಿಸುವ ವೈಜ್ಞಾನಿಕ ಕ್ರಮವನ್ನು ವಿವರಿಸುತ್ತಾ ಇಂದು ಗ್ರಾಹಕ ಬೆಲೆ ಸೂಚ್ಯಾಂಕದ 1,309 ಪಾಯಿಂಟುಗಳಿಗೆ ರೂ. 69 ರ ದರದಲ್ಲಿ ತಿಂಗಳಿಗೆ 1,800 ರೂ. ಕನಿಷ್ಟ ವೇತನ ಮತ್ತು ಮೇಲಿನ ಪ್ರತಿಯೊಂದು ಪಾಯಿಂಟಿಗೆ 5 ಪೈಸೆ ದರದಲ್ಲಿ ತುಟ್ಟಿ ಭತ್ಯೆ ನಿಗದಿಯಾಗಿ ಜಾರಿಯಾಗದೆ ಕರ್ನಾಟಕ ರಾಜ್ಯದ ಪ್ರಗತಿ ಸಾಧ್ಯವಿಲ್ಲ ಎಂದು ಹೇಳಿದರು. ಕಬ್ಬನ್ ಪಾರ್ಕಿನಲ್ಲಿ ಒಲೆ ಹೂಡಿ, ಅಡಿಗೆ ಮಾಡಿಕೊಂಡು ಹಗಲು ರಾತ್ರಿ ನಡೆಯುತ್ತಿರುವ ಈ ಸತ್ಯಾಗ್ರಹ ಬೆಂಗಳೂರು ನಿವಾಸಿಗಳಲ್ಲಿ ಕುತೂಹಲವನ್ನು ಹುಟ್ಟಿಸಿದೆ. ಅಸಂಘಟಿತ ಕಾರ್ಮಿಕರ ಬೇಡಿಕೆಗಳನ್ನು ಬೆಂಬಲಿಸಿ ನವೆಬರ್ 24, 1993 ರಂದು ಕನ್ನಡ ಪ್ರಭ ದಿನ ಪತ್ರಿಕೆಯ ಬರೆದ ಸಂಪಾದಕೀಯದಲ್ಲಿ "ಅಸಂಘಟಿತ ಕಾರ್ಮಿಕರು ಇಂಥ ಬೇಡಿಕೆಗಳನ್ನು ಮುಂದಿಟ್ಟು ಸಾಮೂಹಿಕವಾಗಿ ಸತ್ಯಾಗ್ರಹದಂಥ ಒಂದು ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದೇ ಕುತೂಹಲಕಾರಿ" ಎಂದು ಸತ್ಯಾಗ್ರಹಿಗಳ ಪರವಾಗಿ ಕಾಮ್ರೇಡ್ ಎಸ್. ಸೂರ್ಯನಾರಾಯಣ ರಾವ್ ಅವರ ನೇತೃತ್ವದಲ್ಲಿ ವಿ.ಜೆ.ಕೆ. ನಾಯರ್, ನಿತ್ಯಾನಂದ ಸ್ವಾಮಿ, ಮಹಮ್ಮದ್ ದಸ್ತಗೀರ್ ಮತ್ತು ವಿ.ಜಿ.ಮಾಗಿನಹಳ್ಳಿ ಅವರನ್ನು ಒಳಗೊಂಡ ನಿಯೋಗವು ರಾಜ್ಯ ಕಾರ್ಮಿಕ ಮಂತ್ರಿ ಹಾಗೂ ಜವಳಿ ಮಂತ್ರಿಗಳನ್ನು ಕಂಡು ಮನವಿ ಸಲ್ಲಿಸಿದೆ. ಕನಿಷ್ಟ ವೇತನ ನಿಗದಿ ಪಡಿಸುವ ಕುರಿತು ಚರ್ಚಿಸಲು ನವೆಂಬರ್ 25,1993 ರಂದು ಸಭೆ ಕರೆಯುವುದಾಗಿ ಸರ್ಕಾರದ ಪರವಾಗಿ ಕಾರ್ಮಿಕ ಮಂತ್ರಿ ಬ್ಲೇಸಿಯಸ್ ಡಿಸೋಜ ಭರವಸೆ ನೀಡಿದ್ದಾರೆ.

ಕಾರ್ಮಿಕ ಮಂತ್ರಿಗಳು ಕರೆದ ಸಭೆಯಲ್ಲಿ ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಮತ್ತು ಕಾರ್ಮಿಕ ಆಯುಕ್ತರು ಹಾಜರಿದ್ದರು. ಸಿಐಟಿಯು ಪದಾಧಿಕಾರಿಗಳಾದ ಸೂರ್ಯನಾರಾಯಣರಾವ್, ವಿ.ಜೆ.ಕೆ.ನಾಯರ್, ಎನ್.ಕೆ. ಉಪಾಧ್ಯಾಯ, ಸಿ. ನಂಜುಂಡಪ್ಪ ಮಹಮ್ಮದ್ ದಸ್ತಗೀರ್, ಕೆ.ಎಸ್. ಸುಬ್ರಮಣ್ಯ ಮತ್ತು
ಪುಟ 8ನೋಡಿ

ಡಿಸೆಂಬರ್ 3ರಿಂದ 9 ವಾರಾಚರಣೆ "ಡಂಕೆಲ್ಲ"ನನ್ನು ನೇಣು ಹಾಕಿ!

ಡಂಕೆಲ್ಲನ ಪ್ರಸ್ತಾಪಗಳ ಕರಡಿಗೆ ಡಿಸೆಂಬರ್ 15 ರಂದು ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಕೇಂದ್ರ ಸರಕಾರ ಸಹಿ ಹಾಕಲಿದೆ. ಆ ಮುಖಾಂತರ, ಭಾರತದ ಸಾರ್ವಭೌಮತೆಯನ್ನು, ರಾಷ್ಟ್ರದ ರೈತ, ಕೃಷಿ ಕೂಲಿಕಾರ, ಕಾರ್ಮಿಕ, ನೌಕರರ ಎಲ್ಲಾ ಹಕ್ಕುಗಳನ್ನು ಸಾಮ್ರಾಜ್ಯಶಾಹಿ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್‌ನ ಪಾದದ ಮುಂದಿಟ್ಟು ಕಾಂಗ್ರೆಸ್ ಆಡಳಿತೆಯವನ್ನು ಮುಂದುವರಿಸಿ ಬೇಡಿಕೊಳ್ಳಲಿದ್ದಾರೆ.

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ, ಈ ಶರಣಾಗತಿಯ ವಿರುದ್ಧ ಡಿಸೆಂಬರ್ 3 ರಿಂದ 9 ನೇ ತಾರೀಖಿನವರೆಗೆ ರಾಷ್ಟ್ರಾದ್ಯಂತ ಪ್ರತಿಭಟನೆ ನಡೆಸಲು ಕರೆ ಕೊಟ್ಟಿದೆ.

ಆ ಹಿನ್ನೆಲೆಯಲ್ಲಿ ವೇದಿಕೆಯ ರಾಜ್ಯ ಘಟಕ ಸಭೆ ಸೇರಿ ಡಿಸೆಂಬರ್ 3 ರಿಂದ 8 ರವರೆಗೆ ಎಲ್ಲಾ ತಾಲೂಕು, ಜಿಲ್ಲಾ ಕೇಂದ್ರಗಳಲ್ಲಿ ಧರಣಿ, ಪ್ರದರ್ಶನ, ಬಹಿರಂಗ ಸಭೆಗಳನ್ನು ನಡೆಸಿ ಡಂಕೆಲ್ ಪ್ರತಿಕೃತಿಯನ್ನು ಸಾರ್ವಜನಿಕ ಸ್ಥಳಗಳಲ್ಲಿ ನೇಣುಹಾಕಬೇಕು, ಡಂಕೆಲ್ ಕರಡು ಪ್ರತಿಯನ್ನು ಸುಟ್ಟು ಹಾಕಬೇಕು, ಡಿಸೆಂಬರ್ 9ರಂದು ರಾಜ ಭವನದ ಮುಂದೆ ಪ್ರತಿಭಟನೆ ನಡೆಸ ಬೇಕೆಂದು ಕರೆ ಕೊಟ್ಟಿದೆ.

ಈ ವೇದಿಕೆಯಲ್ಲಿ ಹಿಂದೆ ಪಾಲುಗೊಂಡ ಎಲ್ಲಾ ಸಾಮೂಹಿಕ ಸಂಘಟನೆಗಳ ಜೊತೆ, ರಾಜ್ಯ ರೈತ ಸಂಘದ ಘಟಕಗಳನ್ನೂ ಆಹ್ವಾನಿಸಿ, ವ್ಯಾಪಕವಾಗಿ ರಾಜ್ಯದಾದ್ಯಂತ ಪ್ರತಿ ತಾಲೂಕಿನಲ್ಲೂ ಹತ್ತಾರು ಸಾವಿರ ಕರಪತ್ರಗಳನ್ನು ಹಾಕಿ ದೊಡ್ಡ ಸಂಖ್ಯೆಯಲ್ಲಿ ಡಂಕೆಲ್ ಕರಡನ್ನು ವಿರೋಧಿಸಿ ಕೇಂದ್ರ ಸರಕಾರಕ್ಕೆ ಮನವಿ ಕಳಿಸಬೇಕೆಂದು ಕರೆ ಕೊಡಲಾಯಿತು.

ಚಂದ್ರಶೇಖರ ಬಾಳೆ
ಸಾಮೂಹಿಕ ಸಂಘಟನೆಗಳ ವೇದಿಕೆಯ ಪರವಾಗಿ

ಮಧ್ಯಪ್ರದೇಶ: ಸಿಪಿಐ(ಎಂ) ಮೊದಲ ಬಾರಿಗೆ ವಿಧಾನ ಸಭೆ ಪ್ರವೇಶಿಸುವ ಸಾಧ್ಯತೆ

ಮಧ್ಯಪ್ರದೇಶ ಬಹುಪಾಲು ಹಿಂದೆ ರಾಜ-ಮಹಾರಾಜರ ಆಳ್ವಿಕೆಯಲ್ಲಿದ್ದ ಪ್ರದೇಶಗಳಿಂದ ಕೂಡಿದ ಹಿಂದುಳಿದ ರಾಜ್ಯ. ಹಿಂದಿನ ಜನಸಂಘ, ಈಗಿನ ಬಿಜೆಪಿ ಈ ಹಿಂದುಳಿಕೆಯ ಪೂರ್ಣ ಪ್ರಯೋಜನ ಪಡೆದು ತಮ್ಮ ಚಟುವಟಿಕೆಗಳ ಕೇಂದ್ರವನ್ನಾಗಿಸಿಕೊಂಡ ರಾಜ್ಯ. ಆದರೆ ಇಲ್ಲಿಯೂ ಎಡ ಆಂದೋಲನ ತನ್ನ ಪ್ರಭಾವವನ್ನು ಈಗ ಬೀರಲಾರಂಭಿಸಿದೆ. ಇದರ ಪರಿಣಾಮವಾಗಿ ಈ ಬಾರಿ ಸಿಪಿಐ(ಎಂ) ಮೊದಲ ಬಾರಿಗೆ ಭಾರತದ ಈ ಅತೀ ದೊಡ್ಡ ರಾಜ್ಯದಲ್ಲಿ ಮೊದಲ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿ ಇದುವರೆಗೆ ತಾವೇ ತಾವಾಗಿ ಮೆರೆಯುತ್ತಿರುವ ಪ್ರತಿಗಾಮಿಗಳಿಗೆ ಸವಾಲು ಹಾಕುವ ಸಾಧ್ಯತೆಯಿದೆ.

ರೇವಾ ಜಿಲ್ಲೆ- ಮತ್ತೆ ಎಡ ಆಂದೋಲನದ ಪ್ರಭಾವ

ಈ ಜಿಲ್ಲೆಯ 7 ಕ್ಷೇತ್ರಗಳಲ್ಲಿ 5 ರಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಐವತ್ತರ ದಶಕದಲ್ಲಿ ಸೋಶಲಿಸ್ಟರು ಪ್ರಭಾವಶಾಲಿಯಾಗಿದ್ದ ಪ್ರದೇಶ ಇದು. ಅವರು ನಡೆಸಿದ ಭೂ ಹೋರಾಟಗಳಿಂದ ಅದುವರೆಗೆ ಸ್ಥಳೀಯ ರಾಜರ ಅಧೀನದಲ್ಲಿದ್ದ ಭೂಮಿಯ ವಿತರಣೆಯಾಯಿತು. ಸಿಪಿಐ ಕೂಡಾ ಅಲ್ಲಲ್ಲಿ ಪ್ರಭಾವ ಹೊಂದಿತು. ಆದರೆ ಕ್ರಮೇಣ ಸೋಶಲಿಸ್ಟರು ಹರಿದು ಹಂಚಿ ವಿಘಟನೆ ಹೊಂದಿದರು. ಸಿಪಿಐ ಕೂಡ ದುರ್ಬಲಗೊಂಡಿತು. ಆಗ ಕಾಂಗ್ರೆ, ಬಿಜೆಪಿಗಳನ್ನು ಎದುರಿಸುವ ಪ್ರಗತಿಪರ ಶಕ್ತಿಗಳಿಲ್ಲದೆ ಬಿ.ಎಸ್.ಪಿ. ತನ್ನ ಜಾತಿವಾದಿ ಘೋಷಣೆಗಳಿಂದ ಪ್ರವೇಶಿಸಿತು. ಕಳೆದ ಬಾರಿ ಲೋಕಸಭಾ ಸ್ಥಾನವನ್ನೂ ಗೆದ್ದಿತು ಕೂಡಾ. ಆದರೆ ಈಗ ಸಿಪಿಐ(ಎಂ) ಇಡೀ ರಾಜ್ಯದಲ್ಲಿ ಒಂದು ಎಡಶಕ್ತಿಯಾಗಿ ಬೆಳೆದು ಬರುತ್ತಿದೆ. ಐವತ್ತರ ದಶಕದಲ್ಲಿ ಭೂ ಹೋರಾಟ ನಡೆಸಿದ ಇಲ್ಲಿಯ ಜನಪ್ರಿಯ ಸೋಶಲಿಸ್ಟ್ ಮುಖಂಡ ಯಮುನಾ ಪ್ರಸಾದ್ ಶಾಸ್ತ್ರಿಯವರು ಸಿಪಿಐ(ಎಂ) ಸೇರಿದ ಬಗ್ಗೆ ಕಳೆದ ವರ್ಷ 'ಐಕ್ಯರಂಗ'ದಲ್ಲಿ ನೀವು ಓದಿರುವಿರಿ. ಅವರ ಜತೆಗೆ ಇನ್ನೂ ಹಲವು ಅವರ ಮಾಜಿ ಸೋಶಲಿಸ್ಟ್ ಸಹಯೋಗಿಗಳು ಸಿಪಿಐ(ಎಂ) ಸದಸ್ಯರಾದರು. ಐದು ಸ್ಥಾನಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳಾಗಿದ್ದಾರೆ.

ಐದರಲ್ಲಿ ಸಿಪಿಐ(ಎಂ) ಗೆಲ್ಲುವ ಅತಿ ಹೆಚ್ಚು ಸಾಧ್ಯತೆಯಿರುವ ಕ್ಷೇತ್ರ ಸಿರ್‌ಮೋರ್. ಇಲ್ಲಿ ಅಭ್ಯರ್ಥಿ ರಾಮ್ ಲಖನ್ ಶರ್ಮಾ ಅತಿ ಜನಪ್ರಿಯ ರೈತ ಮುಖಂಡ. ಹರಿಜನರಿಗಾಗಿ ಭೂ ಹೀನರಿಗಾಗಿ ಹಲವಾರು ಹೋರಾಟಗಳನ್ನು ನಡೆಸಿದವರು. ಇನ್ನೊಂದು ಕ್ಷೇತ್ರ ರೇವಾ. ಹಿಂದೆ ಯಮುನಾ ಪ್ರಸಾದ್ ಶಾಸ್ತ್ರಿಯವರು ಅಲ್ಲಿಯ 'ಮಹಾರಾಜ', 'ಮಹಾರಾಣಿ'ಯರನ್ನು ಸೋಲಿಸಿ ಲೋಕಸಭೆಯನ್ನು ಪ್ರವೇಶಿಸಲು ಅವಕಾಶ ಮಾಡಿಕೊಟ್ಟ ಕ್ಷೇತ್ರದಲ್ಲಿದೆ.

ಗ್ವಾಲೇರ್ - ಕೆಂಬಾವುಟ ಒಂದಿಂಚೂ ಕೆಳಗಿಳಿಯುವುದಿಲ್ಲ

ಸಿಪಿಐ(ಎಂ) ಮಧ್ಯ ಪ್ರದೇಶದ ಈ ಕೈಗಾರಿಕಾ ನಗರದಲ್ಲಿ ಚುನಾವಣೆಗೆ ಮೊದಲ ಬಾರಿ ಸ್ಪರ್ಧಿಸುತ್ತಿದೆ. ಆದರೆ 1986 ರಿಂದಲೇ ಕಾರ್ಮಿಕರ ನಡುವೆ ದುಡಿಯುತ್ತಿರುವ, ಕಾರ್ಮಿಕರ ಆದರ ಗಳಿಸಿರುವ ಪಕ್ಷ. ಇಲ್ಲಿ ಪಕ್ಷದ ಅಭ್ಯರ್ಥಿ ಬಾದಲ್ ಸರೋಜ್. ಇವರು ರಾಜ್ಯ ಸಿಐಟಿಯು ಕಾರ್ಯದರ್ಶಿ ಕೂಡಾ.

ಗ್ವಾಲೇರ್ ಸರ್ಕಾರೀ ಪ್ರಚಾರದಲ್ಲಿ ಕೋಟೆಗಳು, ಅರಮನೆಗಳ 'ಭವ್ಯ'ನಗರ ಆದರೆ ವಾಸ್ತವವಾಗಿ ಹೊಸ ಆರ್ಥಿಕ ನೀತಿಯ ಪರಿಣಾಮಗಳು, ಅದಕ್ಕೆ ಬಿಜೆಪಿಯ ಬೆಂಬಲ ಎದ್ದು ಕಾಣುವ ನಗರ. ಬಾದಲ್ ಸರೋಜ್ ವರ್ಣಿಸಿದಂತೆ ಈಗ ಇಲ್ಲಿ ಕಾರ್ಖಾನೆಗಳ ಹೊಗೆಳಿಕೆಗಳಿಂದ ಹೊಗೆಯುಗುಳುವುದಿಲ್ಲ. ಮುಚ್ಚಿದ ಮಿಲ್ಲುಗಳ ಕಾರ್ಮಿಕರ, ಹಸಿವಿನಿಂದ ಆತ್ಮಹತ್ಯೆ ಮಾಡಿಕೊಂಡ ಅವರ ಕುಟುಂಬದವರ ಸುಡುವ ಹೆಣಗಳಿಂದ ಹೊಗೆ ಬರುತ್ತಿದೆ. ಕಾಂಗ್ರೆ, ಬಿಜೆಪಿಗಳು ಈ ಬಗ್ಗೆ "ನಿರ್ಲಿಪ್ತ"ರಾಗಿದ್ದಾರೆ. ಆದರೆ ಸಿಪಿಐ(ಎಂ) ನೇತೃತ್ವದ ಸಿಐಟಿಯು ಹೋರಾಟದ ಕಣದಲ್ಲಿದೆ. ಬಿರ್ಲಾ ಒಡೆತನದ ಜೆಯಾಜಿ ಕಾಟನ್ ಮಿಲ್‌ನ ಕ್ಲೋಶರ್ ವಿರುದ್ಧ ಕಳೆದ 17 ತಿಂಗಳಿಂದ ಹೋರಾಟದಲ್ಲಿ ತೊಡಗಿದೆ. 8,500 ಕಾರ್ಮಿಕರು ಬೀದಿ ಪಾಲಾಗಿದ್ದಾರೆ. 1987 ಹಾಗೂ 1990ರಲ್ಲಿ ಕಾರ್ಮಿಕರನ್ನು ಬೀದಿಗೆಸೆಯುವ ಬಿರ್ಲಾಗಳ ಪ್ರಯತ್ನ ಫಲಿಸಲಿಲ್ಲ. ಆದರೆ 1991ರಲ್ಲಿ 50 ಕೋಟಿ ರೂಗಳ 'ವಿದ್ಯುತ್ ಬಿಲ್ ಕಟ್ಟಲು ಆಗುವುದಿಲ್ಲ' ಎಂದು ಹೇಳಿ ಕಾರ್ಖಾನೆಯನ್ನು ಬಿರ್ಲಾಗಳು ಮುಚ್ಚಿದರು. ಆದರೆ ವಾಸ್ತವ ಸಂಗತಿಯೆಂದರೆ ಬಿಜೆಪಿ ನಿಧಿಗೆ 10 ಕೋಟಿ ರೂ ಕೊಟ್ಟುದಕ್ಕೆ ಪ್ರತಿಫಲವಾಗಿ ಬಿಜೆಪಿ ವಿದ್ಯುತ್ ಬಾಕಿಯನ್ನು ಮಾಫಿಮಾಡಿ 1 ಕೋಟಿ ರೂ ಗಳಿಸಿತು. ಅದೇ ನೆವದಲ್ಲಿ ಮಿಲ್ಲನ್ನು ಮುಚ್ಚಲಾಯಿತು. ಕಾರ್ಮಿಕರೆದುರು ಬಿಜೆಪಿಯ ವರ್ಗ ಹಿತಾಸಕ್ತಿ ಬಟ್ಟಬಯಲಾಯಿತು.

ಕಳೆದ 17 ವರ್ಷಗಳಲ್ಲಿ 15 ಕಾರ್ಮಿಕರು ಸತ್ತರು, 7 ಮಂದಿ ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡರು. ಈ ಹತಾಶೆಯ ನಡುವೆ ಅವರ ಬೆಂಬಲಕ್ಕೆ ನಿಂತದ್ದು ಸಿಐಟಿಯು ಮತ್ತು ಸಿಪಿಐ(ಎಂ) ಮಾತ್ರ. ಈಗ ವಿಧಾನಸಭೆಯಲ್ಲಿ ಕಾರ್ಮಿಕರ ಅಳಲಿಗೆ ದನಿನೀಡಲು ಹೋರಾಡುತ್ತಿದೆ. ಕಾಂಗ್ರೆ, ಬಿಜೆಪಿಗಳ ಭಾರಿ ಕಟೌಟುಗಳ ನಡುವೆ, ಭರ್ರನೆ ಓಡಾಡುತ್ತಿರುವ ಜೀಪ್, ಕಾರುಗಳ ನಡುವೆ ಬಾದಲ್ ಸರೋಜ್‌ರವರ ದ್ವಿಚಕ್ರ ವಾಹನ, ಸಣ್ಣ-ಸಣ್ಣ ಕೆಂಬಾವುಟಗಳು, 84 ಚುನಾವಣಾ ಸಮಿತಿಗಳಲ್ಲಿ ಕೆಲಸ ಮಾಡುತ್ತಿರುವ 600 ಕಾರ್ಯಕರ್ತರು ಕಾರ್ಮಿಕರ ನೋವಿಗೆ ದನಿ ನೀಡಲು ಯತ್ನಿಸುತ್ತಿದ್ದಾರೆ. ಅವರ ಪ್ರಯತ್ನಗಳಿಗೆ ಜನ ಕಿವಿಗೊಡುತ್ತಿದ್ದಾರೆ. ನವೆಂಬರ್ 20 ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಭಾಷಣಕ್ಕೆ ನೆರೆದ ಜನಸ್ತೋಮ ಇದಕ್ಕೆ ಸಾಕ್ಷಿ. ಭಯಗೊಂಡ ಪಟ್ಟಭದ್ರ ಹಿತಾಸಕ್ತಿಗಳ ನೆರವಿಗೆ ಜೆಯಾಜಿ ಮಿಲ್ಲಿನ ಆಡಳಿತವರ್ಗ ಧಾವಿಸಿದೆ. ಬಾದಲ್ ಸರೋಜ್‌ರವರೇ ಹೇಳಿರುವಂತೆ ಇಲ್ಲಿ ಗೆಲ್ಲಲಿ, ಸೋಲಲಿ ಕೆಂಬಾವುಟ ಮಾತ್ರ ಒಂದಿಂಚೂ ಕೆಳಗಿಳಿಯುವುದಿಲ್ಲ.

ಚಂಬಲ್ ಕಣಿವೆಯ ಸಬಾಲ್‌ಗಢ್ ಎದ್ದು ಕಾಣುತ್ತಿರುವ ಕುಡುಗೋಲು ಸುತ್ತಿಗೆ

ಸಿಪಿಐ(ಎಂ) ಬಲವಾದ ಸ್ಪರ್ಧೆ ನೀಡುತ್ತಿರುವ ಇನ್ನೊಂದು ಕ್ಷೇತ್ರ ರಾಜ್ಯದ ಪಶ್ಚಿಮ ಭಾಗದಲ್ಲಿ ಸಬಾಲ್‌ಗಢ್. ಒಂದೊಮ್ಮೆ ಡಕಾಯಿತರ ಬೀಡಾಗಿದ್ದ ಚಂಬಲ್ ಕಣಿವೆಯಲ್ಲಿದೆ. ಒಂದೊಮ್ಮೆ ಬಡ ಪ್ರದೇಶಯಾಗಿದ್ದ ಈ ಚಂಬಲ್ ನೀರಾವರಿ ಯೋಜನೆಯಿಂದಾಗಿ ಸಮೃದ್ಧಿ ಕಾಣುತ್ತಿರುವ ಪ್ರದೇಶ. ಆದರೆ ಈ ಸಮೃದ್ಧಿ ಕೇವಲ ಕೆಲವರ ಸೊತ್ತಾಗಿದೆ. ದೇಶದ ಇತರೆಡೆಗಳಂತೆ ಬಡರೈತರ, ಮಧ್ಯಮ ರೈತರಿಗೆ ನ್ಯಾಯ ದೊರಕಿಸಲು ಮುಂದೆ ಬಂದ ಕೆಂಬಾವುಟಕ್ಕೆ ಇಲ್ಲಿ ಬಹಳ ಗೌರವ ಇದೆ. ಇದಲ್ಲದೆ ಸಕ್ಕರೆ ಕಾರ್ಖಾನೆ, ಸುಣ್ಣದ ಕಲ್ಲುಗಣಿಗಳು, ಸಿಮೆಂಟ್ ಕಾರ್ಖಾನೆಗಳು ಇರುವ ಕ್ಷೇತ್ರ. ಸಿಐಟಿಯು ಈ ಉದ್ದಿಮೆಗಳ ಕಾರ್ಮಿಕರ ನಡುವೆ ಒಂದು ದೊಡ್ಡ ಶಕ್ತಿಯಾಗಿ ಬೆಳೆಯುತ್ತಿದೆ.

ಮೂವತ್ತರ ಹರೆಯದ ಅಶೋಕ್ ತಿವಾರಿ ಇಲ್ಲಿ ಪಕ್ಷದ ಅಭ್ಯರ್ಥಿ. ವಿದ್ಯಾರ್ಥಿ ದೆಸೆಯಲ್ಲಿ ಎಸ್.ಎಫ್.ಐ. ಮುಖಂಡರಾಗಿದ್ದ ಈಗ ಈತ ರಾಜ್ಯ ಕಿಸಾನ್ ಸಭಾದ ಕಾರ್ಯದರ್ಶಿ. ಕುಡುಗೋಲು ಸುತ್ತಿಗೆ ಎದ್ದು ಕಾಣುವಂತಹ ಪ್ರಚಾರ ಕಾರ್ಯ ನಡೆಯುತ್ತಿದೆ. ಸುರ್ಜಿತ್‌ರವರ ಭಾಷಣಕ್ಕೆ ಭಾರೀ ಸ್ಪಂದನ ದೊರೆಯಿತು. ಬಿಜೆಪಿ ಅಮೇರಿಕಾದ ಕೈಗೊಂಬೆ, ಅದರ ಹಿಂದೂರಾಷ್ಟ್ರ ಜನಗಳನ್ನು ಒಡೆಯುವ ಪಾತ್ರ, ಅದರ ಮಾತು ಕೇಳಿದ್ದರೆ ಹಜರತ್‌ಬಲ್ ಬಿಕ್ಕಟ್ಟು ವಿನಾಶಕಾರೀ ದಾರಿ ಹಿಡಿಯುತ್ತಿತ್ತು ಎಂದು ಹೇಳಿದ ಸುರ್ಜಿತ್ ಮಧ್ಯಪ್ರದೇಶದಲ್ಲಿ ಸಿಪಿಐ(ಎಂ) ಪರ್ಯಾಯ ರಚಿಸುವ ಶಕ್ತಿಯನ್ನು ಇನ್ನೂ ಹೊಂದಿಲ್ಲವಾದರೂ ಬಡವರ ಹಕ್ಕುಗಳನ್ನು ರಕ್ಷಿಸಬಲ್ಲಂತದ್ದು ಅದು ಮಾತ್ರ, ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ ವಿಧಾನಸಭೆಯಲ್ಲಿ ಕಾರ್ಮಿಕರ ದನಿ ಕೇಳಿಸುವಂತೆ ಮಾಡಿ ಎಂದರು.

ಮೊದಲೇ ಹೇಳಿದಂತೆ ರಾಜ್ಯದಲ್ಲಿ ಮೂಡಿಬರುತ್ತಿರುವ ಎಡಶಕ್ತಿಗಳನ್ನು ಪ್ರತಿನಿಧಿಸುತ್ತಿರುವ ಸಿಪಿಐ(ಎಂ) ಈ ಬಾರಿ ಮೊದಲಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಬಹುದು. ಆದರೆ ಪಕ್ಷದ ಮೊದಲ ಒತ್ತು ಈಗಲೂ ಸಾಮೂಹಿಕ ಸಂಘಟನೆಗಳನ್ನು ಬೆಳೆಸುವುದು, ಬಡರೈತರು, ಆದಿವಾಸಿಗಳು, ಕಾರ್ಮಿಕರ ನಡುವೆ ದುಡಿದು ಪ್ರತಿಗಾಮಿಗಳ ಕಪಿಮುಷ್ಠಿಯಲ್ಲಿರುವ ಈ ಪಾಳೆಯಗಾರೀ ಪ್ರಭಾವದ, ಹಿಂದುಳಿದ ರಾಜ್ಯದಲ್ಲಿ ಒಂದು ನೈಜ ಪರ್ಯಾಯವಾಗಿ ಮೂಡಿಬರುವುದು.

ಚುನಾವಣೆಯೋ ಮತಖರೀದಿಯೋ?

ಚುನಾವಣಾ ಆಯೋಗ ಚುನಾವಣಾ ವೆಚ್ಚದ ಮೇಲೆ ಹಾಕಿರುವ ಮಿತಿ ಕೇವಲ ಹೆಸರಿಗಷ್ಟೆ ಎಂಬುದು ಎಲ್ಲರಿಗೂ ಗೊತ್ತು. ಆದರೆ ಈ "ಮಿತಿ ಮೀರುವಲ್ಲಿ"ಯೂ ಕಾಂಗ್ರೆಸ್(ಐ), ಬಿಜೆಪಿ ನಡುವೆ ದೊಡ್ಡ ಸ್ಪರ್ಧೆ ನಡೆದಂತಿದೆ. ದಿಲ್ಲಿಯಲ್ಲಿ ದೇಶದ ಕೆಲವು ಕಾನೂನು ಪರಿಣತರು ಸೇರಿಕೊಂಡು ರಚಿಸಿಕೊಂಡ "ಇಂಡಿಪೆಂಡೆಂಟ್ ಇನಿಶಿಯೇಟಿವ್" ಎಂಬ ಹೆಸರಿನ ಸಂಸ್ಥೆ 60 ಚುನಾವಣಾ ಕ್ಷೇತ್ರಗಳಲ್ಲಿ ನಡೆಸಿದ ಚುನಾವಣಾ ವೆಚ್ಚದ ಲೆಕ್ಕ ಪರೀಕ್ಷೆ ನಡೆಸಿದೆ.

ದಿಲ್ಲಿಯ ಕಾಲ್ಕಾಜಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪೂರ್ಣಿಮಾ ಸೇಠಿಯ ಚುನಾವಣಾ ಖರ್ಚಿನ ವಿವರ ನೀಡುತ್ತಾ ಈ ಸಂಸ್ಥೆಯ ವರದಿ "ಮಧ್ಯಮ ವರ್ಗದ ಗುಂಪಿನಿಂದ ಬಂದಿದರೂ ಈ ಅಭ್ಯರ್ಥಿ ಮಾಡಿರುವ ಚುನಾವಣಾ ಖರ್ಚು ಈಗಾಗಲೇ 30 ಲಕ್ಷ ರೂ..... ... ಎಂದಿದೆ". ಕಟೌಟ್‌ಗಳು, ದೊಡ್ಡ ಬ್ಯಾನರುಗಳು, ಪೋಸ್ಟರುಗಳು, 30 ವಾಹನಗಳು. ಪ್ರತಿಯೊಂದಕ್ಕೆ ದಿನಕ್ಕೆ 750 ರೂ ಕೇವಲ ಪೆಟ್ರೋಲಿಗೇ ಖರ್ಚು. 200 "ಸ್ವಯಂ ಸೇವಕ"ರಿಗೆ ದಿನಕ್ಕೆ 200 ರೂ. ನಂತೆ ಸಂಬಳ. 10 ಚುನಾವಣಾ ಕಛೇರಿಗಳನ್ನು ನೋಡಿಕೊಳ್ಳುತ್ತಿರುವ 10 "ಸ್ವಯಂ ಸೇವಕ"ರಿಗೂ ದಿನಕ್ಕೆ ತಲಾ 200 ರೂ.ನಂತೆ ಸಂಬಳ. ಆಕೆಯ ಕಾಂಗ್ರೆ ಎದುರಾಳಿ ಸುಭಾಷ್ ಚೋಪ್ರಾ ಕೂಡಾ ಹಿಂದೆಬಿದ್ದಿಲ್ಲ. ದಿನಕ್ಕೆ 98,000 ರೂ.ನಂತೆ ಸುರಿದಿದ್ದಾರೆ ಎಂದು ಈ ವರದಿ ತಿಳಿಸಿದೆ.

ದಿಲ್ಲಿಯ ಮುಂದಿನ ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿರುವ ಬಿಜೆಪಿಯ ಎಂ.ಎಲ್.ಎ. ಖುರಾನಾರಿಗಾಗಿ 50 ಚುನಾವಣಾ ಕಛೇರಿಗಳು 30 ವಾಹನಗಳು, ನೂರಕ್ಕೂ ಹೆಚ್ಚು ಸಂಬಳದ "ಸ್ವಯಂ ಸೇವಕ"ರಿಗೆ ಪ್ರತಿ ದಿನ ರೂ. 50 ಸಾವಿರಕ್ಕೂ ಹೆಚ್ಚು ಖರ್ಚಾಗುತ್ತಿತ್ತು. ಅವರ ಕಾಂಗ್ರೆ ಎದುರಾಳಿ ಅಂಜರೀ ರಾಮ್ ಕೂಡಾ ಇದರಲ್ಲಿ ಎಳ್ಳಷ್ಟು ಹಿಂದೆಬಿದ್ದಿಲ್ಲ.

ಈ ಮತ ಖರೀದಿಯ ಸ್ಪರ್ಧೆಯ ಹೊರಗುಳಿಯಲು ನಿರ್ಧರಿಸಿದವರೆಂದರೆ ಎಡಪಕ್ಷಗಳು ಮಾತ್ರ.

ಕಲಬುರ್ಗಿ: ನೀರಾವರಿ ಯೋಜನೆ ಸಂಪನ್ಮೂಲಗಳು ವಿಶ್ವಬ್ಯಾಂಕ್‌ಗೆ ಕೈಯೊಡ್ಡುವ ಅಗತ್ಯವಿಲ್ಲ

29.10.1993 ರಂದು ಗುಲ್ಬರ್ಗಾದಲ್ಲಿ ನಡೆದ ನೀರಾವರಿ ಯೋಜನೆಗಳ ಕುರಿತ ಸಮ್ಮೇಳನ ಅಂಗೀಕರಿಸಿದ ನಿರ್ಣಯ

ಹಣದ ಅಭಾವದಿಂದಾಗಿ ನೀರಾವರಿ ಯೋಜನೆಗಳು ಕಾರ್ಯಗತವಾಗುತ್ತಿಲ್ಲ. ಪೂರ್ಣಗೊಳ್ಳುತ್ತಿಲ್ಲೆಂಬ ಕುಂಟು ನೆವ ಮಂತ್ರಿಗಳಿಂದಲೂ ಸರಕಾರದಿಂದಲೂ ಕೇಳಿಬರುತ್ತಿದೆ. ವಾಸ್ತವ ಪರಿಸ್ಥಿತಿ ತದ್ವಿರುದ್ಧವಾಗಿದೆ. ಹಣದ ಕೊರತೆಯ ಬದಲಾಗಿ ರಾಜಕೀಯ ಒತ್ತಡಗಳಿಗೆ ಮಣಿಯುತ್ತ, ದೃಢ ನಿರ್ಧಾರ ಕೈಗೊಳ್ಳಲು ಹಿಂಜರಿಯುತ್ತಿರುವುದೇ ಮುಖ್ಯ ಕಾರಣವಾಗಿದೆ.

ನೀರಾವರಿ ಯೋಜನೆಗಳಿಗೆ ಈ ರೀತಿ ಹಣ ಸಂಗ್ರಹಿಸಬಹುದು.

1) ಮತಗಳಿಕೆಗಾಗಿ ಕೈಕೊಳ್ಳುವ ಅಗ್ಗದ ಯೋಜನೆಗಳನ್ನು ಕೈ ಬಿಟ್ಟು ಹಣ ಉಳಿಸುವುದು.

2) ಕಪ್ಪು ಹಣ ಹೊರತೆಗೆಯುವುದು, ಕರತಪ್ಪಿಸಿಕೊಳ್ಳುವ ಕಪ್ಪು ಹಣ ಹೊಂದಿದವರಿಂದ ಬಿಡದೆ ಕರ ವಸೂಲಿ ಮಾಡುವುದು.

3) ಅ ಪ್ರತ್ಯಕ್ಷ ತೆರಿಗೆಗಳಿಂದ ರೈತರನ್ನು ಹಿಂಡುವ ಬದಲಾಗಿ ಶ್ರೀಮಂತ ಬಂಡವಾಳಿಗರ ಮೇಲೆ ನೇರ ಕರಭಾರ ಹೇರುವುದು.

4) ಸಂಪನ್ಮೂಲ ಹಂಚಿಕೆಯಲ್ಲಿ ವಿಕೇಂದ್ರೀಕರಣ ಮಾಡಿ ರಾಜ್ಯದಲ್ಲಿ ಸಂಗ್ರಹವಾಗುವ ಹಣದಲ್ಲಿ ಶೇ. 75 ರಷ್ಟು ಪಾಲನ್ನು ಕೇಂದ್ರ ಸರಕಾರ ರಾಜ್ಯಗಳಿಗೆ ಕೊಡಮಾಡುವುದು. ಅದರಿಂದ ನೀರಾವರಿ ಯೋಜನೆಗಳಿಗೆ ರಾಜ್ಯ ಸರಕಾರ ಹೆಚ್ಚು ಹಣ ಒದಗಿಸಬಹುದು.

5) ಸರಕಾರಿ ಆಡಳಿತೆಯಲ್ಲಿ ಮಿತವ್ಯಯ

6) ರಾಜಕಾರಣಿಗಳು, ಅಧಿಕಾರಿಗಳು, ಕಂಟ್ರಾಕ್ಟರುಗಳು ಸೇರಿ ಅದಕ್ಕಿಂತ ಹೆಚ್ಚು ನುಂಗುವುದನ್ನು ತಡೆದು, ನೂರಕ್ಕೆ ನೂರರಷ್ಟು ಹಣ ಯೋಜನೆಗಾಗಿಯೇ ಖರ್ಚಾಗುವಂತೆ ಮಾಡುವುದು.

7) ನೀರಾವರಿ ಯೋಜನೆಗಳು 30-40 ವರ್ಷ ಕಾಲ ವಿಳಂಬವಾಗುವುದನ್ನು ತಡೆದು ನಿರ್ಧರಿಸಲ್ಪಟ್ಟ ಕಾಲಾವಧಿಯಲ್ಲೇ ಮುಗಿಸುವ ನಿರ್ಧಾರ ಮಾಡಬೇಕು. ಆ ಮೂಲಕ ಹೆಚ್ಚುವರಿ ಖರ್ಚನ್ನು ತಡೆಹಿಡಿಯಬಹುದು.

8) ಆಯಾ ಯೋಜನೆಯ ಕಾಡು ಪ್ರದೇಶದಲ್ಲಿ ಕಿಸಾನ ವಿಕಾಸ ಪತ್ರ. ಜವಾಹರ ರೋಜಗಾರ ಯೋಜನೆಯಡಿಯಲ್ಲಿ ಸಂಗ್ರಹವಾಗುವ ಹಣ ನೀರಾವರಿಗೆ ಸಲ್ಲಬೇಕು.

9) ಯಾವುದೇ ಕರಾರುಗಳಿಲ್ಲದೆ ರೈತರಿಂದ ಬಾಂಡ್ ಮೂಲಕ ಹಣ ಸಂಗ್ರಹ.

ಇವುಗಳೆಲ್ಲಕ್ಕಿಂತಲೂ ಹೆಚ್ಚಾಗಿ ಯೋಜನೆಯನ್ನು ಸಕಾಲದಲ್ಲಿ ಪೂರ್ತಿಗೊಳಿಸುತ್ತೇವೆಂಬ ದೃಢ ನಿರ್ಧಾರ ಅತ್ಯಗತ್ಯ. ಕೊಂಕಣ ರೈಲ್ವೆಗೆ ರೂ. 1500 ಕೋಟಿ ಸಂಗ್ರಹಿಸಿ ಸಕಾಲದಲ್ಲಿ ಆ ಯೋಜನೆ ಪೂರ್ಣಗೊಳಿಸಲು ಸಾಧ್ಯವಾಗುವುದಾದರೆ, ಬಿಜಾಪುರ ಜಿಲ್ಲೆಯ ರೈತರು ಆಲಮಟ್ಟಿ ಯೋಜನೆ ಪೂರ್ಣಗೊಂಡಾಗ ತಾವು ನಿರ್ಮಿಸುವ ಅಣೆಕಟ್ಟು ಮುಳುಗಡೆಯಾಗುತ್ತಿದೆಂದು ತಿಳಿದು ಕೋಟಿ ಕೋಟಿ ರೂಪಾಯಿ ಸಂಗ್ರಹಿಸಿ ಎರಡು ಮಿನಿ ಅಣೆಕಟ್ಟುಗಳನ್ನು ಕಟ್ಟಿದಾಗ ಕೃಷ್ಣಾ ಮೇಲ್ದಂಡೆ ಯೋಜನೆಯ ರೈತರು ತಮ್ಮ ಹಿತಕ್ಕಾಗಿ ತಲೆ ಎತ್ತುವ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಣ ತೊಡಗಿಸಲು ಹಿಂದೇಟು ಹಾಕಲಾರರು. ಯೋಜನೆ ಸಕಾಲದಲ್ಲಿ ಮುಕ್ತಾಯವಾಗುತ್ತದೆಂಬ ಖಾತರಿ ಅವರಿಗೆ ಮನದಟ್ಟಾಗಬೇಕಷ್ಟೆ.

ಇಂಥ ವಿಶ್ವಾಸವನ್ನು ಹುಟ್ಟಿಸಿದರೆ ವಿಶ್ವಬ್ಯಾಂಕಿಗೆ ಕೈ ಒಡ್ಡುವ ಅಗತ್ಯವೂ ಇಲ್ಲ. ಅವರ ಕರಾರುಗಳಿಗೆ ಶರಣಾಗುವ ಅವಶ್ಯವೂ ಇಲ್ಲ. ಎರಡನೆಯದಾಗಿ ಈ ಯೋಜನೆಗಳು ಸಕಾಲದಲ್ಲಿಯೇ ಮುಕ್ತಾಯವಾಗಿ ರೈತರಿಗೆ ಲಾಭ ಸಿಗಬೇಕಾದರೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತ್ಯೇಕ ಕಾರ್ಪೊರೇಶನ್ ರಚನೆಯಾಗಬೇಕು. ಅದಕ್ಕೆ ಉತ್ತಮ ಆಡಳಿತಗಾರರು ಬೇಕು. ಸರಕಾರ ಅದರಲ್ಲಿ ಹಸ್ತಕ್ಷೇಪ ಮಾಡಬಾರದು. ಅದಕ್ಕೆ ಸಂಪನ್ಮೂಲ ಒದಗಿಸಬೇಕು. ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸಲು ಅದಕ್ಕೆ ಅವಕಾಶ ಬೇಕು. ಮಂತ್ರಿಮಂಡಲ ಬದಲಾಗುತ್ತಿದ್ದರೂ ಅದರ ಕಾರ್ಯ ಯಾವ ಅಡ್ಡಿ ಆತಂಕವಿಲ್ಲದೆ ಮುಂದುವರೆಯಬೇಕು. ಹಾಗಾದರೆ ಮಾತ್ರ ಜನರಿಗೆ ವಿಶ್ವಾಸ ಮೂಡಿಬಂದು ಹಣ ಸಂಗ್ರಹವಾಗಿ, 2000ದ ಇಸವಿಯೊಳಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣ ಪೂರ್ತಿಗೊಂಡು ತಮ್ಮ ಪಾಲಿನ ನೀರು ರಾಜ್ಯದ ರೈತರಿಗೆ ಲಭ್ಯವಾಗಲು ಸಾಧ್ಯ. ಗುಲಬರ್ಗಾ, ರಾಯಚೂರು, ಬಿಜಾಪೂರ ಜಿಲ್ಲೆಗಳು ಪಂಜಾಬ, ಹರ್‍ಯಾಣಗಳಂತೆ ಧಾನ್ಯದ ಕಣಜವಾಗಲು ಸಾಧ್ಯ.

ಪುನರ್ವಸತಿ ಪ್ರಶ್ನೆ

ನೀರಾವರಿ ಯೋಜನೆಗಳನ್ನು ಕೈಗೊಳ್ಳುವಾಗ ಆ ಯೋಜನೆಗಳಿಂದಾಗಿ ಮುಳುಗಡೆಯಾಗುವ ಹಳ್ಳಿಗಳ ಜನರಿಗೆ ಸಮರ್ಪಕವಾದ ಪುನರ್ವಸತಿ ನಿರ್ಮಾಣವಾಗುತ್ತಿಲ್ಲ ಎಂಬ ತಕರಾರುಗಳು ಬಹಳಷ್ಟು ಕೇಳಿ ಬರುತ್ತಿವೆ. ಅದು ಸತ್ಯ ಕೂಡ. ಯೋಜನೆಗಳ ಕುರಿತಾಗಲೀ, ಪುನರ್ವಸತಿ ಕುರಿತಾಗಲಿ, ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಕುರಿತಾಗಲೀ, ಆಳುವ ಕಾಂಗ್ರೆಸ್ ಸರಕಾರಕ್ಕೆ ನಿಶ್ಚಿತವಾದ ನಿರ್ದಿಷ್ಟವಾದ ಸ್ಪಷ್ಟ ನಿಲುಮೆ ಇಲ್ಲದಿರುವದರಿಂದಲೇ. ಈ ಸಮಸ್ಯೆ ಬೃಹದಾಕಾರವಾಗಿ ಬೆಳೆದು ಯೋಜನೆಯ ಪೂರ್ಣಗೊಳ್ಳುವಿಕೆಗೆ ಅಡ್ಡಿಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಜನರಿಂದ ಒತ್ತಡ ಬಂದಾಗ ಮಾತ್ರ ಕಣ್ಣೊರೆಸುವ ಕೆಲಸದಲ್ಲಿ ತೊಡಗುತ್ತಿರುವುದನ್ನು ನೋಡುತ್ತಿದ್ದೇವೆ.

ಯೋಜನೆಗಳ ಅಂದಾಜು ವೆಚ್ಚದಲ್ಲೇ ಪುನರ್ವಸತಿಯ ಖರ್ಚಿನ ಅಂಶವೂ ಸೇರಿರುತ್ತದೆ. ವಿವರಗಳೂ ಇರುತ್ತವೆ. ಆದರೆ ಯೋಜನೆ ಪ್ರಾರಂಭಿಸಿ ಅದನ್ನು ಪೂರ್ತಿಗೊಳಿಸಲು ನಿರ್ದಿಷ್ಟ ಕಾಲ ಮಿತಿಯೇ ಇಲ್ಲದಿರುವಾಗ ಪುನರ್ವಸತಿಯ ಪ್ರಶ್ನೆ ನೆನೆಗುದಿಗೆ ಬಿದ್ದಿರುತ್ತದೆ. ಯೋಜನೆಯ ಜೊತೆಯಲ್ಲಿಯೇ ಪುನರ್ವಸತಿ ಕಾರ್ಯ ಪ್ರಾರಂಭವಾಗಬೇಕು.

1) ಹಣದ ರೂಪದಲ್ಲಿ ಪರಿಹಾರ ಒದಗಿಸುವುದರ ಬದಲಾಗಿ ಆಶ್ರಯ ಯೋಜನೆ ಮತ್ತು ಸಹಕಾರಿ ಗೃಹ ನಿರ್ಮಾಣ ಮಂಡಳಿಗಳ ಮೂಲಕ ಮನೆ ಕಟ್ಟಿಸಿ ಕೊಡಬೇಕು.

2) ಸ್ಕೂಲ್ ಕಾಲೇಜ್, ಆಟದ ಬಯಲು, ದವಾಖಾನೆಗಳನ್ನೊಳಗೊಂಡ ಎಲ್ಲ ಆಧುನಿಕ ಸೌಲಭ್ಯಗಳನ್ನೂ ಒದಗಿಸಬೇಕು.

3) ಮುಳುಗಡೆಯಾಗುವ ಪ್ರದೇಶದಲ್ಲಿರುವ ಬಡ ಮಧ್ಯಮವರ್ಗದ ರೈತರಿಗೆ ನೀರಾವರಿ ಪ್ರದೇಶದಲ್ಲಿ ನೀರಾವರಿ ಭೂಮಿ ಕೊಡಬೇಕು.

4) ಕೃಷಿ ಕಾರ್ಮಿಕರಿಗೆ ಹೊಸದಾಗಿ ನೀರಾವರಿಯಾಗಿರುವ ಪ್ರದೇಶದಲ್ಲಿ ಸರಕಾರಿ ಭೂಮಿಯಲ್ಲಿ ಪುಕ್ಕಟ್ಟೆಯಾಗಿ ಮನೆ ಕಟ್ಟಿಸಿ ಕೊಡಬೇಕು. ಸರಕಾರದ ಹೆಚ್ಚುವರಿ ಕೃಷಿ ಭೂಮಿಯನ್ನು ಇವರಿಗೆ ಹಂಚಬೇಕು.

5) ಬಡರೈತರಿಗೆ ಕೃಷಿ ಕಾರ್ಮಿಕರಿಗೆ ಬಡ್ಡಿ ರಹಿತ ಧನಸಹಾಯ ಮಾಡಿ ಉದ್ಯೋಗದ ಅವಕಾಶ ಕಲ್ಪಿಸಬೇಕು.

ಭೂ ಸ್ವಾಧಿನ ಪ್ರಶ್ನೆ

ಯಾವುದೇ ನೀರಾವರಿ ಯೋಜನೆ ಸಕಾಲದಲ್ಲಿ ಪೂರ್ತಿಗೊಳ್ಳಬೇಕಾದರೆ ಆ ಯೋಜನೆಗೆ ಬೇಕಾಗುವ ಭೂಮಿಯನ್ನು ಸಕಾಲದಲ್ಲೇ ಸ್ವಾಧೀನಪಡಿಸಿಕೊಳ್ಳಬೇಕಾಗಿರುವುದು ಅತ್ಯವಶ್ಯ. ಪ್ರಾರಂಭದಿಂದಲೂ ಭೂ ಸ್ವಾಧೀನ ಪ್ರಶ್ನೆ ದೊಡ್ಡ ತಲೆನೋವಾಗಿ ನಿಂತಿದೆ. ಭೂ ಸುಧಾರಣೆ ಮಸೂದೆ ಜಾರಿಯಲ್ಲಿ ಬರುವತನಕ ಭೂ ಸ್ವಾಧೀ ಕಾನೂನಿನಂತೆ ಭೂಮಾಲಿಕ ಕೋರ್ಟಿಗೆ ಹೋಗಿ ಭೂ ಸ್ವಾಧೀನ ಪಡೆಸಿಕೊಳ್ಳುವುದರ ವಿರುದ್ಧ ಕೋರ್ಟಿನಿಂದ ತಡೆಯಾಜ್ಞೆ ತರಬಹುದಾಗಿತ್ತು. ಆದರ ಮೂಲಕ ಯೋಜನೆ ಕುಂಠಿತಗೊಳ್ಳುತ್ತಿತ್ತು.

ಈಗ ಭೂ ಮಸೂದೆ ಜಾರಿಯಾದ ನಂತರ ಭೂಸ್ವಾಧೀನ ಪಡಿಸಿಕೊಳ್ಳಬಹುದಾಗಿದೆ. ಆದರೆ ತನ್ನ ಭೂಮಿಗೆ ಹೆಚ್ಚುವರಿ ಪರಿಹಾರ ಧನ ಬೇಕೆಂದು ಭೂ ಮಾಲಿಕ ಕೋರ್ಟುಕಟ್ಟೆ ಏರುತ್ತಾರೆ. ಅದರಿಂದಲೂ ಯೋಜನೆಗೆ ಯೋಜನೆಯ ಸಂಪನ್ಮೂಲಕ್ಕೆ ಅಡ್ಡಿಯಾಗುತ್ತಿದೆ. ಈ ಸಮಸ್ಯೆಯನ್ನು ಸಕಾಲದಲ್ಲೇ ಸರಿಯಾಗಿ ಬಗೆಹರಿಸುವುದು ಅತ್ಯಗತ್ಯ.

ಇಂಥ ಭೂ ಸ್ವಾಧೀನ ಕುರಿತು ತಕರಾರುಗಳನ್ನು ಲೋಕ ಅದಾಲತ್‌ಗಳ ಮೂಲಕ ತೀವ್ರ ಬಗೆಹರಿಸುವ ವ್ಯವಸ್ಥೆಯಾಗಬೇಕು.



ಅಸಂಘಟಿತ ಕಾರ್ಮಿಕರ ಹೋರಾಟ ಏಕೆ?

4

-- ವಿ.ಜೆ.ಕೆ. ನಾಯರ್

ತಮ್ಮ ಜೀವನವನ್ನು ತಾವೇ ನಿರ್ಧರಿಸಿ ಸುತ್ತಲಿನ ಜಗತ್ತನ್ನು ತಮಗೆ ಅನುಕೂಲವಾಗುವಂತೆ ರೂಪಿಸಿಕೊಳ್ಳಲು ಅನುವು ಮಾಡಿಕೊಡುವ ಜನಸಾಮಾನ್ಯರ ಹೋರಾಟದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಹೋರಾಟ ಒಂದು ಪ್ರಮುಖ ಹೋರಾಟವಾಗಿ ಮೂಡಿಬರುತ್ತಿದೆ.

ನಮ್ಮರಾಜ್ಯದಲ್ಲಿ ಸಿಐಟಿಯು ಅಸಂಘಟಿತ ವಲಯದ ಕಾರ್ಮಿಕರ ಬೇಡಿಕೆಗಳನ್ನು ಸರಕಾರ ಒಪ್ಪಿಕೊಳ್ಳುವಂತೆ ಒತ್ತಾಯ ತರಲು ಒಂದು ದೊಡ್ಡ ಕಾರ್ಯಾಚರಣೆಗಳಿಯಲು ಉದ್ಯುಕ್ತವಾಗಿದೆ. ಈ ಹೋರಾಟ ಜಯಶಾಲಿಯಾಗುವವರೆಗೂ ಅದನ್ನು ನಡೆಸಲು ತಯಾರಿ ನಡೆಸುತ್ತಿದೆ.

ನವಂಬರ್ 22ರಿಂದ ವಿಧಾನ ಸೌಧದ ಎದುರು ಅನಿರ್ದಿಷ್ಟ ಕಾಲದ ಧರಣಿ ಸತ್ಯಾಗ್ರಹ ನಡೆಸಲು ಬೆಳಗಾವಿಯಲ್ಲಿ ನಡೆದ ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿ ಸಭೆ ನಿರ್ಧರಿಸಿದ್ದು ರಾಜ್ಯದ ವಿವಿದೆಡೆಗಳಿಂದ ಬಂದಿರುವ ಕಾರ್ಮಿಕರು ಇದರಲ್ಲಿ ಭಾಗವಹಿಸುತ್ತಿದ್ದಾರೆ.

ಈ ಹೋರಾಟದಲ್ಲಿ ಸಂಬಂಧಪಟ್ಟಂತೆ ಅಗತ್ಯ ಮಾಹಿತಿಗಳನ್ನು ಒಂಗಿಸುವ ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್‌ರವರ ಲೇಖನದ ಮುಂದುವರಿದಭಾಗ

ಕನಿಷ್ಟ ಕೂಲಿ ಪ್ರಕಟಣೆಯಲ್ಲಿ ಹಿಂಜರಿಕೆ ವಿಳಂಬ ಗೊಂದಲ

ಕನಿಷ್ಟ ಕೂಲಿಯ ಸೂಚನೆಯನ್ನು ಸರಕಾರ ಪ್ರಕಟಿಸದಿರುವುದು, ಅದನ್ನು ಪರಿಷ್ಕರಿಸುವಲ್ಲಿ ಅನಗತ್ಯ ವಿಳಂಬ, ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿಸುವುದು. ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳಲು, ಇವುಗಳಿಗೆ ಪರಿಹಾರ ಸೂಚಿಸಲು ಹಾಗೂ ಅದಕ್ಕಾಗಿ ಹೋರಾಡಲು ಸಾಧ್ಯವಾಗಬೇಕಾದರೆ ನಾವು ಕನಿಷ್ಟ ಕೂಲಿ ಶಾಸನದಲ್ಲಿ ಇದಕ್ಕೆಯಾವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂಬುದನ್ನು ಗಮನಿಸಲೇಬೇಕು.

ನೋಟಿಫಿಕೇಶನ್ ವಿಧಾನ

ಈಗಾಗಲೇ ಆರಂಭದಲ್ಲಿ ಹೇಳಿರುವಂತೆ 1948 ರ ಕನಿಷ್ಟ ಕೂಲಿ ಶಾಸನದ ಶೆಡ್ಯೂಲಿನಲ್ಲಿ (ಪರಿಶಿಷ್ಟದಲ್ಲಿ) ಕನಿಷ್ಟ ಕೂಲಿ ದರಗಳನ್ನು ನಿಗದಿಪಡಿಸಬಹುದಾದ ಉದ್ಯೋಗಗಳ ಒಂದು ಪಟ್ಟಿಯನ್ನು ಕೊಡಲಾಗಿದೆ. ಅಧಿಕೃತ ರಾಜಪತ್ರ (ಗೆಜೆಟ್)ದಲ್ಲಿ ಸೂಚನೆ ಜ್ಯಾರಿಗೊಳಿಸುವ ಮೂಲಕ ಈ ಪಟ್ಟಿಗೆ ಬೇರೆ ಯಾವುದೇ ಉದ್ಯೋಗವನ್ನು ರಾಜ್ಯ ಸರಕಾರ ಸೇರಿಸಲು ಕೂಡಾ 1948 ರ ಕಾನೂನು ಅವಕಾಶ ಕಲ್ಪಿಸಿದೆ. ಕರ್ನಾಟಕ ಸರಕಾರ ಈ ರೀತಿ 67 ಉದ್ಯೋಗಗಳನ್ನು ಈ ಶಾಸನದ ಶೆಡ್ಯೂಲಿನಲ್ಲಿ ಸೇರಿಸಿದೆ. ಇವೆಲ್ಲಾ ಪರಿಶಿಷ್ಟ ಉದ್ಯೋಗಗಳು ಅಥವಾ ಶೆಡ್ಯೂಲ್ಡ್ ಉದ್ಯೋಗಗಳು ಎಂದರೆ ಕರ್ನಾಟಕ ರಾಜ್ಯದಲ್ಲಿ ಈ ಎಲ್ಲಾ ಉದ್ಯೋಗಗಳಲ್ಲಿ ಕನಿಷ್ಟ ಕೂಲಿ ದರವನ್ನು ನಿಗದಿಪಡಿಸಲಾಗುವುದು.

ಕೋಷ್ಟಕ 1 ನ್ನು ನೋಡಿದಾಗ ಸದ್ಯ ಕೇವಲ 37 ಉದ್ಯೋಗಗಳಲ್ಲಿ ಮಾತ್ರ ಈಗ ಕೂಲಿದರವನ್ನು ಅನುಷ್ಠಾನಕ್ಕೆ ತರಬಹುದಾಗಿದೆ.

ಅಷ್ಟೇ ಸಂಖ್ಯೆಯ ಬೇರೆ ಉಳಿದ ಉದ್ಯೋಗಗಳಲ್ಲಿ ಒಂದೋ ನೋಟಿಫಿಕೇಶನ್ (ಸೂಚನೆ) ಜ್ಯಾರಿಮಾಡಿಲ್ಲ ಅಥವಾ ಜ್ಯಾರಿಮಾಡಿದ್ದರೆ ಅದನ್ನು ರದ್ದು ಮಾಡಲಾಯಿತು, ಅದನ್ನು ಮತ್ತೆ ಜ್ಯಾರಿಮಾಡಲಿಲ್ಲ. ಇಂತಹ ಉದ್ಯೋಗಗಳ ಒಂದು ಪಟ್ಟಿ ಇಲ್ಲಿದೆ. ಸೋಡಾ ಮುಂತಾದ ಪಾನೀಯಗಳು, ಸಾರಾಯಿ ತಯಾರಿಕೆ (ಬ್ರಿವರೀಸ್) ಇಟ್ಟಿಗೆಗೂಡು, ಬಿಸ್ಕತ್ ತಯಾರಿಕೆ, ಚಾಪೆ ಹೆಣೆಯುವಿಕೆ, ಮನೆಗೆಲಸದ ಆಳುಗಳು, ಶಿಕ್ಷಣ ಸಂಸ್ಥೆಗಳು, ವಿದ್ಯುತ್ ಉತ್ಪಾದನೆ ಹಾಗೂ ವಿತರಣೆ, ಹಣಕಾಸು ಸಂಸ್ಥೆಗಳು ಮತ್ತು ಚಿಟ್‌ಫಂಡ್, ಮೀನು ಕ್ಯೂರಿಂಗ್, ಅರಣ್ಯಗಾರಿಕೆ, ಕೈಮಗ್ಗ, ಪವರ್‌ಲೂಮ್, ಅಡುಗೆ ಗ್ಯಾಸ್ ವಿತರಣೆ, ಹಾಲು ವಿತರಣೆ, ಮಂಡಿ /ಬಝಾರ್‌ಗಳಲ್ಲಿನ ಹಮಾಲಿಗಳು, ಮಿನಿ ಸಿಮೆಂಟ್ ಪ್ಲಾಂಟ್‌ಗಳು, ಮೊಸೈಕ್ ಟೈಲ್‌ಗಳು, ಪ್ಲಾಂಟೇಶನ್(ಸಿಬ್ಬಂದಿಯೇತರ), ಪ್ಲಾಸ್ಟಿಕ್, ರೈಸ್ ಮಿಲ್‌ಗಳು, ರಬ್ಬರ್ ಉತ್ಪಾದನೆಗಳು, ಸೆಕ್ಯೂರಿಟಿ ಏಜೆನ್ಸಿಗಳು, ಸ್ಟನ್‌ಪೈಪ್ ತಯಾರಿಕೆ, ಪಾತ್ರೆಗಳ ತಯಾರಿಕೆ, ಲೇಪನಗಳ ತಯಾರಿಕೆ.

ಈ ಕಾಯ್ದೆಯ ಶೆಡ್ಯೂಲಿನಲ್ಲಿರುವ ಈ ಉದ್ಯೋಗಗಳಲ್ಲಿನ ದುಡಿಯುವ ಕಾರ್ಮಿಕರಿಗೆ 1948 ರ ಕನಿಷ್ಟ ಕೂಲಿ ಕಾಯ್ದೆಯ ರಕ್ಷಣೆ ಸಿಗುತ್ತಿಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕೋಷ್ಟಕ1 ರಿಂದ ಇನ್ನೆರಡು ಅಂಶಗಳೂ ಎದ್ದು ಕಾಣುತ್ತವೆ. ಬಟ್ಟೆ (ರೇಶ್ಮೆ) ಉದ್ದಿಮೆಯ, ಕನಿಷ್ಟ ಕೂಲಿದರದ ಸೂಚನೆ (ನೋಟಿಫಿಕೇಶನ್) ನೀಡಿದ್ದರೂ, ಈ ದರ ದಿನಕ್ಕೆ ರೂ. 2ರಿಂದ 2.25 ರೂವರೆಗೆ ಎಂದು ನಿಗದಿಪಡಿಸಿ ಕಾಯ್ದೆಯನ್ನೇ ಅಪಹಾಸ್ಯ ಮಾಡಿದಂತಿದೆ. ಇದು 25 ವರ್ಷಗಳ ಹಿಂದೆ ತುಟ್ಟಿಭತ್ಯೆ ಇಲ್ಲದೆ ನೋಟಿಫೈ ಮಾಡಿದ ದರ ಎಂಬುದನ್ನೂ ಗಮನಿಸಬೇಕು. ಈ ಉದ್ಯೋಗದಲ್ಲಿ ತೊಡಗಿರುವವರ ಸಂಖ್ಯೆ ಕೇವಲ ಬೆಂಗಳೂರು ಒಂದರಲ್ಲೇ 1.25 ಲಕ್ಷ, ಇಂತಹ ಹಾಸ್ಯಾಸ್ಪದ ಕೂಲಿಗೆ ಅವರು ದುಡಿಯುತ್ತಿಲ್ಲ. ಈ ಉದ್ದಿಮೆಯಲ್ಲಿನ ಮಾಲಕರುಗಳ ಒತ್ತಡ ಯಶಸ್ವಿಯಾಗಿರುವುದು ಇಲ್ಲಿ ಕಂಡು ಬರುತ್ತದೆ. ಈ ಕಾರ್ಮಿಕರನ್ನು ಸಂಘಟಿಸಬೇಕಾದವರು ಇದನ್ನು ಗಮನಿಸಬೇಕು.

ಕಾನೂನು ಪುಸ್ತಕಗಳಲ್ಲಿರುವ ಇನ್ನೊಂದು ಹಾಸ್ಯಾಸ್ಪದ ಕೂಲಿ ದರ ಎಂದರೆ ಸ್ಥಳೀಯ ಸಂಸ್ಥೆಗಳ ನೌಕರರದ್ದು. ತಿಂಗಳಿಗೆ ರೂ. 62.20! ಕಳೆದ 25 ವರ್ಷಗಳಲ್ಲಿ ಈ ಕನಿಷ್ಟ ಕೂಲಿ ಪರಿಷ್ಕರಣಗೊಳ್ಳದಿರಲು ಕಾರಣ ಸಂಬಂಧಪಟ್ಟ ಎಲ್ಲರ ನಿರ್ಲಕ್ಷತನವಲ್ಲದೆ ಬೇರೇನೂ ಅಲ್ಲ.

ಇವೆರಡು ಬಿಟ್ಟು ಉಳಿದೆಲ್ಲಾ ನೋಟಿಫಿಕೇಶನ್‌ಗಳು ಕಳೆದ 10 ವರ್ಷಗಳಲ್ಲಿ ಜ್ಯಾರಿಗೊಳಿಸಿರುವ ಸೂಚನೆಗಳು. 1984ರಲ್ಲಿ ಕನಿಷ್ಟ ಕೂಲಿಗಳನ್ನು ಪರಿಷ್ಕರಿಸಿ 13 ಸೂಚನೆಗಳು ಹೊರಬಂದವು. ಕೃಷಿ, ಚರ್ಮ ಹದಗೊಳಿಸುವಿಕೆ, ಮೂರ್ತೆದಾರಿಕೆ, ಮರಗೆಲಸ ಮತ್ತು ಸಾಮಿಲ್, ಏಲಕ್ಕಿ ಮಲೆ, ಪಿಂಗಾಣಿ ವಸ್ತುಗಳು, ಅಗರ್‌ಬತ್ತಿ, ಕಟ್ಟಡ ಕೆಲಸ, ಪ್ರಿಂಟಿಂಗ್ ಪ್ರೆಸ್, ಹತ್ತಿ ಜಿನ್ನಿಂಗ್, ಪ್ಲೈವುಡ್, ಅಕ್ಕಿ-ಹಿಟ್ಟು ಬೇಳೆ ಗಿರಣಿಗಳು ಮತ್ತು ರೇಷ್ಮೆ ಕೃಷಿಗೆ ಸಂಬಂಧಪಟ್ಟಂತೆ ಈ ನೋಟಿಫಿಕೇಶನ್‌ಗ... ಬಂದವು. ಕೃಷಿ ಬಿಟ್ಟು ಉಳಿದೆಲ್ಲಾ ಉದ್ಯೋಗಗಳಿಗೆ ಬೆಲೆ ಸೂಚ್ಯಂಕದೊಂ... ಬದಲಾಗುವ ತುಟ್ಟಿಭತ್ಯೆ ಇದೆ. ಕೃಷಿ ಕಾರ್ಮಿಕರಿಗೆ 1984 ರಲ್ಲಿ ನೋಟಿಫೈ ಮಾಡಿದ ಕನಿಷ್ಟ ಕೂಲಿ. 12 ರೂ. ಈಗ ರೂ. 25.33 ಆಗಬೇಕಿತ್ತು. ಏಕೆಂದರೆ 1984ರಲ್ಲಿ ಬೆಲೆ ಸೂಚ್ಯಂಕ 620 ಇದ್ದದ್ದು ಈಗ 1309 ಆಗಿದೆ. ಜನತಾ ಪಕ್ಷದ ಸರಕಾರದ ಅಜೀಜ್ ಸೇಠ್‌ರವರ ಅವಧಿಯಲ್ಲಿ ಜ್ಯಾರಿಯಾದ ಈ ನೋಟಿಫಿಕೇಶನ್‌ಗಳು ಕುತೂಹಲಕಾರಿಯಾಗಿವೆ. ಈ ಎಲ್ಲಾ ನೊಟಿಫಿಕೇಶನ್‌ಗಳಲ್ಲಿ ಹೇಳಿರುವ ಬದಲಾಗುವ ತುಟ್ಟಿಭತ್ಯೆ (ವಿ.ಡಿ.ಎ) ದರ ದಿನಗೂಲಿ 10ರೂವರೆಗೆ, 10ರೂ. -15 ರೂ ಹಾಗೂ 15 ರೂ. ಇರುವವರಿಗೆ 600 ಪಾಯಿಂಟಿಗಿಂತ ಬೆಲೆ ಸೂಚ್ಯಂಕ ಏರಿದಾಗ ಪ್ರತಿ 5 ಪಾಯಿಂಟು ಏರಿಕೆಗೆ ಅನುಕ್ರಮವಾಗಿ 0.25 ಪೈಸೆ, 0.35 ಪೈಸೆ ಹಾಗೂ 0.45 ಪೈಸೆ. ಆದರೆ ಈ ತುಟ್ಟಿಭತ್ಯೆ ಏರಿಕೆ ತಿಂಗಳಿಗೆ ಅನುಕ್ರಮವಾಗಿ ರೂ. 11.25, ರೂ. 14.25 ಮತ್ತು 20.05 ಗಿಂತ ಹೆಚ್ಚಾಗುವಂತಿಲ್ಲ. 5 ಪಾಯಿಂಟಿಗೆ 0.25 ಪೈಸೆ ಎಂದರೆ ಪಾಯಿಂಟಿಗೆ .05 ಪೈಸೆ ಎಂದರೆ ತಿಂಗಳಿಗೆ ಗರಿಷ್ಟ ತುಟ್ಟಿಭತ್ಯೆ 11.25 ರೂ. ತಲುಪಲು 865 ಪಾಯಿಂಟುಗಳು ಏರಬೇಕು. ಆದರೆ ಏರಿಕೆ ಪಾಯಿಂಟಿಗೆ ಐದು ಪೈಸೆ ಎಂದು ವ್ಯಾಖ್ಯಾನ ಮಾಡಲಾಯಿತು. ಅಂದರೆ ಆಗ ಗರಿಷ್ಟ ತುಟ್ಟಿಭತ್ಯೆ 600 ಪಾಯಿಂಟಿನ ನಂತರ 10 ಪಾಯಿಂಟ್ ಏರಿಕೆಗೆ ತಲುಪಿಬಿಡು

ಪುಟ 4ಕ್ಕೆ

ಆಹಾರದ ಸ್ವಾವಲಂಬನೆ ಉಳಿಸಿಕೊಳ್ಳಲು ಪರ್ಯಾಯ ಕೃಷಿ ನೀತಿ ಅವಶ್ಯ

ಭಾರತ ದೇಶದಲ್ಲಿ ಬಹುಸಂಖ್ಯಾತರಾಗಿರುವ ರೈತ ಸಮುದಾಯ ಹಾಗೂ ಕೃಷಿ ಕೂಲಿಕಾರರ ಜೀವನ ಪರಿಸ್ಥಿತಿಯು ಕಾಂಗ್ರೆ ಸರಕಾರ ಮುಂದಿಟ್ಟಿರುವ ಹೊಸ ಕೃಷಿ ನೀತಿಯಿಂದ ಉತ್ತಮವಾಗುವುದರ ಬದಲು ಮತ್ತಷ್ಟು ದುಸ್ಥಿತಿಗೆ ತಳ್ಳಲ್ಪಡುವುದು ಖಂಡಿತ. ಇದಕ್ಕಾಗಿ ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಗಳು ಮುಂದಿಟ್ಟಿರುವ "ಪರ್ಯಾಯ ಕೃಷಿ ನೀತಿ"ಯನ್ನು ಜನಪ್ರಿಯಗೊಳಿಸಿ, ಕೇಂದ್ರ ಕಾಂಗ್ರೆ ಸರಕಾರದ ಹೊಸ ಕೃಷಿ ನೀತಿಯ ವಿರುದ್ಧ ವ್ಯಾಪಕ ಚಳುವಳಿಯನ್ನು ನಡೆಸುವುದರ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳು ಈ ವಿಷಯದ ಬಗ್ಗೆ ದಿನಾಂಕ 20.11.1993 ರಂದು ನಗರದ ಮಿಥಿಕ್ ಸೊಸೈಟಿಯಲ್ಲಿ ಒಂದು ವಿಚಾರಸಂಕಿರಣವನ್ನು ಏರ್ಪಡಿಸಿದ್ದರು.

ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಪ್ರಾಂತ ರೈತ ಸಂಘದ ಅಧ್ಯಕ್ಷ, ಕಾಂ. ಹಿ.ರಾಮಚಂದ್ರರಾವ್ ವಹಿಸಿದ್ದರು. ಮುಖ್ಯ ಭಾಷಣಕಾರರಾಗಿ ಕಾಂ. ಎಸ್. ರಾಮಚಂದ್ರಪಿಳ್ಳೈ, ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಕಾರ್ಯದರ್ಶಿಗಳು ಮತ್ತು ಕಾಂ. ಜಿ.ಎನ್. ನಾಗರಾಜ್, ಪ್ರಾಂತ ಕೃಷಿ ಕೂಲಿಕಾರ ಸಂಘದ ಅಧ್ಯಕ್ಷರು ಭಾಗವಹಿಸಿದ್ದರು.

ಕಾಂ. ಎಸ್. ರಾಮಚಂದ್ರ ಪಿಳ್ಳೈಯವರು 'ಪರ್ಯಾಯ ಕೃಷಿ ನೀತಿ'ಯನ್ನು ಮಂಡಿಸುತ್ತಾ, ದೇಶದಲ್ಲಿ ಎಡರಂಗ ಸರಕಾರ ಸಾಧನೆಗಳನ್ನು ವಿವರಿಸುತ್ತಾ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಜಾರಿಗೆ

ಕಾರರಿಗೆ, ಬಡರೈತರಿಗೆ ಮಧ್ಯಮ ರೈತರಿಗೆ ಅನುಕೂಲಕರವಾಗಿದೆಯೆಂದು ತಿಳಿಸಿ ಸಣ್ಣ ನೀರಾವರಿಯ ಮುಖಾಂತರ ರೈತರ ಕೃಷಿಗೆ ಭದ್ರತೆ ನೀಡಿ ರಾಷ್ಟ್ರದ ಉತ್ಪಾದನೆಯಲ್ಲಿ ಎಂಟು, ಒಂಭತ್ತನೆಯ ಸ್ಥಾನದಲ್ಲಿದ್ದ ಪ.ಬಂಗಾಳವನ್ನು ಈಗ ಎರಡನೇ, ಮೂರನೇ ಸ್ಥಾನದಲ್ಲಿ ತಂದ ಹಿನ್ನೆಲೆಯಲ್ಲಿ, ಅದಕ್ಕಾಗಿ ತಂದ ಭೂ ಸುಧಾರಣೆಗಳನ್ನು ಎಳೆ ಎಳೆಯಾಗಿ ಬಿಡಿಸಿ ವಿವರಿಸಿದರು.

ನೀರಾವರಿಯನ್ನು ಬಳಸಿ ಹೈಬ್ರಿಡ್ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳನ್ನುಪಯೋಗಿಸಿ 'ಹಸಿರು ಕ್ರಾಂತಿ'ಯನ್ನು ಮಾಡಲು ಕರೆ ಕೊಟ್ಟ ಕೇಂದ್ರ ಸರಕಾರ ಇದರಲ್ಲಿ ಸೀಮಿತ ಪ್ರದೇಶಗಳಲ್ಲಿ ಮಾತ್ರ ಯಶಸ್ಸು ಕಂಡು ಉತ್ಪಾದನೆಯನ್ನು ಹೆಚ್ಚಿಸಿತು. ಅದೂ ಕೂಡಾ ಶ್ರೀಮಂತ ರೈತರ ನೆರವಿನಿಂದ ಎಂಬುದನ್ನು ಗಮನಿಸಬೇಕು.

ಆದರೆ ಈಗ ಹೊಸ ಆರ್ಥಿಕ ನೀತಿ ಬಂದ ಹಿನ್ನೆಲೆಯಲ್ಲಿ ಭಾರತದ ಕೃಷಿಯನ್ನು ಅಂತರಾಷ್ಟ್ರೀಯ ಮಾರುಕಟ್ಟೆಗೆ ಯಾವುದೇ ಕಡಿವಾಣ, ನಿರ್ಬಂಧಗಳಿಲ್ಲದೆ ತೆರೆಯುತ್ತಿರುವ ಕೇಂದ್ರ ಸರಕಾರ, ಗ್ಯಾಟ್ ಒಪ್ಪಂದಗಳನ್ನು ಒಪ್ಪಿ ಆಹಾರ ಧಾನ್ಯಗಳನ್ನು ಹೊರ ದೇಶಗಳಿಂದ ಆಮದು ಮಾಡಿಕೊಡು, ಆಹಾರ ಧಾನ್ಯವನ್ನು ದೇಶದಲ್ಲಿ ಬೆಳೆಯದೇ ಬೇರೆ ಬೆಳೆಯನ್ನು ಬೆಳೆದು ಅದನ್ನು ರಫ್ತು ಮಾಡುವ ಯೋಜನೆಗೆ ಕೈ ಹಾಕುತ್ತಿದೆ. ಇದರಿಂದ ನಮ್ಮ ದೇಶದ ಜನರು ತಮಗೆ ಬೇಕಾದ ಆಹಾರಕ್ಕೂ ವಿದೇಶಿಯರ ಮೇಲೆ ಅವಲಂಬಿಸಿ, ರೈತರು ಬೆಳೆದ ಬೆಳೆಯನ್ನು ಮಾರಾಟ ಮಾಡಲೂ ವಿದೇಶಿಯರನ್ನು ಅವಲಂಬಿಸಬೇಕಾಗುವುದರ ಭಯಾನಕ ಚಿತ್ರಣವನ್ನು ಸಭಿಕರಿಗೆ ಪರಿಚಯಿಸಿ

ಗಳನ್ನು ಆಯುಧಗಳನ್ನಾಗಿ ಬಳಸಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭಾರತದ ಮಾರುಕಟ್ಟೆಯನ್ನು ತಮ್ಮ ಕೈವಶಮಾಡಿಕೊಳ್ಳಲು ಹೊರಟಿದ್ದು ಅದಕ್ಕೆ ಶಿರಸಾವಹಿಸಿ ಒಪ್ಪಿಗೆ ನೀಡಲು ಕಾಂಗ್ರೆಸ್ ಸರಕಾರ ಶತಾಯಗತಾಯ ಪ್ರಯತ್ನಿಸುತ್ತಿದೆ ಎಂದು ಅವರು ಹೇಳಿದರು.

ಈ ಹಿನ್ನೆಲೆಯಲ್ಲಿ ದೇಶ ಇಂದು ತನ್ನ ಆಹಾರ ಸ್ವಾವಲಂಬನೆಯನ್ನು ಉಳಿಸಿಕೊಳ್ಳಲು, ಆರ್ಥಿಕ ಮುಗ್ಗಟ್ಟಿನಿಂದ ಹೊರಬರುವಂತಾಗಲು ಬಹುಸಂಖ್ಯಾತರಾದ ಕೃಷಿ ಕೂಲಿಕಾರ, ಬಡರೈತರ ಕೈಗೆ ಭೂಮಿ ಕೊಟ್ಟು ನೀರಾವರಿ, ಇತರ ಅಗತ್ಯ ವಸ್ತುಗಳನ್ನು ಒದಗಿಸುವ ಯೋಜನೆ ದೇಶದಲ್ಲಿ ಜಾರಿಗೆ ಬಂದಾಗ ಮಾತ್ರ ಸ್ವಾವಲಂಬನೆಯನ್ನು ಸಾಧಿಸಲು ಸಾಧ್ಯ. ಇದರ ಪರಿಣಾಮವಾಗಿ ಬಹುಸಂಖ್ಯಾತರ ಕೊಳ್ಳುವ ಶಕ್ತಿ ಹೆಚ್ಚಿ, ವ್ಯಾಪಾರ ವಹಿವಾಟು ವೃದ್ಧಿಸಿ, ಕೈಗಾರಿಕಾ ಉತ್ಪಾದನೆಗೆ ದಾರಿಯಾಗಿ, ಆ ಮುಖಾಂತರ ದೇಶದ ಪ್ರಗತಿಯನ್ನು ಮುಂದೊಯ್ಯಲು ಸಾಧ್ಯ ಎಂಬುದೇ ನಮ್ಮ ಕಿಸಾನ್ ಸಭಾ, ಕೃಷಿಕೂಲಿಕಾರರ ಸಂಘದ ಮುಂದಿಟ್ಟಿರುವ ಪರ್ಯಾಯ ಕೃಷಿ ನೀತಿಯ ಸಾರಾಂಶ ಎಂದು ಕಾಂ. ರಾಮಚಂದ್ರನ್ ಪಿಳ್ಳೈ ಹೇಳಿದರು.. ಈ ನೀತಿಯ ಆಧಾರ ಹದಿನಾರು ವರ್ಷಗಳ ಪ.ಬಂಗಾಳದ ಅನುಭವವಾಗಿದ್ದು, ಇದನ್ನು ದೇಶಾದ್ಯಂತ ಜಾರಿಗೊಳಿಸಲು ಹೋರಾಟದ ದಾರಿಯನ್ನು ಹಿಡಿಯಬೇಕಾಗಿರುವ ಸ್ಥಿತಿಯಲ್ಲಿ ಕೃಷಿ ಕೂಲಿಕಾರರು ಬಡ ರೈತರ ನೇತೃತ್ವದಲ್ಲಿ ಎಲ್ಲಾ ರೈತ ವಿಭಾಗಗಳನ್ನು ಒಗ್ಗೂಡಿಸಿ ಬೀದಿಗಿಳಿಸಿ ಹೋರಾಟ ನಡೆಸುವಂತೆ ಕಾಂ. ರಾಮಚಂದ್ರನ್ ಪಿಳ್ಳೈಯವರು ಕರೆ ನೀಡಿದರು.

"ಕನ್ನಡ ಆಡಳಿತ ಭಾಷೆ" ಸಂಪೂರ್ಣ ಜಾರಿ ಹಿಂದಿ ಕಡ್ಡಾಯ ಹೇರಿಕೆ ವಿರೋಧಿಸಿ

ರಾಜ್ಯಾದ್ಯಂತ ವಿದ್ಯಾರ್ಥಿಗಳ ಮುಷ್ಕರ : ಡಿಸೆಂಬರ್ 4

ರಾಜ್ಯದಲ್ಲಿ ಕನ್ನಡ ಜಾಗೃತಿ ವರ್ಷವನ್ನು ಅತಿ ವೈಭವದಿಂದ ಆಚರಿಸುತ್ತಿರುವ ಹಿನ್ನೆಲೆಯಲ್ಲಿ "ಕನ್ನಡ ಆಡಳಿತ ಭಾಷೆ"ಯಾಗಿ ಸಂಪೂರ್ಣ ಜಾರಿಯಾಗಬೇಕೆಂದು ಹಾಗೂ ಪ್ರೌಢ ಶಿಕ್ಷಣದಲ್ಲಿ "ಹಿಂದಿ" ಭಾಷೆಯ ಕಡ್ಡಾಯ ಹೇರಿಕೆಯನ್ನು ತಕ್ಷಣ ಹಿಂತೆಗೆ... ಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ವಿವಿಧ ಹಂತದ ಹೋರಾಟಗಳನ್ನು ಸಂಘಟಿಸಲು ತೀರ್ಮಾನಿಸಿದೆ. ಇದರ ಅಂಗವಾಗಿ ಡಿಸೆಂಬರ್ 4 ರಂದು ವಿದ್ಯಾರ್ಥಿಗಳ ರಾಜ್ಯವ್ಯಾಪಿ ಮುಷ್ಕರ ನಡೆಯುತ್ತದೆ ಎಂದು ಎಸ್.ಎಫ್.ಐ ರಾಜ್ಯ ಮುಖಂಡರು ನವೆಂಬರ್ 23 ರಂದು ಪತ್ರಿಕಾಗೋಷ್ಠಿಯೊಂದರಲ್ಲಿ ತಿಳಿಸಿದರು.

ಪ್ರೌಢಶಿಕ್ಷಣದಲ್ಲಿ "ಹಿಂದಿ" ಭಾಷೆಯನ್ನು ಕಡ್ಡಾಯಗೊಳಿಸಿದ್ದ ಸರ್ಕಾರದ ಅವೈಜ್ಞಾನಿಕ ಭಾಷಾ ನೀತಿಯನ್ನು ವಿರೋಧಿಸಿ ... ಎಫ್.ಐ ಹಾಗೂ ಹಲವಾರು ಕನ್ನಡ ಪರ ಸಂಘಟನೆಗಳು ಕಳೆದ ಜುಲೈ ಹಾಗೂ ಆಗಸ್ಟ್‌ನಲ್ಲಿ ಪ್ರಬಲ ಹೋರಾಟಗಳನ್ನು ನಡೆಸಿದವು. ಹೋರಾಟಕ್ಕೆ ದೊಡ್ಡ ಪ್ರಮಾಣದಲ್ಲಿ ಜನತೆಯಿಂದ ಬೆಂಬಲ ರೂಪಿತವಾದಾಗ ಸ... ವು "ಹಿಂದಿ" ಕಡ್ಡಾಯಗೊಳಿಸಿರುವ ... ಗವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳುತ್ತಿರುವುದಾಗಿ ಘೋಷಿಸಿತು. ಆದರೆ ಈ ಘೋಷಣೆ ಬೆಳೆದು ಬರುತ್ತಿದ್ದ ಹೋರಾಟವನ್ನು ತಣ್ಣಗೆ ಮಾಡುವ ಕುತಂತ್ರವಾಗಿದೆಯೆಂಬುದು ಈಗ ಸ್ಪಷ್ಟವಾಗಿದೆ.

ಇದು ಸರ್ಕಾರ ಮಾಡುವ ಘೋಷಣೆಗಳು ಮತ್ತು ಸರ್ಕಾರದ ಕೃತಿಗಳು ತದ್ವಿರುದ್ಧವೆಂದು ಮತ್ತೊಮ್ಮೆ ಸಾಬೀತು ಮಾಡಿದೆ ಎಂದು ಅವರು ಹೇಳಿದ್ದಾರೆ.

ಈ ಅಂಶ ಕನ್ನಡವನ್ನು ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಸಂಪೂರ್ಣವಾಗಿ ಜಾರಿ ಮಾಡುವುದಾಗಿ ಸರ್ಕಾರ ಮಾಡುತ್ತಿರುವ ಘೋಷಣೆಗಳಿಗೂ ಅನ್ವಯಿಸುತ್ತದೆ.

ಆದ್ದರಿಂದ ಸರ್ಕಾರ ಕನ್ನಡ ಭಾಷೆಯನ್ನು ಬೆಳೆಸುವುದರ ಬಗ್ಗೆ ತೋರಿಸುತ್ತಿರುವ ನಿರ್ಲಕ್ಷ್ಯತನವನ್ನು ವಿರೋಧಿಸಿ ಮತ್ತು ಕನ್ನಡ ಭಾಷೆಯ ಬೆಳವಣಿಗೆಗೆ ಅಡ್ಡಿಯಾಗುವ ರೀತಿಯಲ್ಲಿ ಹಿಂದಿ ಮತ್ತು ಇಂಗ್ಲೀಷ್ ಭಾಷೆಯ ಹೇರಿಕೆಯನ್ನು ಮಾಡುವಂತಹ ಸರ್ಕಾರದ ಅವೈಜ್ಞಾನಿಕ ಭಾಷಾ ನೀತಿಯನ್ನು ವಿರೋಧಿಸಿ, ಕನ್ನಡ ಆಡಳಿತ ಭಾಷೆಯಾಗಿ ಸಂಪೂರ್ಣ ಜಾರಿಯಾಗಬೇಕು. ಹಾಗೂ ಮಾತೃಭಾಷೆ ಹಾಗೂ ರಾಜ್ಯದ ಆಡಳಿತ ಭಾಷೆ ಹೊರತುಪಡಿಸಿ "ಹಿಂದಿ" ಮತ್ತು ಇಂಗ್ಲೀಷ್ ಕೂಡಾ ಸೇರಿದಂತೆ ಉಳಿದೆಲ್ಲಾ ಭಾಷೆಗಳನ್ನು ಕಡ್ಡಾಯಗೊಳಿಸುವುದನ್ನು ಎಸ್.ಎಫ್.ಐ ಇತರೆ ಕನ್ನಡ ಪರ ಸಂಘಟನೆಗಳ ಜೊತೆ ಸೇರಿ ರಾಜ್ಯದಲ್ಲಿ ಪ್ರಬಲ ಹೋರಾಟವನ್ನು ಸಂಘಟಿಸಲು ತೀರ್ಮಾನಿಸಿದೆ ಎಂದು ಅವರು ತಿಳಿಸಿದ್ದಾರೆ.

ಹೋರಾಟದ ಕಾರ್ಯಕ್ರಮ ಈ ರೀತಿಯಿದೆ.

* ನವೆಂಬರ್ 30ರವರೆಗೆ ರಾಜ್ಯದ ಪ್ರಮುಖ 75 ಶೈಕ್ಷಣಿಕ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ, ಶಿಕ್ಷಕರ, ಪೋಷಕರ ಹಾಗೂ ಕನ್ನಡ ಪರ ಸಂಘಟನೆಗಳ ಸಮಾವೇಶಗಳಾಗುವುದು.
* ಒಂದು ಲಕ್ಷ ಪೋಸ್ಟ್ ಕಾರ್ಡ್‌ಗಳನ್ನು ಮುಖ್ಯಮಂತ್ರಿಗಳಿಗೆ ಕಳುಹಿಸುವ ಚಳುವಳಿ.
* ಡಿಸೆಂಬರ್ 4 - ಇಡೀ ರಾಜ್ಯದಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆ, ಬಹಿರಂಗ ಸಭೆ, ಪ್ರದರ್ಶನ - ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಕೆ.
* ಸರ್ಕಾರವು ಈ ಎಲ್ಲಾ ಹೋರಾಟಗಳ ನಂತರವೂ ಬೇಡಿಕೆಗಳನ್ನು ಈಡೇರಿಸದಿದ್ದರೆ ರಸ್ತೆ ತಡೆ, ಮಂತ್ರಿಗಳ ಘೇರಾವ್ ಇತ್ಯಾದಿ ರೀತಿಯ ತೀವ್ರಸ್ವರೂಪದ ಹೋರಾಟ.

ಖಾಸಗೀಕರಣ "ಹೊಸ ಆರ್ಥಿಕ ನೀತಿ"ಯ ಜೀವಾಳ. ಇದಕ್ಕಾಗಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಹೀಗಳೆಯುವ, ಅವುಗಳ ಕೊರತೆಗಳನ್ನೇ ಎತ್ತಿ ತೋರಿಸುವ ಅಥವಾ ಅವುಗಳ ಕಾರ್ಯನಿರ್ವಹಣೆಗೆ ಅಡ್ಡಿ ಮಾಡುವ ಪ್ರಯತ್ನವನ್ನು ಸರಕಾರವೇ ಮಾಡುತ್ತಿದೆ. ತೈಲ ರಂಗದಲ್ಲಿ ಅದು ಹೇಗೆ ಬಿಕ್ಕಟ್ಟು ನಿರ್ವಹಿಸಿದೆ ಎಂದು ಈಗಾಗಲೇ 'ಐಕ್ಯರಂಗ'ದ 31-10-93ರ ಸಂಚಿಕೆಯಲ್ಲಿ ಓದಿರುವಿರಿ. ಇಲ್ಲಿ ಔಷಧಿ ಉತ್ಪಾದನೆ ರಂಗದಲ್ಲಿ ಇದು ಹೇಗೆ ಕೆಲಸ ಮಾಡುತ್ತಿದೆ ಎಂದು ಓದಿ.

ಖಾಸಗೀಕರಣದಲ್ಲಿ ವಿಷವಾಗುವ ಔಷಧ

ಸರ್ಕಾರ ಔಷಧ ನೀತಿಯ ಬಗೆಗೆ ಒಂದು ಟಿಪ್ಪಣಿಯನ್ನು ಸಂಸತ್ ಸದಸ್ಯರಿಗೆಲ್ಲ ನೀಡಿದೆ. ಹೊಸ ಔಷಧ ನೀತಿ ಬರಬಹುದೆಂಬ ಸೂಚನೆ ಇದು. ಉದಾರೀಕರಣದ ಹಿನ್ನೆಲೆಯಲ್ಲಿ ಔಷಧ ಉದ್ದಿಮೆಯನ್ನೂ ಉದಾರೀಕರಿಸಲು ಸಾಮ್ರಾಜ್ಯಶಾಹಿಗಳ, ಗ್ಯಾಟ್‌ನ ಒತ್ತಡ ಎಂದಿಗಿಂತಲೂ ಹೆಚ್ಚಾಗಿಯೇ ಇದೆ. ಹಿಂದೆ ಸರ್ಕಾರ ಇಂತಹ ಒತ್ತಡಗಳಿಗೆ ಕ್ರಮೇಣ ಮಣಿಯುತ್ತ ಬಂದಿದೆ. 1978ರ ಔಷಧ ನೀತಿ ಸರ್ಕಾರದ ಇಂತಹ ಒಲವನ್ನು ತೋರಿತ್ತು.

ಉದ್ದಿಮೆಯ ಪ್ರಾರಂಭಿಕ ವರ್ಷಗಳು

ನಮ್ಮ ಔಷಧಿ, ಉದ್ದಿಮೆ ಹಲವು ವಲಯಗಳನ್ನು ಮೊದಲಿನಿಂದಲೂ ಒಳಗೊಂಡು ಬಂದಿದೆ. ಬಹುರಾಷ್ಟ್ರೀಯ ಕಂಪನಿಗಳು, ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯ, ಖಾಸಗಿ ವಲಯ, ಅದರಲ್ಲಿ ಸಣ್ಣ ಕೈಗಾರಿಕಾ ವಲಯ ಇತ್ಯಾದಿ, ಭಾರತದ ವಿಜ್ಞಾನಿಗಳಾದ ಆಚಾರ್ಯ ಪಿ.ಸಿ.ರೇ, ಪ್ರೊ.ಟಿ.ಕೆ. ಗಜ್ಜಾರ್ ನಮ್ಮ ಔಷಧ ಉದ್ದಿಮೆಯ ಮೂಲಪುರುಷರಾದರೂ ಮುಂದೆ ಬ್ರಿಟಿಷ್ ಬಹುರಾಷ್ಟ್ರೀಯ ಕಂಪನಿಗಳು ಈ ಉದ್ದಿಮೆಯಲ್ಲಿ ಪ್ರಬಲರಾದರು.

ಈ ಪರಿಸ್ಥಿತಿ ಸ್ವಾತಂತ್ರ್ಯನಂತರವೂ ಮುಂದುವರೆಯಿತು. ಬಹುರಾಷ್ಟ್ರೀಯ ಕಂಪನಿಗಳ ಪ್ರಾಬಲ್ಯ ಹಾಗೇ ಉಳಿಯಿತು. ಆಂಟಿಬಯೊಟಿಕ್‌ಗಳು ಬಂದಾಗ ಈ ಕಂಪನಿಗಳು ಬೆಲೆಯನ್ನು ತೀವ್ರವಾಗಿ ಏರಿಸುವುದರ ಮೂಲಕ ಅಪಾರ ಲಾಭಗಳಿಸಿದವು. ಭಾರತ ಸರ್ಕಾರ ಆಗ ತಂತ್ರಜ್ಞಾನಕ್ಕಾಗಿ ಈ ಬಹುರಾಷ್ಟ್ರೀಯ ಕಂಪನಿಗಳ ಕಡೆಗೆ ನಂತರ ಪಾಶ್ಚಿಮಾತ್ಯ ದೇಶಗಳತ್ತ ನೋಡಿತು. ಕೊನೆಗೂ ಹಿಂದುಸ್ತಾನ್ ಆಂಟಿಬಯೊಟಿಕ್ಸ್ ಅನ್ನು ವಿಶ್ವಸಂಸ್ಥೆಯ ವಿಶ್ವ ಆರೋಗ್ಯ ಸಂಸ್ಥೆಯ ನೆರವಿನಿಂದ 1954 ರಲ್ಲಿ ಸ್ಥಾಪಿಸಲಾಯಿತು. ಅನಂತರ ಸೋವಿಯತ್ ಯೂನಿಯನ್ನಿನ ನೆರವಿನಿಂದ ಐ.ಡಿ.ಪಿ.ಎಲ್.(ಇಂಡಿಯನ್ ಡ್ರಗ್ಸ್ ಅಂಡ್ ಫಾರ್ಮುಸುಟಿಕಲ್ಸ್ ಲಿಮಿಟೆಡ್) ಅನ್ನು ಸ್ಥಾಪಿಸಲಾಯಿತು.

ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ಬರುತ್ತಲೇ ಆಂಟಿ ಬಯೋಟಿಕ್ಸ್‌ಗಳ ಬೆಲೆ ತೀವ್ರವಾಗಿ ಇಳಿಯಿತು. ಬಹುರಾಷ್ಟ್ರೀಯ ಕಂಪನಿಗಳೂ ಬೆಲೆ ಇಳಿಸದೇಕಾಗಿ ಬಂತು. ಇದೇ ಸಮಯದಲ್ಲಿ ಕಂಪನಿಗಳು ಸಗಟು ಔಷಧದ ಉತ್ಪಾದನೆಯಲ್ಲಿ ತೊಡಗಿದವು. ಭಾರತೀಯ ಖಾಸಗೀ ವಲಯವೂ ಉದ್ದಿಮೆಗಳ ಸ್ಥಾಪನೆಗೆ ತೊಡಗಿತು.

ಮೂಲ ಔಷಧ ವಸ್ತುವನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. ಇದನ್ನು ಸಗಟು ಔಷಧವೆನ್ನುತ್ತಾರೆ. ಈ ವಸ್ತುವನ್ನು ಬಳಸಿ ವಿವಿಧ ಮಾತ್ರೆ, ಇಂಜೆಕ್ಷನ್ ಇತ್ಯಾದಿಗಳನ್ನು ಉತ್ಪಾದಿಸುತ್ತಾರೆ. ಇವುಗಳಿಗೆ ಫಾರ್ಮುಲೇಷನ್ ಎನ್ನುತ್ತಾರೆ. ಸಗಟು ಔಷಧಿ ಉತ್ಪಾದಿಸಲು ತಂತ್ರಜ್ಞಾನದ ಅವಶ್ಯಕತೆ ಹೆಚ್ಚಾಗೇ ಇರುತ್ತದೆ. ಫಾರ್ಮುಲೇಷನ್‌ಗಳ ತಯಾರಿಕೆ ಸರಳವಾದದ್ದು.

ಕೋಷ್ಟಕ 1

ಕಂಪನಿ	ಮಾರಾಟ ಲಾಭದ ಅನುಪಾತ 1987-88	1990-91	1991-92
1. ರಾನಬಾಕ್ಸಿ	2.91	6.30	7.00
2. ಅಲೆಂಬಿಕ್	1.23	3.10	3.04
3. ಎ.ಎಮ್.ಸಾರಾಭಾಯ್	1.55	--	--
4. ಯೂನಿಕೆಮ್	2.05	4.25	5.77
5. ಗ್ಲಾಕ್ಸೊ	7.17	6.39	5.04
6. ಫಿಫಿಝರ್	1.83	6.88	3.33
7. ಹೆಕ್ಸ್ಟ್	1.11	5.00	4.63
8. ಬೂಟ್ಸ್	11.43	13.47	12.33
9. ಪಾರ್ಕ್‌ಡೆವಿಸ್	4.25	7.82	7.47
10. ಜರ್ಮನ್‌ರೆಮ್	2.87	5.70	3.82
11. ಎಸ್‌ಕೆಎಫ್	15.21	10.09	2.93
12. ರೋಕೆ	4.13	3.08	2.75
13. ಸ್ಯಾಂಡೋಜ್	1.80	6.99	6.50
14. ಅಡ್ವೊಟ್	--	3.13	2.34
15. ಇನ್‌ಫಾರ್	11.78	4.14	10.54
ಸರಾಸರಿ	4.21	6.10	5.05

ಹಾತಿ ಸಮಿತಿ

ಭಾರತದ ಔಷಧಿ ಉದ್ದಿಮೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ವಿಶ್ಲೇಷಣೆ ಮಾಡಿ ವರದಿ ನೀಡಲು ಭಾರತ ಸರ್ಕಾರ 1974 ರಲ್ಲಿ ಹಾತಿ ಸಮಿತಿಯನ್ನು ನೇಮಿಸಿತು. ವಿದೇಶೀ ಬಂಡವಾಳಿಗರು ಸಗಟು ಔಷಧವನ್ನು ಬಾರತದೊಳಗೆ ಉತ್ಪಾದಿಸದೆ ಹೊರಗೆ ಉತ್ಪಾದಿಸುವುದನ್ನು ಹಾತಿ ಸಮಿತಿ ಟೀಕಿಸಿತು. ಆವಶ್ಯಕ ಔಷಧಿಗಳ ಉತ್ಪಾದನೆಯಲ್ಲೂ ಹಿಂದೆ ಬೀಳುವುದನ್ನು ಅದು ಗಮನಿಸಿತು.

ಔಷಧಗಳಿಗೆ 'ವ್ಯಾಪಾರ ನಾಮ' ಇಡುವ ಬದಲು ನಿಜವಾದ ವೈಜ್ಞಾನಿಕ ಹೆಸರುಗಳನ್ನಿಡಬೇಕು, ಅವಶ್ಯಕ ಔಷಧಿಗಳ ಉತ್ಪಾದನೆ ಹೆಚ್ಚಬೇಕು, ಔಷಧಗಳ ಬೆಲೆಯನ್ನು ಹತೋಟಿಯಲ್ಲಿಡದೇಕೆಂದು ಸಮಿತಿ ಶಿಫಾರಸ್ಸು ಮಾಡಿತು. ವಿದೇಶೀ ಬಂಡವಾಳದ ಪಾಲನ್ನು ಶೇ. 40 ರಿಂದ 26 ಕ್ಕೆ ಇಳಿಸದೇಕೆಂದೂ ಅದು ಶಿಫಾರಸ್ಸು ಮಾಡಿತು.

1978 ರ ಔಷಧಿ ನೀತಿ

ಹಾತಿ ಸಮಿತಿಯ ಶಿಫಾರಸ್ಸುಗಳ ಆಧಾರದಲ್ಲಿ 1978ರ ಔಷಧ ನೀತಿ ಹೊರಬಂತು. ಈ ನೀತಿ ಔಷಧಿಗಳ ಬೆಲೆ ಹತೋಟಿಯಲ್ಲಿಡಲು ಔಷಧಿಗಳನ್ನು ನಾಲ್ಕು ವರ್ಗಗಳನ್ನಾಗಿ ವಿಂಗಡಿಸಿತು.

1) ಜೀವ ಉಳಿಸುವ ಔಷಧಿಗಳು
2) ಅವಶ್ಯಕ ಔಷಧಗಳು
3) ಕಡಿಮೆ ಅವಶ್ಯಕ ಔಷಧಗಳು
4) ಅನವಶ್ಯಕ/ಸರಳ ಪರಿಹಾರ ಔಷಧಿಗಳು

ಈ ನಾಲ್ಕು ವರ್ಗಗಳಲ್ಲಿ ಮೊದಲ ಮೂರು ವರ್ಗಗಳ ಮೇಲೆ ಬೆಲೆ ಹತೋಟಿ ಇಡಲಾಯಿತು. ಇವುಗಳ ಮೇಲೆ ಲಾಭವನ್ನು ಶ್ರೇಣೀಕರಿಸಲಾಯಿತು. ಅಂದರೆ ಜೀವ ಉಳಿಸುವ ಔಷಧಿಗಳ ಮೇಲೆ ಅತಿ ಕಡಮೆ ಲಾಭ ಇತ್ಯಾದಿ. ಅತ್ಯವಶ್ಯಕ ಔಷಧಿಗಳ ಬೆಲೆಗಳು ಕಡಿಮೆ ಇರುವಂತೆ ನೀತಿ ರೂಪಿಸಲಾಯಿತು. ಈ ಕ್ರಮಗಳಿಂದ ಔಷಧಿ ಉದ್ದಿಮೆ ತೀವ್ರವಾಗಿ ಬೆಳೆಯಿತು. ವಿಶ್ವಸಂಸ್ಥೆ ಎಲ್ಲ ಅವಶ್ಯಕ ಔಷಧಿಗಳ ದೇಶೀಯವಾಗಿ ಉತ್ಪಾದಿಸಬಲ್ಲ ದೇಶ ಭಾರತ ಎಂದು ಗುರುತಿಸುವಂತಾಯಿತು.

ಈ 1978ರ ನೀತಿಯ ಒಂದು ದೋಷವೆಂದರೆ ಅದು ಉತ್ಪಾದನೆಯ ನಿಯಂತ್ರಣವನ್ನು ಮಾಡದೇ ಇದ್ದದ್ದು ಔಷಧಗಳ ನಾಮಕರಣದ ಬಗೆಗೂ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಾಗಲಿಲ್ಲ. ಕೆಲವು ಬಹುರಾಷ್ಟ್ರೀಯ ಕಂಪನಿಗಳು ದೆಹಲಿಯ ಉಚ್ಚ ನ್ಯಾಯಾಲಯದಿಂದ ಇದರ ವಿರುದ್ಧ ತಡೆಯಾಜ್ಞೆ ತಂದವು.

ಸಾರ್ವಜನಿಕ ವಲಯವನ್ನು ನಿರ್ವೀರ್ಯಗೊಳಿಸಿದ್ದು

ಈ ಅವಧಿಯಲ್ಲಿ ಅಧಿಕಾರಶಾಹಿತ್ವ, ಭ್ರಷ್ಟಾಚಾರ, ಅಸಮರ್ಥತೆ ಇತ್ಯಾದಿಗಳಿಂದಾಗಿ ಅಂದಾದುಂದಿ ವ್ಯವಹಾರ ಮಾಡಿ ತೀವ್ರ ಹಾನಿ ಅನುಭವಿಸಿದವು. ಭಾರತದ ಖಾಸಗೀ ಕ್ಷೇವಿತ್ರದ ಉದ್ದಿಮೆ ಈಗ ಭದ್ರವಾಗಿ ತಳವೂರಿದ್ದರಿಂದ ಅವು ಬಹುರಾಷ್ಟ್ರೀಯ ಕಂಪನಿಗಳ ಜತೆ ಸೇರಿ 1978ರ ಔಷಧ ನೀತಿಯನ್ನು ಬದಲಿಸಲು ಒತ್ತಡ ತರತೊಡಗಿದವು. ಉದ್ದೇಶಪೂರ್ವಕವಾಗಿ ಅವು ಅವಶ್ಯಕ ಔಷಧಿಗಳ ಉತ್ಪಾದನೆಯನ್ನೇ ಕಡಿಮೆ ಮಾಡಿದವು.

1986ರ ಔಷಧ ನೀತಿ

1978ರ ಔಷಧ ನೀತಿಯನ್ನು ಪುನರ್ವಿಮರ್ಶಿಸಲು 1983ರಲ್ಲಿ ನ್ಯಾಶನಲ್ ಡ್ರಗ್ಸ್ ಅಂಡ್ ಫಾರ್ಮಾಸುಟಿಕಲ್ಸ್ ಡೆವಲಪ್‌ಮೆಂಟ್ ಕೌನ್ಸಿಲ್ ಅನ್ನು ನೇಮಕ ಮಾಡಲಾಯಿತು. ಈ ಮಂಡಳಿಯಲ್ಲಿ ಔಷಧ ಉದ್ದಿಮೆಯ ವಿವಿಧ ಪ್ರತಿನಿಧಿಗಳನ್ನು ತುರುಕಲಾಯಿತು. 1986ರ ಡಿಸೆಂಬರ್‌ನಲ್ಲಿ ಔಷಧ ನೀತಿ ಪ್ರಕಟವಾಯಿತು.

ಈ ನೀತಿಯನ್ನು ಸಂಬಂಧಪಟ್ಟ ಮಂತ್ರಿಗಳು ಸಂಸತ್ ಅಧಿವೇಶನದ ನಂತರ ಪತ್ರಿಕಾ ಗೋಷ್ಠಿಯೊಂದರಲ್ಲಿ ಪ್ರಕಟಿಸಿದರು. ಈ ನೀತಿ ಬೆಲೆ ಹತೋಟಿಯನ್ನು 347 ಸಗಟು ಔಷಧಿಗಳಿಂದ 166 ಔಷಧಿಗಳಿಗೆ ಇಳಿಸಿತು. ಬೆಲೆ ಹತೋಟಿ ವರ್ಗಗಳನ್ನು ಎರಡಕ್ಕೆ ಇದು ಇಳಿಸಿತು. ಇದಲ್ಲದೇ ಇನ್ನೂ ಹಲವು ಉದಾರೀಕರಣದ ಕ್ರಮಗಳು ಬಂದವು. ಹಾತಿ ಸಮಿತಿಯ ವರದಿ ಆಧರಿಸಿ ಬಂದಿದ್ದ ಹಿಂದಿನ ಔಷಧ ನೀತಿಗೆ ಇದು ತೀವ್ರ ಹೊಡೆತ ನೀಡಿತ್ತು.

ಮುಂದೆ 1990ರಲ್ಲಿ ಎಂ.ಎಸ್. ಗುರುಪಾದಸ್ವಾಮಿಯವರು ಮಂತ್ರಿಯಾದಾಗ ಈ ನೀತಿಯನ್ನು ಸರಿಪಡಿಸುವ ಗಂಭೀರ ಕ್ರಮಗಳ ವಿಚಾರ ಮಾಡಿದಂತೆ ಕಂಡರೂ ಅವರ ಸರ್ಕಾರವೇ ಅಲ್ಪಾಯುಷಿಯಾದ್ದರಿಂದ ಮಹತ್ವದ್ದೇನೂ ಆಗಲಿಲ್ಲ.

ಇಂತಹ ನೀತಿಗಳಿಂದಾಗಿ ವಿವಿಧ ಬೆಲೆಗಳ ಪದ್ಧತಿ ಔಷಧಿ ಕ್ಷೇತ್ರದಲ್ಲಿ ಬೆಳೆದು ಬಂದಿದೆ. ಅವಶ್ಯಕ ಔಷಧಿಗಳ ಉತ್ಪಾದನೆಗೆ ಮಹತ್ವವಿಲ್ಲ. ಲಾಭ ಹೆಚ್ಚಾಗಿರುವ ಔಷಧಿಗಳನ್ನು ಮಾತ್ರ ಹೆಚ್ಚಾಗಿ ಉತ್ಪಾದಿಸಲಾಗುತ್ತಿದೆ. ಫಾರ್ಮುಲೇಷನ್‌ಗಳ ಸಂಖ್ಯೆ ಅತಿ

ಕನಿಷ್ಟ ಕೂಲಿ ಪ್ರಕಟಣೆಯಲ್ಲಿ ಹಿಂಜರಿಕೆ ವಿಳಂಬ ಗೊಂದಲ



ಪುಟ 3ರಿಂದ

ತ್ತದೆ. 1984 ರಲ್ಲೇ ಸರಾಸರಿ ಸೂಚ್ಯಂಕ 520 ಇತ್ತು. ಆದ್ದರಿಂದ ಅಜೇಜ್‌ಸೇಠರು ನೋಟಿಫೈ ಮಾಡಿದ್ದು ಪಾಯಿಂಟಿಗೆ 5 ಪೈಸೆ ತುಟ್ಟಿಭತ್ಯೆ ಏರಿಕೆ ಎಂದು ಹೇಳುವುದಾದರೆ ತುಟ್ಟಿಭತ್ಯೆ ಗರಿಷ್ಠ ಮಿತಿ ಆಗಲೇ ತಲುಪಲಾಗಿದ್ದು ಬೆಲೆಯೇರಿಕೆಯೊಂದಿಗೆ 'ಬದಲಾಗುವ ತುಟ್ಟಿ ಭತ್ಯೆ' (ವಿ.ಡಿ.ಎ) ಯ ಅಂಶಕ್ಕೆ ಅರ್ಥವಿಲ್ಲದಾಗುತ್ತದೆ. ಏಕೆಂದರೆ ಆಗ ತುಟ್ಟಿಭತ್ಯೆ ಬದಲಾಗುವುದೇ ಇಲ್ಲ. ಗೊಂದಲ ಉಂಟಾಗಿರುವ ರೀತಿ ಇದು. ಇದು ಉದ್ದೇಶಪೂರ್ವಕವಾಗಿಯಲ್ಲದಿದ್ದರೆ ಅದರ ಹಿಂದಿರುವ ಬೇರೆ ಉದ್ದೇಶವಾದರೂ ಏನು?

ಮಾಲಕರು ಈ ನೋಟಿಫಿಕೇಶನ್ ವಿರುದ್ಧ ಅನವಶ್ಯಕವಾಗಿ ಹೈಕೋರ್ಟಿಗೆ ಹೋದರು. ಕಾರ್ಮಿಕರು ಸಕಾರಣವಾಗಿಯೇ ಹೋದರು. ಹೈಕೋರ್ಟ್ ಅಂತಿಮವಾಗಿ ಬದಲಾಗುವ ತುಟ್ಟಿಭತ್ಯೆ (ವಿ.ಡಿ.ಎ)ಗೆ ಸಂಬಂಧಪಟ್ಟ ಅಂಶಗಳನ್ನೆಲ್ಲಾ ರದ್ದು ಮಾಡಿ 24.1.1985ರ ತನ್ನ ತೀರ್ಪಿನಲ್ಲಿ ಈ ಅಂಶಗಳನ್ನೆಲ್ಲಾ 1.4.1985 ರಿಂದ ಜ್ಯಾರಿಗೆ ಬರುವಂತೆ ಪರಿಷ್ಕರಿಸಬೇಕೆಂದು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿತು. ಅದರ ಪ್ರಕಾರ ಸರಕಾರ ಈಗ ಜ್ಯಾರಿಯಲ್ಲಿರುವ ನೋಟಿಫಿಕೇಷನ್ 470 ಪಾಯಿಂಟುಗಳಿಂದ ಪ್ರತಿ ಪಾಯಿಂಟು ಏರಿಕೆಗೆ ಮೇಲೆ ಹೇಳಿದ ಮೂರು ವೇತನ ಶ್ರೇಣಿಗಳಿಗೆ ಅನುಕ್ರಮವಾಗಿ 2 ಪೈಸೆ, 2.5 ಪೈಸೆ ಹಾಗೂ 3 ಪೈಸೆ ಎಂದು ನಿಗದಿಪಡಿಸಲಾಯಿತು.

1984 ರಲ್ಲಿ ಹೊರಡಿಸಿದ ಬಹಳಷ್ಟು ಕನಿಷ್ಟ ಕೂಲಿ ಸೂಚನೆಗಳು ಈಗ ಪರಿಷ್ಕರಣಗೊಳ್ಳುತ್ತಿವೆ. ಈ ಕೆಳಗಿನ ಉದ್ಯೋಗಗಳಲ್ಲಿ ಕನಿಷ್ಟ ಕೂಲಿ ಸಲಹಾ ಸಮಿತಿಯೊಂದಿಗೆ ಸಮಾಲೋಚನೆಯ ಘಟ್ಟ ಮುಗಿದು ಸರಕಾರ ಈಗ ತನಗೆ ಸರಿಕಂಡ ಕನಿಷ್ಟ ಕೂಲಿಗಳನ್ನು ನಿಗದಿಪಡಿಸಬಹುದಾಗಿದೆ.

ಉದ್ಯೋಗ	ಕರಡು ಪ್ರಕಟಣೆ ಹೊರಡಿಸಿದ ದಿನಾಂಕ
ಪಿಂಗಾಣಿ ವಸ್ತುಗಳು	11.4.1990
ಜಿನ್ನಿಂಗ್	16.5.1990
ರೈಸ್ - ಹಿಟ್ಟು - ಬೇಳೆ ಗಿರಣಿ	1.6.1990
ಸಿಹಿತಿಂಡಿ	19.12.1991
ಕಾಫಿ ಕ್ಯೂರಿಂಗ್	19.12.1991
ಕೃಷಿ	19.12.1991
ಹೋಟೆಲ್‌ಗಳು	1990 ಮತ್ತು 91

1984 ರಲ್ಲಿ ಹೊರಡಿಸಿದ ಸೂಚನೆಗಳಲ್ಲದೆ ಇನ್ನೂ ಕೆಲವು ಹೊಸ ಕರಡು ನೋಟಿಫಿಕೇಷನ್‌ಗಳೂ ಕನಿಷ್ಟ ಕೂಲಿ ಸಲಹಾ ಸಮಿತಿಯೊಂದಿಗೆ ಸಮಾಲೋಚನೆ ನಡೆಸುವ ಘಟ್ಟ ದಾಟಿವೆ. ಅವೆಂದರೆ ಪ್ಲಾಂಟೇಷನ್ (ಸಿಬ್ಬಂದಿಯೇತರ) -1 3.4.88, ಲೇಪನ ಕೆಲಸಗಳು-16.6.92 ಬಿಸ್ಕತ್ತು ತಯಾರಿಕೆ-6.11.92. ಈ ಉದ್ಯೋಗಗಳಲ್ಲೂ ಸರಕಾರ ತಕ್ಷಣ ಅಂತಿಮ ನೋಟಿಫಿಕೇಷನ್ ಜ್ಯಾರಿ ಮಾಡಲು ಸಾಧ್ಯವಿದೆ. ಸರಕಾರ ವಿದ್ಯಾಸಂಸ್ಥೆಗಳ ಬಗ್ಗೆಯೂ ಕರಡು ಸೂಚನೆ ಪ್ರಕಟಿಸಿದೆ. ಆದರೆ ಇದು ಇನ್ನೂ ಕನಿಷ್ಟ ಕೂಲಿ ಸಲಹಾ ಸಮಿತಿಯ ಮಟ್ಟದಲ್ಲೇ ವಿಲೇವಾರಿಯಾಗದೆ ಉಳಿದಿದೆ.

1984 ರ ನೋಟಿಫಿಕೇಷನ್‌ಗಳಲ್ಲದೆ 1986ರಲ್ಲಿ ಜ್ಯಾರಿ ಮಾಡಿದ ಎರಡು ನೋಟಿಫಿಕೇಶನ್‌ಗಳಿವೆ - ನಿವಾಸ ಹೋಟೆಲ್‌ಗಳು ಮತ್ತು ತಿಂಡಿಮನೆಗಳು ಹಾಗೂ ಕಾಫಿ ಕ್ಯೂರಿಂಗ್.

ಈ ಎರಡೂ ನೋಟಿಫಿಕೇಷನ್‌ಗಳಲ್ಲಿ 1982 ರಲ್ಲಿ ನೋಟಿಫಿಕೇಷನ್‌ಗಳಲ್ಲಿ ಮಾಡಿದ ರೀತಿಯಲ್ಲಿ (1981ರ ರಾಜ್ಯದ ಸರಾಸರಿ ಸೂಚ್ಯಂಕ 415 ಪಾಯಿಂಟಿನ ನಂತರ ಪ್ರತಿ 1 ಪಾಯಿಂಟ್ ಏರಿಕೆಗೆ 2 ಪೈಸೆ ದರದಲ್ಲಿ) ತುಟ್ಟಿಭತ್ಯೆ ಪರಿಕಲ್ಪನೆಯನ್ನು ಸೇರಿಸಲಾಗಿದೆ. 1986 ರ ನೋಟಿಫಿಕೇಶನ್‌ನಲ್ಲಿ ಹೋಟೆಲ್ ಕಾರ್ಮಿಕರಿಗೆ ಮೂಲ ವೇತನದಲ್ಲಿ ಏರಿಕೆ ತಿಂಗಳಿಗೆ 4 ರೂ. ಮಾತ್ರ. ತುಟ್ಟಿ ಭತ್ಯೆ ದಿನಕ್ಕೆ 30 ಪೈಸೆ ಅಂದರೆ ತಿಂಗಳಿಗೆ ರೂ. 7.80 ಅದರೆ 4 ವರ್ಷಗಳ ನಂತರ ಸಂಬಳ ಪರಿಷ್ಕರಣದಿಂದ ... 11.80. ಅಂದರೆ ವಾರ್ಷಿಕವಾಗಿ 3 ರೂ ಹೆಚ್ಚಳವಷ್ಟೆ. 1986 ರಲ್ಲಿ ಸಂಬಳ ಪರಿಷ್ಕರಣಗೊಳ್ಳುವ ಮೊದಲು 1967 ರಲ್ಲಿ ಅದು 60 ರೂ. 1976 ರಲ್ಲಿ 76 ರೂ. ಎಂದು ನಿಗದಿಯಾಗಿತ್ತು. 1982 ರಲ್ಲಿ ಅದು 243 ರೂ. ಆಯಿತು. ಈ ಮೂರು ಪರಿಷ್ಕರಣಗಳ ಅವಧಿಯಲ್ಲಿ ವಾರ್ಷಿಕ ಹೆಚ್ಚಳ ದರ ಅನುಕ್ರಮವಾಗಿ ಸರಾಸರಿ ರೂ. 6 ಹಾಗೂ ರೂ. 20 ಆದರೆ 24.1.85 ರ ಹೈಕೋರ್ಟ್ ಆಜ್ಞೆ ಹಾಗೂ ಫೆಬ್ರವರಿ 1986ರ ಸರಕಾರದ ನೋಟಿಫಿಕೇಷನ್‌ನ ಪರಿಣಾಮವಾಗಿ ತುಟ್ಟಿಭತ್ಯೆಯನ್ನು ಸೇರಿಸಿದ ಮೇಲೆ ಈ ರೀತಿ ಸಂಬಳ ಪರಿಷ್ಕರಣದ ಪರಿಕಲ್ಪನೆಗೆ ತಿಲಾಂಜಲಿ ನೀಡಲಾಗಿದೆ. ಸರಕಾರ ಈಗಾಗಲೇ ಎರಡು ಬಾರಿ ಹೋಟೆಲ್ ಕಾರ್ಮಿಕರ ಸಂಬಳದ ಪರಿಷ್ಕರಣದ ಬಗ್ಗೆ 1990 ಹಾಗೂ 1991 ರಲ್ಲಿ ಕರಡು ಸೂಚನೆಗಳನ್ನು ಜ್ಯಾರಿ ಮಾಡಿದೆ. 1990 ರಲ್ಲಿ ಸಂಬಳ ಕಡಿಮೆ ಮಾಡುವ ಪ್ರಸ್ತಾಪವಿತ್ತು. 1991 ರಲ್ಲಿ ಸಂಬಳದಿಂದ ಶೇಕಡಾವಾರು ದರದಲ್ಲಿ ಕಾರ್ಮಿಕರು ಹೋಟೆಲಿನಲ್ಲಿ ಬಳಸುವ ಆಹಾರಕ್ಕೆ ಕಡಿತಮಾಡುವ ಪ್ರಸ್ತಾಪವಿತ್ತು. ಈ ಪ್ರಸ್ತಾಪಗಳು 1993 ರಲ್ಲಿ 'ಕನಿಷ್ಟ ಕೂಲಿ ಸಲಹಾ ಸಮಿತಿ'ಯಲ್ಲಿ ಚರ್ಚೆಗೆ ಬಂದವು. ಆದರೆ ಒಮ್ಮತಾಭಿಪ್ರಾಯ ಸಾಧ್ಯವಾಗಲಿಲ್ಲ.

ಕಾಫಿ ಕ್ಯೂರಿಂಗ್‌ನಲ್ಲಿ ಆರಿಸುವವರಿಗೆ (ಗಾರ್ಬ್ಲರ್ಸ್) ಆಶ್ರಯ ಕೂಲಿ (Fallback Wage) ದಿನಕ್ಕೆ ರೂ. 1.40 ಇದ್ದದ್ದನ್ನು 1982 ರಲ್ಲಿ (485 ಪಾಯಿಂಟುಗಳಲ್ಲಿ) ರೂ. 2.80 ಗೆ ಏರಿಸಲಾಯಿತು. 1986 ರಲ್ಲಿ 470 ಸೂಚ್ಯಂಕದಲ್ಲಿ ಅಷ್ಟೇ ಉಳಿಸಿಕೊಳ್ಳಲಾಯಿತು. 1991 ರಲ್ಲಿ ಜ್ಯಾರಿಗೊಳಿಸಿದ ಸದ್ಯದ ನೋಟಿಫಿಕೇಶನ್ 976 ಪಾಯಿಂಟುಗಳಲ್ಲಿ ...

ಕೋಷ್ಟಕ 2

ಕೌಟುಂಬಿಕ ಖರ್ಚಿನಲ್ಲಿ ವೈದ್ಯಕೀಯ ವೆಚ್ಚದ ಪಾಲು

(ಕೋಟಿ ರೂಪಾಯಿಗಳಲ್ಲಿ) (ಜನವರಿ 1985)

ಔಷಧಗಳ ಖರ್ಚು	ಒಟ್ಟು ವೈದ್ಯಕೀಯ ಖರ್ಚು	ಶೇಕಡಾವಾರು
240.7	443.42	54.28
[illegible]05.22	1100.72	64.06
945.92	1544.14	61.26

...ಂದಾಜಿನ ಪ್ರಕಾರ 40,000

...ಮಂತರ

...ಗನುಗುಣವಾಗಿ

...ೀಕ ಔಷಧಿ ಉತ್ಪಾದಕರು ...ಔಷಧ ಕೊಳ್ಳಬಲ್ಲವರಿಗಾಗಿ ...ರೆಯುತ್ತಿದ್ದಾರೆ. ಶೇ. 5 ...ಉತ್ಪಾದಿಸಲು ಒಂದು ಸಾವಿ...ರು ಪೈಪೋಟಿ ನಡೆಸಿದ್ದಾರೆ. ...ಣಿಗೆ ತಡೆಯೊಡ್ಡುತ್ತದೆ. ಈ ...ಬೆಲೆ ಹತೋಟಿ ಸಾಧಿಸು... ಸರ್ಕಾರ ಮತ್ತು ಉತ್ಪಾದ...ಟಿಯನ್ನೇ ತೆಗೆದು ಹಾಕುವು...ಾರ' ಎಂಬ ವಾದ ಹೂಡುತ್ತಿ...ಲೇಷನ್‌ಗಳನ್ನು ಮಿತಗೊ...ರುವುದೇ ಇದಕ್ಕೆ ನಿಜವಾದ ...ಾರವಾಗುತ್ತದೆ.

...ದರಿಕೆಗಳು

...ಗಳು ಮೂಲಕ ಹೊಸ ಬೆದ...ದೆ. ಡಂಕೆಲ್ ಪ್ರಸ್ತಾಪ ...ಪೇಟೆಂಟ್ಸ್ ಕಾಯಿದೆಯನ್ನು ...ನ್ನುತ್ತದೆ.

...ಗಳಲ್ಲಿ ಎರಡು ವಿಧ: *1.* ...ದು ಆಯಾ ಉತ್ಪನ್ನವನ್ನು ...ೆ. ಒಬ್ಬ ಉತ್ಪಾದಕ ಈ ...ಯಾವುದೇ ವಿಧಾನದಿಂದ ಈ ...ೆರೆ ಯಾರೂ ಉತ್ಪಾದಿಸು...

ಪೆಟೆಂಟ್: ಭಾರತೀಯ ...ಈ ತರಹದ್ದು. ಇಲ್ಲಿ ಉತ್ಪಾ...ವನ್ನು ಪೆಟೆಂಟ್ ಮಾಡಲಾ...ದರೂ ಅದೇ ವಸ್ತುವನ್ನು ...ತ್ಪಾದಿಸಬಹುದು.

...ಹಳ ಮುಖ್ಯ ಯಾಕೆಂ...ಟೆಂಟ್ ಬಂದರೆ ವಿದೇಶೀ ... /ಇಲ್ಲವೇ ಅವರು ಬರೇ ...ದಂತಹ ಔಷಧವನ್ನು ನಾವು ...ಂದ ಉತ್ಪಾದಿಸುವಂತಿಲ್ಲ.

ಆಗ ಬಹುರಾಷ್ಟ್ರೀಯ ಕಂಪನಿಗಳು ಹೇಳುವ ಬೆಲೆ ತೆತ್ತು ನಾವು ಈ ಔಷಧಗಳನ್ನು ಕೊಳ್ಳಬೇಕಾಗುತ್ತದೆ.

ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಬಹಳ ಬೆಳವಣಿಗೆಗಳಾಗುತ್ತಿವೆ. ಹೊಸ ಪೆಟೆಂಟ್ ಕಾಯಿದೆ ತಂದರೆ ಇಂತಹ ಹೊಸ ತಂತ್ರಜ್ಞಾನದ ಫಲಗಳಿಂದಲೂ ನಾವು ವಂಚಿತರಾಗುತ್ತೇವೆ.

ಇನ್ನೊಂದು ಬೆದರಿಕೆ ಉತ್ಪಾದಕರಿಂದ ಬರುತ್ತಿದೆ. ಅವರು ಔಷಧಗಳಿಗೆ ಹೆಚ್ಚಿನ ಬೆಲೆ ಮತ್ತು ಕಡಿಮೆ ನಿಯಂತ್ರಣಗಳನ್ನು ಬೇಡಿಕೆ ಇಟ್ಟಿದ್ದಾರೆ. ಕಡಿಮೆ ನಿಯಂತ್ರಣ ಹೆಚ್ಚಿನ ಬೆಲೆಗಳ ಬಗ್ಗೆ ನಮ್ಮ ಹಿಂದಿನ ಅನುಭವಗಳು ಬಹಳ ಕಹಿಯಾಗಿವೆ.

ಕಡಿಮೆ ಬೆಲೆಯಿಂದಾಗಿ ನಮ್ಮ ಲಾಭ ತೀವ್ರವಾಗಿ ಕಡಿಮೆಯಾಗಿದೆ ಎಂದು ಉತ್ಪಾದಕರು ಹೇಳುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಅದು ಆಗಿಲ್ಲ. ಇದನ್ನು ಕೋಷ್ಟಕ 1 ರಿಂದ ನಾವು ಗಮನಿಸಬಹುದು.

ಅವರು ಹೂಡುವ ಇನ್ನೊಂದು ವಾದ ಕೌಟುಂಬಿಕ ಆರೋಗ್ಯಕ್ಕಾಗಿ ಮಾಡುವ ಖರ್ಚಿನಲ್ಲಿ ಔಷಧಗಳ ಖರ್ಚು ಬಹಳ ಕಡಿಮೆ. ಆದ್ದರಿಂದ ಔಷಧಿಗಳ ಮೇಲಿನ ಖರ್ಚನ್ನು ಜನ ಸ್ವಲ್ಪ ಹೆಚ್ಚಿಸಬಹುದು ಎಂಬುದು. ಆದರೆ ಈ ವಾದ ನಿಜವಲ್ಲ ಎಂಬುದು ಕೆಳಗಿನ ಕೋಷ್ಟಕ 2. ರಿಂದ ತಿಳಿದುಕೊಳ್ಳಬಹುದು.

ಸರ್ಕಾರ ದೇಶವನ್ನೇ ಮಾರಲು ಸಿದ್ಧವಿದೆ

ಇಂತಹ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿಗಳ ಸೂಚನೆಗಳಿಗೆ ತಕ್ಕಂತೆ ತಾಳ ಹಾಕುತ್ತಿರುವ ಕೇಂದ್ರ ಸರ್ಕಾರ ಕೋಟಿಗಟ್ಟಲೆ ಜನರ ಆರೋಗ್ಯವನ್ನೇ ಒತ್ತೆಯಿಡಲು ಸಿದ್ಧವಾಗುತ್ತಿರುವ ಲಕ್ಷಣಗಳು ಕಾಣುತ್ತಿವೆ.

ಔಷಧಿಗಳ ವಿಷಯದಲ್ಲಿ ಹೊಸ ನೀತಿ ಬಂದರೆ ಔಷಧಿಗಳ ಬೆಲೆ ತೀವ್ರವಾಗಿ ಹೆಚ್ಚುತ್ತದೆ ಮತ್ತು ಔಷಧ ಉತ್ಪಾದನೆಯ ಮೇಲೆ ಯಾವುದೇ ನಿಯಂತ್ರಣವಿರುವುದಿಲ್ಲ. ನಮ್ಮ ದೇಶ ಸ್ವಾತಂತ್ರ್ಯಾನಂತರದಲ್ಲಿ ಸಾಧಿಸಿರುವ ಸ್ವಾವಲಂಬನೆಯೂ ನಷ್ಟವಾಗುತ್ತದೆ.

ಜನಸಾಮಾನ್ಯರು ಈ ನೀತಿಗಳ ವಿರುದ್ಧ ತೀವ್ರವಾಗಿ ಹೋರಾಡ ಬೇಕಾಗುತ್ತದೆ.

ಪರಾವಲಂಬನೆಯೇ ಸ್ವಾವಲಂಬನೆ: ಮನಮೋಹನ್ ಹಿತನುಡಿ!

ಇದು ವಿಚಿತ್ರವೆನಿಸಬಹುದಲ್ಲವೆ ನಿಮಗೆ? ಆದರೆ ಮನಮೋಹನಸಿಂಗರು ತಮ್ಮ ಸರ್ಕಾರದ ಉದಾರೀಕರಣ ನೀತಿಯನ್ನು ಸಮರ್ಥಿಸಿಕೊಳ್ಳುತ್ತ "ಆಮದು ಕಡಿತದಿಂದ ಭಾರತ ಸ್ವಾವಲಂಬನೆ ಹೊಂದುತ್ತದೆ ಎಂಬ ಭ್ರಮೆ ಬೇಡ. ಭಾರತದ ಆರ್ಥಿಕವನ್ನು ಜಾಗತಿಕ ಆರ್ಥಿಕದೊಂದಿಗೆ ವಿಲೀನಗೊಳಿಸಿದಾಗ ಮಾತ್ರ ಸ್ವಾವಲಂಬನೆ ಸಾಧಿಸಲು ಸಾಧ್ಯ" ಎಂದಿದ್ದಾರೆ.

ಬರೀ ಆಮದು ಕಡಿತದಿಂದಾಗಿ ಸ್ವಾವಲಂಬನೆ ಉಂಟಾಗುತ್ತದೆ ಎಂಬ ಭ್ರಮೆ ಯಾರಿಗೂ ಇಲ್ಲ. ಆದರೆ ಉದಾರೀಕರಣ ನಮ್ಮ ದೇಶೀ ಉದ್ದಿಮೆಗಳನ್ನು ಸಂಶೋಧನಾ ಸೃಜನಶೀಲತೆಯನ್ನು ನಮ್ಮ ಜನರ ಸೃಷ್ಟಿ ಶಕ್ತಿಗೇ ಏಟು ಕೊಡುತ್ತಿದೆ ಮತ್ತು ಆ ಮೂಲಕ ದೇಶೀ ಪ್ರತಿಭೆಗಳು ಸಾಮ್ರಾಜ್ಯಶಾಹಿ ಸೇವೆಗೆ ಮೀಸಲಾಗಿ ಬಿಡುತ್ತಿದೆ ಎಂಬುದೂ ಸತ್ಯ. ಇದು ನಮ್ಮನ್ನು ಇನ್ನೂ ಹೆಚ್ಚಿನ ಪರಾವಲಂಬನೆಯ ಕೂಪಕ್ಕೆದೂಡುತ್ತದೆ. ಹೀಗಿರುವಾಗ ಈ ಉದಾರೀಕರಣವೇ ದೇಶದ ಸ್ವಾವಲಂಬನೆಗೆ ದಾರಿ ಎಂಬ ಮಾತಿನ ಅರ್ಥವೇನು? ಪರಾವಲಂಬನೆಯೇ ಸ್ವಾವಲಂಬನೆ ಎಂದಂತಾಗುವುದಿಲ್ಲವೆ? ಸ್ವಾವಲಂಬನೆ ಎಂಬ ಪರಿಭಾಷೆಗೇ ನಮ್ಮ ಅರ್ಥ ಮಂತ್ರಿಗಳ ತಿದ್ದುಪಡಿಯೆ?

ಹಾಗೆಯೇ ಅವರು ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವನ್ನೂ ಸಮರ್ಥಿಸಿಕೊಂಡಿದ್ದಾರೆ. ಇದರಿಂದ ಭಾರತದ ಉದ್ದಿಮೆಗಳಿಗೆ ಯಾವುದೇ ಹಾನಿಯುಂಟಾಗುವುದಿಲ್ಲ ಎಂದಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶೀ ಉದ್ದಿಮೆಗಳು ಪ್ರವೇಶಿಸಬಯಸದ ತೈಲ ಶೋಧ, ಮತ್ತು ಶುದ್ಧೀಕರಣ ವಿದ್ಯುತ್‌ನಂತಹ ಕ್ಷೇತ್ರಗಳಿಗೆ ಪ್ರವೇಶ ಬಯಸಿವೆ ಎಂದಿದ್ದಾರೆ. ಆದರೆ ಕೋಕಾ ಕೋಲಾ? ಪಾನೀಯ ಉದ್ದಿಮೆಯಲ್ಲಿ ಕೋಕಾ ಕೋಲಾದ ಪ್ರವೇಶ ಉದಾರೀಕರಣದ ಸಂಕೇತ ಮಾತ್ರವಂತೆ.

ಹೇಗಿದೆ ಸಮರ್ಥನೆಯ ಸರಣಿ?

ಏರುತ್ತಿರುವ ವಿದೇಶೀ ಸಾಲಭಾರ

ಸರ್ಕಾರದ ಉದಾರೀಕರಣದ ನೀತಿಯಿಂದಾಗಿ ನಮ್ಮ ವಿದೇಶೀ ಸಾಲ ಏರುತ್ತಲೇ ಇದೆ. ಪ್ರತಿವರ್ಷವೂ ಏರುತ್ತಿರುವ ಈ ಭಾರ ಈಗ 85.4 ಶತಕೋಟಿ ಡಾಲರುಗಳಿಗೇರಿದೆ. ಅಂದರೆ ಇದು 266167 ಕೋಟಿ ರೂಪಾಯಿಗಳಷ್ಟಾಗುತ್ತದೆ.

ಭಾರತ ಈಗ ಜಗತ್ತಿನಲ್ಲೇ ನಾಲ್ಕನೇ ಅತಿದೊಡ್ಡ ಸಾಲಗಾರ. 1991-92ರ ಒಟ್ಟು ದೇಶದ ಉತ್ಪನ್ನದ ಶೇ. 33.4 ರಷ್ಟು ವಿದೇಶೀ ಸಾಲವೆಂದರೆ ಈ ಸಾಲದ ಭಾರವನ್ನು ಊಹಿಸಿಕೊಳ್ಳಬಹುದು.

ಇನ್ನೂ ಬೇಕೆ ಸಾಲ?

'ಸಾರ್ವಜನಿಕ ವಲಯದ ಘಟಕಗಳು ಯಾವತ್ತೂ ಮಹತ್ವವುಳ್ಳವು'

ಇದನ್ನು ಉದ್ದಿಮೆ ಇಲಾಖೆಯ ಕಾರ್ಯದರ್ಶಿ ಅಶೋಕಚಂದ್ರ ಹೇಳಿದ್ದಾರೆ. ಉದಾರೀಕರಣದ ಈ ದಿನಗಳಲ್ಲಿ ಉದಾರೀಕರಣದ ಮಹಿಮೆಯನ್ನೇ ಜಪಿಸುತ್ತ ಅವುಗಳಿಂದಲೇ ನಮ್ಮ ದೇಶಕ್ಕೆ ಜನಕ್ಕೆ ಸ್ವರ್ಗ ಸಿಗುತ್ತದೆಂಬ ಅಪ್ಪಟ ಸುಳ್ಳುಗಳನ್ನೇ ಹೇಳುವುದು ಪ್ರಸಕ್ತ ಸರ್ಕಾರದ ಫ್ಯಾಷನ್ ಆಗಿರುವಾಗ ಈ ಕಾರ್ಯದರ್ಶಿಗೆ ಇವೇ ಸುಳ್ಳುಗಳನ್ನು ಹೇಳುವುದು ಸಾಧ್ಯವಾಗಿಲ್ಲದಿರುವುದು ನಮ್ಮ ಆರ್ಥಿಕದಲ್ಲಿ ಸಾರ್ವಜನಿಕ ವಲಯದ ಘಟಕಗಳ ಮಹತ್ವವನ್ನು ಸೂಚಿಸುತ್ತದೆ.

ಈ ಮಾತನ್ನು ಅವರು ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ ಮತ್ತು ಕ್ರೆಡಿಟ್ ಕಮರ್ಷಿಯಲ್ ಡಿ ಫ್ರಾನ್ಸ್ ಇವುಗಳ ಆಶ್ರಯದಲ್ಲಿ ಖಾಸಗೀಕರಣ'ದ ಮೇಲೆ ನಡೆದ ವಿಚಾರ ಸಂಕಿರಣದಲ್ಲಿ ಹೇಳಿದ್ದಾರೆ. ಆದರೇ ಅದೇ ವಿಚಾರ ಸಂಕಿರಣದಲ್ಲಿ ಕ್ರೆಡಿಟ್ ಕಮರ್ಷಿಯಲ್‌ನ ಅಧ್ಯಕ್ಷ 'ಖಾಸಗೀಕರಣವೆಂದರೆ ಬರೀ ಈ ಘಟಕಗಳ ಕೆಲವು ಶೇರುಗಳ ಮಾರಾಟ ಮಾತ್ರವಲ್ಲ ಬದಲಾಗಿ ಇಡೀ ಘಟಕಗಳನ್ನೇ ಮಾರಬೇಕು ಎಂಬ ಒತ್ತಾಯವನ್ನೇ ಹೇರಿದರು.

ಹೇಗಿದೆ ಉದಾರೀಕರಣ ಒತ್ತಡ?

ಬ್ಯಾಂಕುಗಳಲ್ಲಿ ವಿದೇಶೀ ಪಾಲುಗಾರಿಕೆ

ಹೊಸ ಉದಾರೀಕರಣದ ಕ್ರಮವಿದು. ದೇಶದ ಬ್ಯಾಂಕಿಂಗ್ ವಲಯವನ್ನೇ ಸುಧಾರಣೆಯ ಹೆಸರಿನಲ್ಲಿ ಮುಳುಗಿಸ ಹೊರಟಿರುವ ಸರ್ಕಾರ ಈ ಭಾರತೀಯ ರಿಸರ್ವ್ ಬ್ಯಾಂಕ್‌ನ ಈ ಪ್ರಕಟಣೆಯ ಮೂಲಕ ಹೊಸ ಹೆಜ್ಜೆಯಿಟ್ಟಿದೆ.

ಭಾರತೀಯ ರಿಸರ್ವ್‌ಬ್ಯಾಂಕ್‌ನ ಈ ಬದಲಾದ ನೀತಿಯ ಪ್ರಕಾರ ಖಾಸಗೀ ಬ್ಯಾಂಕುಗಳಲ್ಲಿ ವಿದೇಶೀ ಬಂಡವಾಳದ ಪಾಲುಗಾರಿಕೆ ಶೇ. 20 ರವರೆಗೆ ಇರಬಹುದಂತೆ.

ಅಂದರೆ ಆಗಲೇ ಖಾಸಗೀ ಬ್ಯಾಂಕುಗಳ ಸ್ಥಾಪನೆಗೆ ಪೂರ್ಣ ಅವಕಾಶ ಮಾಡಿಕೊಟ್ಟಿದ್ದ ಸರ್ಕಾರ ಈಗ ಈ ವಲಯದ ಕೊಳ್ಳೆಗೆ ವಿದೇಶೀ ಬಂಡವಾಳಿಗರಿಗೂ ಅನುಕೂಲ ಮಾಡಿಕೊಟ್ಟಂತಾಗಿದೆ. ಭಾರತದ ಬ್ಯಾಂಕಿಗ್ ವಲಯವನ್ನೇ ಇದು ಶ್ರೀಮಂತರ ಪರವಾಗಿ ಪರಿವರ್ತಿಸುತ್ತದೆ ಎಂಬುದಂತೂ ಖಚಿತ.



ನರಸಿಂಹರಾವ್ ಸರಕಾರದ 29ನೇ ತಿಂಗಳಲ್ಲಿ

'ರಾಜ್ಯ ಸರ್ಕಾರಗಳೂ ಜೀ ಹುಜೂರ್ ಎನ್ನಲಿ'

ಇದು ದೇಶದ ಅರ್ಥಮಂತ್ರಿ ಮನಮೋಹನ್ ಸಿಂಗರ ಸೂಚನೆ. ಅವರು ಹೇಳುವಂತೆ ಕೇಂದ್ರ ಸರ್ಕಾರ ವಿದೇಶೀ ಹಣ ಹೂಡಿಕೆಯ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕಿದೆ. ವಿದೇಶೀ ಬಂಡವಾಳಿಗರು (ಸಾಮ್ರಾಜ್ಯಶಾಹಿಗಳು) ರಾಜ್ಯಗಳೊಳಗೆ ಬಂದು ಬಂಡವಾಳ ಹೂಡುವಂತೆ ಮಾಡುವುದು ರಾಜ್ಯ ಸರ್ಕಾರಗಳ ಕರ್ತವ್ಯ.'

ಈಗ ರಾಜ್ಯ ಸರ್ಕಾರಗಳು 'ಜೀ ಹುಜೂರ್' ಎಂದು ಸಾಮ್ರಾಜ್ಯಶಾಹಿಗಳಿಗೆ ತಗ್ಗಿ ಬಗ್ಗಿ ಆಹ್ವಾನ ನೀಡಬೇಕು.

ಪರೋಕ್ಷವಾಗಿ ಪಶ್ಚಿಮ ಬಂಗಾಳದ ಸರ್ಕಾರಕ್ಕೆ ಈ ಹಿತವಚನ ನೀಡುತ್ತಿರುವ ಅರ್ಥಮಂತ್ರಿಗಳಿಗೆ ಎಡ ಸರ್ಕಾರಗಳು ದೇಶ ಒತ್ತೆ ಇಡಲು ಸಿದ್ಧವಿಲ್ಲ ಎಂಬುದರ ಪೂರ್ಣ ಅರಿವು ಇರಬೇಕಲ್ಲವೆ?

ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರಾಯೋಜಕರಿಲ್ಲ

ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಖಾಸಗಿಯವರ ಮರ್ಜಿಯನ್ನು ಅವಲಂಬಿಸಬೇಕಾಗಿ ಬಂದಾಗ ಏನಾಗುತ್ತದೆ ಎಂಬುದು ಈಗ ಆಗುತ್ತಿರುವುದರಿಂದ ತಿಳಿಯಬೇಕು. ಸಿ.ಎಸ್.ಐ.ಆರ್. (ಕೇಂದ್ರ ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನಾ ಮಂಡಳಿ) ನ ಹಲವು ಸಂಶೋಧನಾ ಯೋಜನೆಗಳಿಗೆ ಯಾರೂ ಪ್ರಾಯೋಜಕರೇ ಇಲ್ಲವಂತೆ.

ಖಾಸಗಿ ಕಂಪನಿಗಳು ಇಂತಹ ಯೋಜನೆಗಳನ್ನು ಪ್ರಾಯೋಜಿಸಬೇಕು ಅಂದರೆ ಅವಕ್ಕೆ ತಗಲುವ ವೆಚ್ಚವನ್ನು ಭರಿಸಬೇಕು ಎಂದು ಬಯಸಿತ್ತು. ದೇಶದ ಅಭಿವೃದ್ಧಿಗೆ ನೇರವಾಗಿ ಸಹಾಯ ಮಾಡಬಹುದಾದ ಈ ಯೋಜನೆಗಳು ಈಗ ಅನಾಥವಾಗುತ್ತಿವೆ.

ಹೇಗಿದೆ ಖಾಸಗೀಕರಣದ ಮೂಲಕ ಸ್ವಾವಲಂಬನೆ ಸಾಧಿಸುವ ಪ್ರಯತ್ನ?

...ಸಂಬಳ ರೂ. 12.92 (ಅಂದರೆ ...+2.80) ಕ್ಕಿಂತ ಕಡಿಮೆ ಇರಬಾರದಿತ್ತು. ಅಂದರೆ ...ರ ಇದನ್ನು ದಿನಕ್ಕೆ ರೂ. 5.98 ನಷ್ಟು ಕಡಿಮೆ ...ದೆ. (12.92- 5.94) ಆರಿಸುವ ಕೆಲಸ ಮಾಡು... ಕಾಫಿ ಕ್ಯೂರಿಂಗ್‌ನ ಬೆನ್ನಲುಬು. ಇವರೆಲ್ಲರ ...ಕೊಡುವುದು ಕಾಫಿ ಮಂಡಳಿ. ಅಸಂಘಟಿತ ...ಕರ ಬಗ್ಗೆ ಮೊಸಳೆ ಕಣ್ಣೀರಿಡುವ ಅಧಿಕಾರಸ್ಥ ...ರಾಜ್ಯ ಸರಕಾರ ಕಾರ್ಮಿಕರೊಡನೆ ವರ್ತಿಸುವ ರೀತಿ...

1987ರಲ್ಲಿ ಹತ್ತು ಪರಿಷ್ಕೃತ ಸೂಚನೆಗಳನ್ನು ಜ್ಯಾರಿ...ಲಾಯಿತು. ಒಟ್ಟಾರೆಯಾಗಿ ಇವು ಚೆನ್ನಾಗಿವೆ. ..., ಖಂಡಸಾರಿ, ಅಂಗಡಿ-ವಾಣಿಜ್ಯ ಸಂಸ್ಥೆಗಳು, ...ಮೋಬೈಲ್ ವರ್ಕ್‌ಶಾಪ್, ಇಂಜಿನಿಯರಿಂಗ್ ...ಸುಗಳು, ಎಣ್ಣೆ ಮಿಲ್ಲುಗಳು, ಬೇಕರಿ, ಸಿಹಿತಿಂಡಿ ...ರಿಕೆ, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಹಾಗೂ ...ಳು - ಇವೆ ಆ ಉದ್ಯೋಗಗಳು. ಸಂಬಳ ರೂ. ...ದ (ವಲಯ 3ರ ಇಂಜಿನಿಯರಿಂಗ್ ಉದ್ದಿಮೆ...) ರೂ. 1,114 (ಕ್ಲಬ್‌ಗಳ ಕಾರ್ಮಿಕರಿಗೆ) ವರೆಗೆ.

ಇಂಜಿನಿಯರಿಂಗ್‌ನಲ್ಲಿ ಹಿಂದಿನ ನೋಟಿಫಿಕೇ... 1979 ರಲ್ಲಿ ದಿನಕ್ಕೆ ರೂ. 4.50 ಇತ್ತು. ಆಗ ಬೆಲೆ ...ಂಕ 359 ಪಾಯಿಂಟ್. 1987ರಲ್ಲಿ ಇದು ದಿನಕ್ಕೆ 12.50 ಆಯಿತು (1984ರ ಬೆಲೆಗಳಲ್ಲಿ ಅಂದರೆ ...ಪಾಯಿಂಟುಗಳಲ್ಲಿ). ಹೆಂಚು ಉದ್ದಿಮೆಯಲ್ಲಿ ...ರಲ್ಲಿ (ಸೂಚ್ಯಂಕ 329 ಪಾಯಿಂಟ್) ದಿನಕ್ಕೆ ರೂ. ...ಇತ್ತು. 1982ರಲ್ಲಿ 485 ಪಾಯಿಂಟುಗಳಲ್ಲಿ ರೂ. ...ಆಯಿತು. 1987 ರಲ್ಲಿ ಪರಿಷ್ಕೃತ ನೋಟಿಫಿ...

...ಸಿತು. (620 ಪಾಯಿಂಟುಗಳಲ್ಲಿ). 1987 ರ ಕೂಲಿ ಪರಿಷ್ಕರಣೆಯ ಪ್ರಯೋಜನವನ್ನು ಇಲ್ಲದಂತೆ ಮಾಡಲು ಅಥವಾ ತಡೆಯಲು ಮ್ಯಾನೇಜುಮೆಂಟುಗಳು ಪ್ರಯತ್ನಿಸುತ್ತಿವೆ. ಟೈಲರಿಂಗ್ /ಗಾರ್ಮೆಂಟ್ ಉದ್ದಿಮೆಯಲ್ಲಿ ಕೂಲಿಯನ್ನು ಕಮ್ಮಿ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ. 1991 ರಲ್ಲಿ ಬಂಗಾರಪ್ಪ ಆಡಳಿತದಲ್ಲಿ ಈ ದರವನ್ನು ಉಳಿಸಿಕೊಳ್ಳಲಿಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

1991 ರಲ್ಲಿ ಪ್ಲಾಂಟೇಶನ್ ಕಾರ್ಮಿಕರು, ಬೀಡಿ ಕಾರ್ಮಿಕರು ಮತ್ತು ಗೇರು ಬೀಜ ಕಾರ್ಮಿಕರಿಗೆ ಕೂಲಿಯನ್ನು ಪರಿಷ್ಕರಿಸಲಾಯಿತು. ಫೌಂಡ್ರಿ ಕಾರ್ಮಿಕರಿಗೆ ಸಂಬಂಧಪಟ್ಟಂತೆಯೂ ಪರಿಷ್ಕರಿಸಲಾಯಿತು. ಲಾಂಡ್ರಿ, ಪೆಟ್ರೋಲ್, ಡಿಸೇಲ್ ಪಂಪ್ ಉದ್ಯೋಗಗಳಲ್ಲಿ ಅದೇ ವರ್ಷ ಕೂಲಿ ನಿಗದಿ ಪಡಿಸಿ ಹೊಸ ಸೂಚನೆ ಜ್ಯಾರಿ ಮಾಡಲಾಯಿತು.

ಈಗಾಗಲೇ ಹೇಳಿರುವಂತೆ ಕನಿಷ್ಟ ಕೂಲಿ ಸಲಹಾ ಸಮಿತಿ ಬೀಡಿ ಹಾಗೂ ಪ್ಲಾಂಟೇಷನ್ ಕಾರ್ಮಿಕರಿಗೆ 908 ಪಾಯಿಂಟುಗಳಲ್ಲಿ 23.50 ರೂ. ಕನಿಷ್ಟ ಕೂಲಿ ಹಾಗೂ 3.5 ಪೈಸೆ ದರದಲ್ಲಿ ತುಟ್ಟಿಭತ್ಯೆ ಶಿಫಾರಸು ಮಾಡಿದ್ದರೂ ಬಂಗಾರಪ್ಪ ಸರಕಾರ ಅನುಕ್ರಮವಾಗಿ 970 ಪಾಯಿಂಟುಗಳಲ್ಲಿ ರೂ. 19.00 ನಿಗದಿಪಡಿಸಿತು. ತುಟ್ಟಿಭತ್ಯೆ ಪಾಯಿಂಟಿಗೆ 2 ಪೈಸೆ. ಪರಿಣಾಮವೆಂದರೆ 1991 ರ ಪರಿಷ್ಕರಣದಿಂದ ಸಂಬಳ ಕನಿಷ್ಟ ಕೂಲಿ ಸಲಹಾ ಸಮಿತಿಯ ಸರ್ವಾನುಮತದ ಶಿಫಾರಸುಗಳಿಗಿಂತ ಬಹಳ ಕೆಳಗೇ ಉಳಿಯಿತಷ್ಟೇ ಅಲ್ಲ, 1987 ರ ಮಟ್ಟವನ್ನೂ ಕೂಡಾ ತಲುಪಲಿಲ್ಲ. ಸಲಹಾ ಸಮಿತಿ ...ರೂ. 26.31 (ಬೀಡಿ) ಹಾಗೂ 25.66 (ಪ್ಲಾಂಟೇಷನ್) ಬದಲಿಗೆ ರೂ. 37.55 ಎಂದು ಶಿಫಾರಸು ಮಾಡಿತ್ತು. ಆದರೆ ಬೀಡಿ, ಪ್ಲಾಂಟೇಷನ್‌ಗಳ ಮಾಲಕರ ಲಾಬಿ ಬಂಗಾರಪ್ಪ ಮತ್ತು ಅವರ ಮಂತ್ರಿ ಮಂಡಲದ ಸಹಾಯದಿಂದ ಕಾರ್ಮಿಕರನ್ನು ವಂಚಿಸುವಲ್ಲಿ ಯಶಸ್ವಿಯಾಯಿತು.

ಇದರಿಂದ ನಮಗೆ ತಿಳಿದು ಬರುವ ಸಂಗತಿಯೆಂದರೆ ನೋಟಿಫಿಕೇಶನ್ ವ್ಯವಸ್ಥೆಯಿಂದ ಕನಿಷ್ಟ ಕೂಲಿ ಶಾಸನದ ಉದ್ದೇಶವೂ ಈಡೇರುತ್ತಿಲ್ಲ. ಸಂವಿಧಾನದ 43ನೇ ಕಲಮು ಪ್ರಭುತ್ವ (ಸರಕಾರ)ದ ಮೇಲೆ ವಿಧಿಸಿರುವ ಕರ್ತವ್ಯ ಅಂದರೆ ಸೂಕ್ತ ಶಾಸನ ಅಥವಾ ಆರ್ಥಿಕವನ್ನು ಸೂಕ್ತವಾಗಿ ಸಂಘಟಿಸುವ ಮೂಲಕ ಅಥವಾ ಬೇರೆ ಯಾವುದೇ ರೀತಿಯಲ್ಲಿ ಎಲ್ಲಾ ಕಾರ್ಮಿಕರಿಗೆ, ಕೃಷಿ ಕೈಗಾರಿಕೆ, ಮತ್ತಿತರ ಎಲ್ಲಾ ರಂಗಗಳ ಕಾರ್ಮಿಕರಿಗೆ ಕೆಲಸ, ಜೀವನ ವೇತನ, ಒಂದು ಉಚಿತ ಜೀವನ ಮಟ್ಟ, ವಿರಾಮದ ಪೂರ್ಣ ಅನುಭೋಗ ಹಾಗೂ ಸಾಮಾಜಿಕ, ಸಾಂಸ್ಕೃತಿಕ ಅವಕಾಶಗಳನ್ನು ನೀಡಬಲ್ಲ ಕೆಲಸದ ಸನ್ನಿವೇಶವನ್ನು ಒದಗಿಸಲು ಸರಕಾರ ಪ್ರಯತ್ನಿಸಬೇಕೆಂಬ ವ್ಯಾಪಕ ಗುರಿ ಕೂಡಾ ಈಡೇರುತ್ತಿಲ್ಲ.

- <u>ಮೊದಲನೆಯದಾಗಿ</u> ಶೆಡ್ಯೂಲಿನಲ್ಲಿರುವ ಎಲ್ಲಾ ಉದ್ಯೋಗಿಗಳಿಗೆ ಕನಿಷ್ಟ ಕೂಲಿಯನ್ನು ನೋಟಿಫೈ ಮಾಡುತ್ತಿಲ್ಲ. ಬಟ್ಟೆ ಉದ್ದಿಮೆಯಲ್ಲಿ ಕೈಮಗ್ಗ, ಪವರ್‌ಲೂಮ್‌ಗಳಿಗೆ ಈಗ ಕನಿಷ್ಟ ಕೂಲಿಯೇ ಇಲ್ಲ. ರೇಶ್ಮೆ ವಲಯದಲ್ಲಿ ಮಾತ್ರ ಹಾಸ್ಯಾಸ್ಪದ ಕೂಲಿ ಗೊತ್ತು ಮಾಡಲಾಗಿದೆ. ಈ ಕೂಲಿಗೆ (ದಿನಕ್ಕೆ 2 ರೂ) ಭಿಕ್ಷಕರೂ ಬರುವುದಿಲ್ಲ.
- <u>ಎರಡನೆಯದಾಗಿ</u> ನೋಟಿಫಿಕೇಶನ್ ಜ್ಯಾರಿ ಮಾಡಿದಂತಹ ಬೀಡಿ, ಪ್ಲಾಂಟೇಷನ್, ಹೋಟೆಲ್ ಮುಂತಾದ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು ದುಡಿಯುತ್ತಿರುವ ಉದ್ಯೋಗಗಳಲ್ಲಿ ಎಲ್ಲಾ ಮಾನದಂಡಗಳನ್ನು, ನೀತಿ-ನಿಯಮಗಳನ್ನು ಸಂಪೂರ್ಣ ನಿರ್ಲಕ್ಷಿಸಿ ತುಂಬಾ ಕಮ್ಮಿ ಕೂಲಿಯ ಸೂಚನೆ ನೀಡಲಾಗಿದೆ.
- <u>ಮೂರನೆಯದಾಗಿ</u> ಸರಕಾರದ ಈ ಅರೆಮನಸ್ಸಿನ ಪ್ರಯತ್ನಗಳನ್ನೂ ಮಾಲಕರು ನ್ಯಾಯಾಲಯಗಳನ್ನು ಬಳಸಿ ನಿರರ್ಥಕಗೊಳಿಸುತ್ತಾರೆ. ಮಾಲಕರು ಸಂಘಟಿತರಾಗಿರುವ ಉದ್ಯೋಗಗಳಲ್ಲಿ ಅವರು ಕಾರ್ಮಿಕರು ಸರಿಯಾಗಿ ಸಂಘಟಿತರಾಗದಂತೆ ಮಾಡುವಲ್ಲಿ (ಕನಿಷ್ಟ ಅವರ ಆಂದೋಲನವನ್ನು ಹದ್ದು ಬಸ್ತಿನಲ್ಲಿಡುವಲ್ಲಿ) ಕನಿಷ್ಟ ಕೂಲಿಯನ್ನು ಕಡಿಮೆ ಮಾಡುವಲ್ಲಿ ಅಥವಾ ನೋಟಿಫಿಕೇಶನ್ ನಿಷ್ಪ್ರಯೋಜಕವಾಗಿರುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕೆ ಒಳ್ಳೆಯ ಉದಾಹರಣೆಗಳೆಂದರೆ ಬಟ್ಟೆ, ಪ್ಲಾಂಟೇಷನ್, ಬೀಡಿ, ಅಗರ್‌ಬತ್ತಿ ಇತ್ಯಾದಿ. ಮಾಲಕರು ಸರಿಯಾಗಿ ಸಂಘಟಿತರಾಗಿರದಿದ್ದಲ್ಲಿ ಹಾಗೂ ಅವರು ಸಂಘಟಿತರಾಗಿದ್ದರೂ ಕಾರ್ಮಿಕರು ತಮ್ಮ ಸಾಮೂಹಿಕ ಕಾರ್ಯಾಚರಣೆಗಳ ಮೂಲಕ ಅದನ್ನು ನಿಷ್ಪ್ರಯೋಜಕಗೊಳಿಸಿದಲ್ಲಿ ಮಾತ್ರ, ಉದಾಹರಣೆಗೆ ಸಿನೆಮಾ ಉದ್ಯೋಗದಲ್ಲಿ, ನೋಟಿಫೈ ಮಾಡಿದ ಕೂಲಿ ಸ್ವಲ್ಪ ಉತ್ತಮವಾಗಿದೆ.
- <u>ನಾಲ್ಕನೆಯದಾಗಿ,</u> ಕೋಷ್ಟಕ 1 ಹಾಗೂ ಇದುವರೆಗಿನ ವಿವರಣೆಯಿಂದ ಕಂಡುಬರುವಂತೆ ಮುಖ್ಯವಾಗಿ ಕನಿಷ್ಟ ಕೂಲಿಗಳನ್ನು 1976, 1986, 1987 ರಲ್ಲಿ ಪರಿಷ್ಕರಿಸಲಾಯಿತು. ನಂತರ ಆ ಪ್ರಕ್ರಿಯೆ ನಿಧಾನಗೊಂಡಿತು. ಎರಡರಿಂದ ಐದು ವರ್ಷಗಳ ಒಳಗೆ ಪರಿಷ್ಕರಣೆ ನಡೆಯಬೇಕೆಂಬ ಕಾನೂನಿನ...

ಪುಟ 7ನೇ ನೋಡಿ



ಒರಿಸ್ಸಾದಲ್ಲಿ ಜನಪರ ರಾಜಕೀಯ ಪ್ರಕ್ಷೋಭೆ

ಒರಿಸ್ಸಾ ರಾಜ್ಯದ ಜನರು ಮೂಲ ಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಜನಸಾಮಾನ್ಯರ ಬವಣೆ ಹೇಳತೀರದಾಗಿದೆ. ಇದಲ್ಲದೆ ದೇಶ ಕೋಮುವಾದದ ವಿಷದಿಂದ ಹಾಗೂ ಕೇಂದ್ರ ಸರ್ಕಾರದ ವಿನಾಶಕಾರಿ ಆರ್ಥಿಕ ನೀತಿಯಿಂದ ನೋವನ್ನು ಅನುಭವಿಸಿದೆ.

ಇವೆಲ್ಲದರ ಬಗ್ಗೆ ಜನಜಾಗೃತಿ ಮೂಡಿಸಿ ಸಮಸ್ಯೆಗಳ ವಿರುದ್ಧ ಹೋರಾಡಲಿಕ್ಕಾಗಿ ಸಿಪಿಎಂ ಒರಿಸ್ಸಾ ರಾಜ್ಯ ಸಮಿತಿ ಒಂದು ರಾಜಕೀಯ ಆಂದೋಲನವನ್ನೇ ಆರಂಭಿಸಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಬಿಮನ್ ಬಸು ರಾಜ್ಯದ ಉದ್ದಗಲದಲ್ಲಿ ನಡೆದ ಹಲವು ಬೃಹತ್ ಸಭೆಗಳಲ್ಲಿ ಪಾಲ್ಗೊಂಡು ಮಾತನಾಡಿದರು.

ನವೆಂಬರ್ 16ರಂದು ಬಲಸೋರ್‌ನಲ್ಲಿ ಅವರು ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡಿದರು. ದೇಶದ ಏಕತೆ ಮತ್ತು ಸಮಗ್ರತೆಯನ್ನು ಉಳಿಸಲಿಕ್ಕಾಗಿ ಭಾರತದ ಜನರು ಬಿ.ಜೆ.ಪಿ. ನೇತೃತ್ವದ ಕೋಮುವಾದಿ ಶಕ್ತಿಗಳನ್ನು ತಿರಸ್ಕರಿಸಬೇಕು ಎಂದು ಬಸು ಕರೆ ನೀಡಿದರು.

ಕಾಶ್ಮೀರದ ಬಗ್ಗೆ ಅಮೇರಿಕದ ಅಧಿಕಾರಿಗಳು ನೀಡಿದ ಹೇಳಿಕೆಗಳ ಬಗ್ಗೆ ಬಿಜೆಪಿಯ ಉನ್ನತ ನಾಯಕರು ದಿವ್ಯ ಮೌನ ವಹಿಸಿದ್ದಾರೆ. ಇದು ಆ ಪಕ್ಷ ಸಾಮ್ರಾಜ್ಯಶಾಹಿ ಪರವಾಗಿದೆ ಎಂಬುದನ್ನು ಬಯಲುಗೊಳಿಸಿದೆ ಎಂದು ಬಿಮನ್ ಬಸು ನುಡಿದರು.

ಒರಿಸ್ಸಾ ಹಿಂದುಳಿದ ರಾಜ್ಯವಾಗಿಯೇ ಉಳಿದಿದೆ ಸಮೃದ್ಧ ಖನಿಜಗಳು, ಅರಣ್ಯ ಮತ್ತು ಜಲಸಂಪನ್ಮೂಲಗಳನ್ನು ಹೊಂದಿದ್ದರೂ ರಾಜ್ಯದ ಜನರು ಬಡವರಾಗಿಯೇ ಇದ್ದಾರೆ ಎಂದು ಹೇಳಿದ ಅವರು, ಕೃಷಿ ಕಾರ್ಮಿಕರಿಗಾಗಿ ಕೇಂದ್ರೀಯ ಶಾಸನ ತರುವ ತಮ್ಮ ಭರವಸೆಯನ್ನು ಕೇಂದ್ರ ಸಚಿವ ಸಂಗ್ಮಾ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಜನರ ಬವಣೆಗಳತ್ತ ಸರಕಾರದ ಗಮನ ಸೆಳೆಯುವುದು 15 ದಿನಗಳ ಕಾಲದ ರಾಜಕೀಯ ಆಂದೋಲನದ ಉದ್ದೇಶ. ಬಲಸೋರ್ ಜಿಲ್ಲೆಯ ನಿರ್ದಿಷ್ಟ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ನಡೆಸಿ 1.5 ಲಕ್ಷ ಸಹಿಗಳುಳ್ಳ ಮನವಿಯನ್ನು ಜಿಲ್ಲಾಧಿಕಾರಿಗೆ ಅರ್ಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮುಂದಿನ ವರ್ಷ ಜನವರಿ ಐದರಂದು ರಸ್ತೆ ತಡೆ ಚಳುವಳಿಯನ್ನು ನಡೆಸಲಾಗುತ್ತದೆ.

ಒಟ್ಟಿನಲ್ಲಿ ಒರಿಸ್ಸಾ ರಾಜ್ಯದ ಜನರ ಚಳುವಳಿಗೆ ಈ ರಾಜಕೀಯ ಆಂದೋಲನ ಹೊಸ ಆಯಾಮವನ್ನು ನೀಡುತ್ತಿದೆ.

ತ್ರಿಪುರಾದಲ್ಲಿ ಎಡರಂಗ ಸಜ್ಜು

ರಾಜ್ಯದ ಆರ್ಥಿಕ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಲಿಕ್ಕಾಗಿ ಒಂದು ರಾಜ್ಯವ್ಯಾಪಿ ಆಂದೋಳನವನ್ನು ನಡೆಸಲು ತ್ರಿಪುರಾದ ಎಡರಂಗ ಸಮಿತಿ ನಿರ್ಧರಿಸಿದೆ.

ಆಂದೋಲನದ ಅಂಗವಾಗಿ ಎಲ್ಲಾ ಪಂಚಾಯತ್ ಮತ್ತು ಬ್ಲಾಕ್ ವ್ಯಾಪ್ತಿಗಳಲ್ಲಿ ಡಿಸೆಂಬರ್ 10 ರಿಂದ 20ರವರೆಗೆ ಬೃಹತ್ ರ್‍ಯಾಲಿಗಳು ನಡೆಯಲಿವೆ. ಏಳು ಬೇಡಿಕೆಗಳ ಪಟ್ಟಿಯೊಂದನ್ನು ಸಮಿತಿ ಸಿದ್ಧಪಡಿಸಿದೆ. ಇವರ ಆಧಾರದಲ್ಲಿ ಚಳುವಳಿಯನ್ನು ನಡೆಸಲಾಗುವುದು.

ಹೌರಾ ಚುನಾವಣೆ ಪ್ರಚಾರದಲ್ಲಿ ಎಡರಂಗ ಮುನ್ನಡೆ

ಪಶ್ಚಿಮ ಬಂಗಾಳದ ಹೌರಾ ನಗರಪಾಲಿಕೆಗೆ ಈ ತಿಂಗಳ ಕೊನೆಯಲ್ಲಿ ಚುನಾವಣೆ ನಡೆಯಲಿದೆ. ಚುನಾವಣಾ ಪ್ರಚಾರ ಕಾರ್ಯದಲ್ಲಿ ಎಡರಂಗ ತುಂಬಾ ಮುಂದೆ ಇದೆ. ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್ (ಐ) ಹಿಂದೆ ಬಿದ್ದಿದೆ. ಚುನಾವಣಾ ರಂಗದ ಸಮೀಕ್ಷೆಯೊಂದರಲ್ಲಿ ಈ ಅಂಶ ಸ್ಪಷ್ಟವಾಗಿದೆ.

ಪ್ರದೇಶದ ಅಭಿವೃದ್ಧಿ ಮೇಲೆ ಪ್ರಚಾರ ಕಾರ್ಯ ಕೇಂದ್ರೀಕೃತವಾಗಿದೆ. ಹಾಗಾಗಿ ಈ ವಿಚಾರದಲ್ಲಿ ನಿಸ್ಸಂಶಯವಾಗಿಯೂ ಎಡ ಪಕ್ಷಗಳಿಗೆ ಇತರರಿಗಿಂತ ಹೆಚ್ಚಿನ ನೈತಿಕ ಸ್ಥೈರ್ಯವೂ ಬೆಂಬಲವೂ ಇದೆ.

ಹೌರಾ ನಗರಪಾಲಿಕೆ ವ್ಯಾಪ್ತಿಗೆ ಬರುವ ಬಹುತೇಕ ಎಲ್ಲಾ ರಸ್ತೆಗಳು ವಸ್ತುಶಃ ಎಡರಂಗ ಸರ್ಕಾರದ ಆಡಳಿತ ಅವಧಿಯಲ್ಲಿ ನಿರ್ಮಾಣಗೊಂಡವುಗಳಾಗಿವೆ. ಕುಡಿಯುವ ನೀರಿನ ವಿಚಾರದಲ್ಲಿ ಕೂಡಾ ಈ ಸಾಧನೆಯ ಹೆಸರು ಸಲ್ಲಬೇಕಾದ್ದು ಎಡರಂಗಕ್ಕೆಯೇ ಎನ್ನುವುದರಲ್ಲಿ ಸಂಶಯವಿಲ್ಲ.

ಬಹುತೇಕ ಗೋಡೆಗಳು ಎಡಪಕ್ಷಗಳ ಪ್ರಚಾರ ಘೋಷಣೆಗಳಿಂದ ರಾರಾಜಿಸುತ್ತಿವೆ. ಈ ಮಹಾನಗರ ಪಾಲಿಕೆಯ ವ್ಯಾಪ್ತಿಯನ್ನು ಪ್ರವೇಶಿಸಿದ ಯಾರಿಗಾದರೂ ಎಡಪಕ್ಷಗಳ ಕಾರ್ಯಕರ್ತರ ಸಂಘಟನಾ ಸಾಮರ್ಥ್ಯ ಎದ್ದು ಕಾಣುತ್ತಿದೆ.

ಜನಸಾಮಾನ್ಯರು ಮತ್ತು ಅವರ ದಿನನಿತ್ಯದ ಸಮಸ್ಯೆಗಳೊಂದಿಗೆ ನಿಕಟ ಸಂಪರ್ಕ ಇವೇ ನಮ್ಮ ಪ್ರಧಾನ ಬಲ ಎಂದು ಸಿಪಿಐ(ಎಂ) ಮತ್ತು ಇತರ ಎಡಪಂಥೀಯ ಪಕ್ಷಗಳ ಹಲವು ಅಭ್ಯರ್ಥಿಗಳು ಸುದ್ದಿಗಾರರಿಗೆ ತಿಳಿಸಿದ್ದಾರೆ. ಮನೆ ಮನೆ ಭೇಟಿ, ಗುಂಪು ಸಭೆಗಳು ಮೊದಲಾದವು ಪ್ರಚಾರ ಕಾರ್ಯದಲ್ಲಿ ಪ್ರಮುಖ ಅಂಗಗಳಾಗಿವೆ. ಎಡಪಕ್ಷಗಳ ಈ ಎಲ್ಲಾ ಬಗೆಯ ವ್ಯವಸ್ಥಿತವಾದ ಪ್ರಚಾರ ಜಾಲವನ್ನು ಎದುರಿಸದೆ ಕಾಂಗ್ರೆಸ್ (ಐ) ಕಂಗಾಲಾಗಿ ಬಿಟ್ಟಿದೆ.

ತ್ರಿಪುರಾ ನಾಗರಿಕರಿಗೆ ಗುರುತು ಚೀಟಿ

ಅಗರ್ತಲಾ: ತನ್ನ ನಾಗರಿಕರಿಗೆ ಫೋಟೋ ಸಹಿತ ಗುರುತು ಚೀಟಿಗಳನ್ನು ವಿತರಿಸಲು ತ್ರಿಪುರಾ ಸರ್ಕಾರ ನಿರ್ಧರಿಸಿದೆ. ಗಡಿಯಾಚೆಯಿಂದ ಜನರು ಸತತವಾಗಿ ನುಸುಳಿ ಬರುವುದನ್ನು ತಡೆಯಲು ಈ ಕ್ರಮಕೈಗೊಂಡಿದೆ.

ಪಾಕಿಸ್ತಾನದಿಂದ ನುಸುಳಿ ಬರುವುದನ್ನು ತಡೆಯಲಿಕ್ಕಾಗಿ ರಾಜಸ್ಥಾನದ ಗಡಿಜಿಲ್ಲೆಗಳಲ್ಲಿ 1986ರಲ್ಲಿ ಪ್ರಾಯೋಗಿಕವಾಗಿ ಇಂಥ ಗುರುತು ಚೀಟಿಗಳನ್ನು ನೀಡಲಾಗಿತ್ತು. ಈಗ ತ್ರಿಪುರಾ ಅಲ್ಲದೆ ಪಂಜಾಬ್, ಜಮ್ಮು-ಕಾಶ್ಮೀರ, ಅಸ್ಸಾಂ ಮತ್ತು ಮಿಜೋರಮ್‌ಗೆ ಕೂಡ ವಿಸ್ತರಿಸಲಾಗುತ್ತಿದೆ.

ತ್ರಿಪುರಾ ಮತ್ತು ಮಿಜೋರಮ್‌ನಲ್ಲಿ ರಾಜ್ಯದ ಎಲ್ಲರಿಗೆ; ಇತರ ಕಡೆಗಳಲ್ಲಿ ಕೇವಲ ಗಡಿ ಜಿಲ್ಲೆಗಳಲ್ಲಿ ವಾಸಿಸುವವರಿಗೆ ಮಾತ್ರ ಗುರುತು ಚೀಟಿ ನೀಡಲಾಗುತ್ತದೆ.

ಶರದ್ ಪವಾರ್ 'ದೋಷಮುಕ್ತಿ'

ಮುಂಬಯಿ: ಮಹಾರಾಷ್ಟ್ರದ ದಕ್ಷಿಣ ಅಹ್ಮದನಗರ ಲೋಕಸಭಾ ಕ್ಷೇತ್ರಕ್ಕೆ 1991ರಲ್ಲಿ ನಡೆದ ಚುನಾವಣೆಯ ಪ್ರಚಾರದ ವೇಳೆ ಭ್ರಷ್ಟ ಮಾರ್ಗವನ್ನು ಅನುಸರಿಸಿದ್ದರು ಎಂಬ ಆರೋಪದಿಂದ ಮಹಾರಾಷ್ಟ್ರ ಮುಖ್ಯಮಂತ್ರಿ ಶರದ್ ಪವಾರ್ ಅವರನ್ನು ಸುಪ್ರೀಂ ಕೋರ್ಟ್ ಮುಕ್ತಿಗೊಳಿಸಿದೆ. ನವೆಂಬರ್ 19ರಂದು ಅದು ಈ ಬಗ್ಗೆ ತೀರ್ಪನ್ನು ನೀಡಿದೆ.

ಪವಾರ್ ತಪ್ಪಿತಸ್ಥರು ಎಂದು ಮುಂಬಯಿ ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಏನಿದ್ದರೂ 'ಇತರ ಪಕ್ಷಗಳ ಅಭ್ಯರ್ಥಿಗಳಿಂದ ಹಣ ಪಡೆಯಿರಿ ಆದರೆ ನಮಗೇ (ಕಾಂಗ್ರೆ) ಮತ ನೀಡಿ' ಎಂದು ಪವಾರ್ ಪ್ರಚಾರ ಭಾಷಣದಲ್ಲಿ ಮನವಿ ಮಾಡಿಕೊಂಡಿದ್ದ ಬಗ್ಗೆ ನ್ಯಾಯಾಧೀಶರು ಆಘಾತ ವ್ಯಕ್ತಪಡಿಸಿದ್ದಾರೆ. ಪವಾರ್‌ರಂಥ ಉನ್ನತ ನಾಯಕರು ಈ ಮಟ್ಟಕ್ಕೆ ಇಳಿಯಬಾರದಿತ್ತು ಎಂದು ಛೀಮಾರಿ ಹಾಕಿದ್ದಾರೆ.

ಅಯೋಧ್ಯೆಯ ಮಂದಿರದ ಮಾಜಿ ಅರ್ಚಕನ ಹತ್ಯೆ

ಅಯೋಧ್ಯೆ: ಇಲ್ಲಿನ ವಿವಾದಾತ್ಮಕ ಮಂದಿರದ ಅರ್ಚಕರಲ್ಲಿ ಒಬ್ಬರಾಗಿದ್ದ ಲಾಲ್‌ದಾಸ್ ಅವರನ್ನು ನವೆಂಬರ್ 17 ರಂದು ಕೆಲವು ದುಷ್ಕರ್ಮಿಗಳು ಗುಂಡಿಟ್ಟು ಕೊಂದಿದ್ದಾರೆ. ಲಾಲ್‌ದಾಸ್ ರಾಣಿಪುರದಲ್ಲಿ ತನ್ನ ತಂದೆಯ ಮನೆಯಲ್ಲಿದ್ದಾಗ ಈ ಘಟನೆ ನಡೆಯಿತು.

ಮಸೀದಿ ಕೆಡವಿ ಮಂದಿರ ನಿರ್ಮಿಸುವ ವಿಚಾರದಲ್ಲಿ ಲಾಲ್‌ದಾಸ್ ಸಂಘ ಪರಿವಾರಕ್ಕೆ ವಿರುದ್ಧವಾದ ದೃಢ ನಿಲುವನ್ನು ತಳೆದಿದ್ದರು. ಆದ್ದರಿಂದ ಉತ್ತರ ಪ್ರದೇಶದ ಹಿಂದಿನ ಬಿ.ಜೆ.ಪಿ. ಸರಕಾರ ಲಾಲ್‌ರನ್ನು ಅರ್ಚಕ ಮಂಡಳಿಯಿಂದ ತೆಗೆದು ಹಾಕಿ ಆ ಸ್ಥಾನದಲ್ಲಿ ಬೇರೆಯವರನ್ನು ನೇಮಿಸಿತ್ತು.

ಅಯೋಧ್ಯೆಯ ದುರ್ಘಟನೆಗಳಿಗೆ ನಿಕಟ ಸಾಕ್ಷಿಯಂತಿದ್ದ ಲಾಲ್‌ರನ್ನು ವ್ಯವಸ್ಥಿತವಾಗಿ 'ಮುಗಿಸಲಾಯಿತೆ?' ಈ ಪ್ರಶ್ನೆಗೆ ಉತ್ತರ ಸಿಗಬಹುದೆಂದು ಆಶಿಸೋಣ. ಆದರೆ ಹತ್ಯೆ ಕುಟುಂಬದ ಜಗಳ ಪರಿಣಾಮ ಎಂದು ದಾಸ್‌ರ ಕುಟುಂಬ ವರ್ಗದವರು ಹೇಳಿದ್ದಾರೆಂದು ವರದಿಯಾಗಿದೆ.

ಕಳ್ಳಬಟ್ಟಿ ದುರಂತ: 20 ಜನರ ಸಾವು

ಹೈದರಾಬಾದ್: ಆಂಧ್ರಪ್ರದೇಶದ ಕಡಪ ಜಿಲ್ಲೆಯ ಮೈದಕುರ್ ಪಟ್ಟಣದಲ್ಲಿ ನವೆಂಬರ್ 20 ರಂದು ಸಂಭವಿಸಿದ ಕಳ್ಳಬಟ್ಟಿ ದುರಂತದಲ್ಲಿ 20ಕ್ಕೂ ಹೆಚ್ಚು ಜನರು ಅಸುನೀಗಿದ್ದಾರೆ.

ರಾಜ್ಯ ಸರಕಾರ ಇದೇ ಅಕ್ಟೋಬರ್‌ನಿಂದ ಭಾಗಶಃ ಪಾನನಿರೋಧವನ್ನು ಜಾರಿಗೆ ತಂದಿತ್ತು. ಅದಾದ ನಂತರ ರಾಜ್ಯದಲ್ಲಿ ಸಂಭವಿಸಿದ ಮೊದಲ ಕಳ್ಳಬಟ್ಟಿ ದುರಂತ ಇದಾಗಿದೆ.

ದುರಂತದ ಹಿನ್ನೆಲೆಯಲ್ಲಿ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ

ಬೀಡಿ ಕಾರ್ಮಿಕರ ಸಂಘದ ರಾಷ್ಟ್ರ ಸಮ್ಮೇಳನ ಡಿಸೆಂಬರ್ 3 ರಿಂದ ಐದರವರೆಗೆ ಕೇರಳದ ಕಣ್ಣೂರಿನಲ್ಲಿ ನಡೆಯಲಿದೆ. ಸಮ್ಮೇಳನದ ಮೊದಲ ದಿನ ದೊಡ್ಡ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳನ್ನು ವ್ಯವಸ್ಥೆಗೊಳಿಸಲಾಗಿದೆ.

ಸ್ವಾಗತ ಸಮಿತಿ ಸಮ್ಮೇಳನದ ಯಶಸ್ಸಿಗೆ ಸಕಲ ವ್ಯವಸ್ಥೆಗಳನ್ನು ಮಾಡುತ್ತಿದೆ.

ಡಂಕೆಲ್ ಪ್ರಸ್ತಾಪ ಒಪ್ಪಿದರೆ ಔಷಧಿಗಳ ಬೆಲೆ ಏರಿಕೆ

'ಔಷಧಿ ಮತ್ತು ಔಷಧ ನೀತಿ' ವಿಚಾರ ಸಂಕಿರಣದ ಆತಂಕ

ತುಮಕೂರು: ವೈದ್ಯ ಶಿಕ್ಷಣ ಮುಗಿಸಿ ವೃತ್ತಿಗೆ ಸೇರಿದ ವೈದ್ಯರಿಗೆ ಕಾಲಕಾಲಕ್ಕೆ ಆರೋಗ್ಯ ಇಲಾಖೆಯಿಂದ ಶಿಕ್ಷಣ ನೀಡುವ ಬದಲು ಔಷದ ಕಂಪನಿಗಳು ಶಿಕ್ಷಣ ನೀಡುತ್ತಿವೆ ಎಂದು ಡ್ರಗ್ ಆಕ್ಷನ್ ಫೋರಂನ ಡಾ. ಗೋಪಲ್ ದಾಬಡೆ ವಿಷಾಧಿಸಿದರು. ಅವರು ತುಮಕೂರು ವಿಜ್ಞಾನ ಕೇಂದ್ರ, ಔಷಧಿ ವ್ಯಾಪಾರಿಗಳ ಸಂಘ, ಭಾರತೀಯ ವೈದ್ಯ ಸಂಘದ ಸಂಯುಕ್ತ ಆಶ್ರಯದಲ್ಲಿ ನಡೆದ 'ಔಷಧಿ ಮತ್ತು ಔಷಧ ನೀತಿ' ಎಂಬ ವಿಚಾರ ಸಂಕೀರಣದಲ್ಲಿ ಮಾತನಾಡುತ್ತಿದ್ದರು. ಜನರಿಗೆ ಅವಶ್ಯಕವಾದ ಔಷಧಿಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿಲ್ಲ. ಅವುಗಳ ಉತ್ಪತ್ತಿಯೂ ಕಡಿಮೆ ಆದರೆ ಅನವಶ್ಯಕ ಮತ್ತು ನಿಷೇಧಿಸಿರುವ ಔಧಿಗಳ ಪ್ರಚಾರ ಹಾಗೂ ಮಾರಾಟ ಹೆಚ್ಚಿದೆ ಎಂದು ತಿಳಿಸಿದ ಅವರು ಔಷಧಿ ಕಂಪನಿಗಳು ತಮ್ಮ ಔಷಧಿ ಮಾರಾಟ ಮಾಡಲಿಕ್ಕಾಗಿ ವೈದ್ಯರನ್ನು ಉಪಯೋಗಿಸಿಕೊಂಡು ಜನರನ್ನು ಶೋಷಿಸುತ್ತಿವೆ ಎಂದರು. ವೈದ್ಯರ ಕರ್ತವ್ಯ ಜನರನ್ನು ರೋಗಗಳಿಂದ ರಕ್ಷಿಸುವುದು ಮತ್ತು ರೋಗ ಬಾರದಂತೆ ಎಚ್ಚರಿಕೆ ವಹಿಸುವಂತೆ ಮಾಡುವುದೇ ಹೊರತು ಅವರಿಗೆ ಔಷಧಿ ನೀಡಿ ಹಣ ವಸೂಲಿ ಮಾಡುವಂತಾಗಬಾರದು. ಈ ಬಗ್ಗೆ ಜನರಿಗೆ, ಔಷಧಿ ವ್ಯಾಪಾರಿಗಳಿಗೆ, ವೈದ್ಯರಿಗೆ ತಿಳುವಳಿಕೆ ಹಾಗೂ ಜವಾಬ್ದಾರಿ ಅಗತ್ಯ ಎಂದರು. 1974 ರಲ್ಲಿ ಹಾತಿ ಸಮಿತಿ ವರದಿ ನೀಡಿದ್ದರೂ ಭಾರತ ಸರ್ಕಾರ ಅದನ್ನು ಅನುಸರಿಸುತ್ತಿಲ್ಲ. ಅಗತ್ಯವಾದ 250 ಔಷಧಿಗಳಿಗೆ ಬದಲಾಗಿ 70 ಸಾವಿರ ಔಷಧಿಗಳು ಮಾರುಕಟ್ಟೆಯಲ್ಲಿವೆ. ಆದರೆ ಬಾಂಗ್ಲಾದೇಶವು ಈ ಬಗ್ಗೆ ಕ್ರಾಂತಿಕಾರಿಕ ನಿಲುವು ತೆಗೆದುಕೊಂಡಿದೆ ಎಂದು ಅವರು ವಿವರಿಸಿದರು.

ಸರ್ಕಾರ ಡಂಕೆಲ್ ಪ್ರಸ್ತಾಪವನ್ನು ಒಪ್ಪಿಕೊಂಡರೆ ಔಷಧಿಗಳ ಬೆಲೆ ಅನೇಕಪಟ್ಟು ಜಾಸ್ತಿಯಾಗಲಿದೆ ಮತ್ತು ಶ್ರೀಮಂತ ರಾಷ್ಟ್ರಗಳು ತಮಗೆ ಬೇಡವಾದ ಔಷಧಿಗಳನ್ನು ನಮ್ಮಂತಹ ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಮಾರಾಟ ಮಾಡಿ ಶೋಷಣೆ ಮಾಡಲು ಸಹಕಾರವಾಗುತ್ತದೆ ಎಂದು ಡಾ. ಪ್ರ[illegible]ರಾವ್ ರವರು ಅಭಿ[illegible]. ಬಹುರಾಷ್ಟ್ರೀಯ ಸಂಸ್ಥೆಗಳು [illegible]ದ ಉದ್ದೇಶದಿಂದ ಔಷಧಿಗಳನ್ನು ತಯಾರಿಸುತ್ತಿವೆಯೋ ಹೊರತು ಜನರ ಉಪಯೋಗದ ದೃಷ್ಟಿಯಿಂದಲ್ಲ ಎಂದು ವಿವರಿಸಿ ಡಂಕೆಲ್ ಪ್ರಸ್ತಾಪಗಳನ್ನು ತಿರಸ್ಕರಿಸಲು ಕರೆ ನೀಡಿದರು.

ಡಾ. ಶಿರಡಿ ಎನ್.ಪ್ರಸಾದ್‌ರವರು ಮಾತನಾಡಿ ಭಾರತೀಯ ಚಿಕಿತ್ಸಾ ಪದ್ಧತಿ ಉತ್ತಮವಾದದ್ದು. ಆದರೆ ಜನರಿಗೆ ಆಹಾರವೇ ಇಲ್ಲದ ಸಂದರ್ಭದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು ಜೀರ್ಣವಾಗಲು ಸಹಾಯವಾಗುವ ಔಷಧಿ ತಯಾರಿಸಲು ಹೊರಟಿದ್ದಾರೆಂದು ಗೇಲಿ ಮಾಡಿದರು. ಸರಿಯಾದ ಆಹಾರ ಸೇವನೆಯಿಂದ ಶೇಕಡಾ 50 ಕ್ಕೂ ಹೆಚ್ಚು ಖಾಯಿಲೆ ದೂರವಿಡಲು ಸಾಧ್ಯ ಎಂದು ಅವರು ತಿಳಿಸಿದರು.

ವಿಚಾರ ಸಂಕಿರಣದಲ್ಲಿ ಶ್ರೀಯುತರಾದ ಸೆಬಾಸ್ಟಿನ್ ಡಾ. ಬೆಂಜಮಿನ್, ಡಾ. ಅರುಣಿ ಕುಮಾರಿ ಸುನೀತ, ಡಾ. ಪವಾರ್ ಮಾತನಾಡಿದರು. ಬೆಳಗಿನ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ನಿರಂಜನಯ್ಯ ವಹಿಸಿ ಮಧ್ಯಾಹ್ನದ ಗೋಷ್ಠಿಯ ಅಧ್ಯಕ್ಷತೆಯನ್ನು ಔಷಧಿ ವ್ಯಾಪಾರಿಗಳ ಸಂಘದ ಶ್ರೀ ಅನಂತು ವಹಿಸಿದ್ದರು. ತುಮಕೂರು ವಿಜ್ಞಾನ ಕೇಂದ್ರದ ಶ್ರೀ ಯುತಿರಾಜು ಸ್ವಾಗತಿಸಿ ಕಾರ್ಯದರ್ಶಿ ನಾಗಭೂಷಣ ವಂದಿಸಿದರು. ಆರಂಭದಲ್ಲಿ ವೈಜ್ಞಾನಿಕ ಕೇಂದ್ರದ ಕಾರ್ಯಕರ್ತರಾದ ಇ. ಬಸವರಾಜು ಮತ್ತು ಸಂಗಡಿರು ಆರೋಗ್ಯ ಕುರಿತ ಹಾಡು ಹಾಡಿದರು.

ಕೆ.ಎಸ್.ಆರ್.ಟಿ.ಸಿ. ನಕಲಿ ಟಿಕೆಟ್ ಜಾಲ: ಸಿಬಿಐ ತನಿಖೆಗೆ ಆಗ್ರಹ

ಬಿಜಾಪುರ: ಇತ್ತೀಚೆಗೆ ಬಿಜಾಪುರ, ಗುಲ್ಬರ್ಗಾ, ಬೀದರ್ ಭಾಗದಲ್ಲಿ ಕೆ. ಎಸ್. ಆರ್.ಟಿ.ಸಿ. ನಕಲಿ ಟಿಕೆಟ್ ಜಾಲ ಪತ್ತೆಯಾಗಿರುವುದು ಸರಿಯಷ್ಟೆ, ಆದರೆ ಈ ಜಾಲದಲ್ಲಿ ಭಾಗಿಯಾದ ವಿಜಾಪುರ ವಿಭಾಗದ ಡಿಪ್ಪೋ ಮ್ಯಾನೇಜರ್ ವಿ.ಎಸ್. ಪಾಟೀಲ್ ಹಾಗೂ ಇನ್ನಿತರರನ್ನು ಅಮಾನತ್ತಿನಲ್ಲಿಟ್ಟಿಲ್ಲದಿರುವುದು ಸಂಶಯ ಹುಟ್ಟಿಸಿದೆ. ಇವರುಗಳು ಪ್ರತಿಯೊಬ್ಬ ಕಂಡಕ್ಟರ್‌ರಿಂದ ತಿಂಗಳಿಗೆ 3 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದರು ಎನ್ನುವುದು ಈಗ ಗುಟ್ಟೇನೂ ಅಲ್ಲ. ಆದ್ದರಿಂದ ಈ ಜಾಲವು ಲಕ್ಷಾಂತರ ರೂಗಳನ್ನು ಸರಕಾರಕ್ಕೆ ವಂಚಿಸಿದ್ದಾರೆ.

ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸೋರುತ್ತಿರುವ ಹಣವನ್ನು ತಡೆಗಟ್ಟಿದರೆ ಖಂಡಿತವಾಗಿ ಜನರ ಮೇಲೆ ಹೊರೆ ಹೆಚ್ಚಿಸುವುದು ತಪ್ಪುತ್ತದೆ.

ಈ ನಕಲಿ ಟಿಕೆಟ್ ಜಾಲದಲ್ಲಿ ಮೇಲಾಧಿಕಾರಿಗಳ ಕೈವಾಡವಿದ್ದು ಅವರನ್ನು ತಕ್ಷಣ ಅಮಾನತ್ತುಗೊಳಿಸಿ, ಇಲ್ಲವೇ ವರ್ಗ ಮಾಡಿಸಿ ಸಿಬಿಐ ತನಿಖೆಗೆ ಆದೇಶ ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಬಿಜಾಪುರ ಜಿಲ್ಲಾಧ್ಯಕ್ಷರಾದ ಭೀಮಸಿ ಕಲಾದಗಿ ಒತ್ತಾಯಿಸುತ್ತಿದ್ದಾರೆ.

ಎಸ್.ಎಫ್.ಐ.ನ ನೂತನ ಘಟಕ ಆರಂಭ

ಮಂಡ್ಯ: ದಿನಾಂಕ ನವೆಂಬರ್ 18, 1993 ರಂದು ಭಾರತೀ ಕಾಲೇಜಿನಲ್ಲಿ ಎಸ್.ಎಫ್.ಐನ ಸರ್ವ ಸದಸ್ಯರನ್ನು ಸಭೆ ಕರೆಯಲಾಗಿತ್ತು. ಈ ಸಭೆಯಲ್ಲಿ ಸುಮಾರು 200 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಭೆಯು ಎನ್.ಎಸ್. ಶಂಕರೇಗೌಡರ ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಯಿತು. ಅಧ್ಯಕ್ಷತೆಯನ್ನು ರಮೇಶ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಂದಿದ್ದ ಎಸ್.ಎಫ್.ಐ ಜಿಲ್ಲಾಧ್ಯಕ್ಷರಾದ ಕಾಂ. ಪುಟ್ಟಮಾಧುರವರು ಎಸ್.ಎಫ್.ಐನ ಧ್ಯೇಯ ಧೋರಣೆಗಳ ಬಗ್ಗೆ ತಿಳಿಸಿದರು. ಡಂಕೆಲ್ ಪ್ರಸ್ತಾಪಗಳ ದುಷ್ಪರಿಣಾಮಗಳನ್ನು ವಿವರವಾಗಿ ತಿಳಿಸಿದರು. ಡಂಕೆಲ್ ಪ್ರಸ್ತಾಪಗಳ ಬಗ್ಗೆ ಮುಂದಿನ ಹೋರಾಟಗಳಿಗೆ ಮಾರ್ಗದರ್ಶನ ನೀಡಿದರು. ಸಭೆಯು ಚಿಕ್ಕಮರಿಯವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು. ನಂತರ ಎಸ್.ಎಫ್.ಐನ ಘಟಕವನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಶಂಕರೇಗೌಡ. ಎನ್. ಎಸ್., ಉಪಾಧ್ಯಕ್ಷರಾಗಿ ರಾಘವೇಂದ್ರರಾವ್, ಕಾರ್ಯದರ್ಶಿಯಾಗಿ ಬಿ. ರಮೇಶ್, ಸಹ ಕಾರ್ಯದರ್ಶಿಯಾಗಿ ನಾಗೇಶ್, ಖಜಾಂಚಿಯಾಗಿ ಈರೇಗೌಡ ಹಾಗೂ ಸದಸ್ಯರುಗಳಾಗಿ ಬಸವಯ್ಯ, ಶಿವಲಿಂಗಯ್ಯ, ಚಿಕ್ಕಮರಿ, ಮ. ಕುಮಾರ್ ಮುಂತಾದವರನ್ನು ಆರಿಸಲಾಯಿತು. ನಂತರ ನೂತನವಾಗಿ ಎಸ್.ಎಫ್.ಐಗೆ ಸೇರಿದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ವಿನಿಮಯ ಮಾಡಿಕೊಂಡರು.

ಮಹಿಳೆಯ ಮೇಲಿನ ಅತ್ಯಾಚಾರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಪ್ರತಿಭಟನೆ

ಬೆಂಗಳೂರು: ಸುಮಾರು ನಾಲ್ಕು ವರ್ಷಗಳ ಹಿಂದೆ ಹಾಸನದಲ್ಲಿ ಒಬ್ಬ ನರ್ಸನ್ನು ನಂಬಿಸಿ, ಅತ್ಯಾಚಾರ ನಡೆಸಿದ ಇಬ್ಬರು ಯುವಕರ ವಿರುದ್ಧ ಕರ್ನಾಟಕ ಶ್ರೇಷ್ಠ ನ್ಯಾಯಾಲಯ ಏಳು ವರ್ಷಗಳ ಕಾಲ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಿತ್ತು. ಆದರೆ ಭಾರತದ ಸರ್ವೋಚ್ಚ ನ್ಯಾಯಾಲಯವು ಈ ಅಪರಾಧಿಗಳ ಶಿಕ್ಷೆಯನ್ನು ಐದು ವರ್ಷಗಳಿಗೆ ಇಳಿಸುವ ತೀರ್ಪನ್ನು ನೀಡಿರುವುದು ನಿಜಕ್ಕೂ ವಿವಾದನೀಯ ಸಂಗತಿಯಾಗಿದೆ ಇದು ಸರ್ವತ್ರ ಖಂಡನೆಗೆ ಗುರಿಯಾಗಿದೆ.

ಈ ತೀರ್ಪಿನ ವಿರುದ್ಧ ಬೆಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆ ಹಾಗೂ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು ಪ್ರತಿಭಟನೆಯನ್ನು ವ್ಯಕ್ತಪಡಿಸಿತು. ಈ ಪ್ರತಿಭಟನಾ ಪ್ರದರ್ಶನಕಾರರನ್ನುದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ಶಾರದ ಮಾತನಾಡಿ ಇದರ ವಿರುದ್ಧ ತೀವ್ರ ಹೋರಾಟ ಅಗತ್ಯವೆಂದು ಅಭಿಪ್ರಾಯಪಟ್ಟು ಈ ತೀರ್ಪನ್ನು ಹಿಂತೆಗೆದುಕೊಳ್ಳಲು ಆಗ್ರಹಿಸಿದರು. ಇದರ ವಿರುದ್ಧ ಜನವಾದಿ ಮಹಿಳಾ ಸಂಘಟನೆಯು ತನ್ನ ಹೋರಾಟವನ್ನು ಮುಂದುವರಿಸುತ್ತದೆ ಎಂದು ಹೇಳಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಗುರುಶಾಂತ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ, ಎಸ್.ಎಫ್.ಐನ ಶಾಂತಾರಾಂ ನಾಯಕ್ ಮಾತನಾಡಿ ಈ ತೀರ್ಪು ನಿಜಕ್ಕೂ ದುರದೃಷ್ಟಕರ ಎಂದು ಹೇಳಿ ಮಹಿಳೆಯರ ಈ ಹೋರಾಟಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಎಸ್.ಎಫ್.ಐನ ದ್ವಿತೀಯ ಸಮ್ಮೇಳನ

ಮುಂಡಗೋಡ: ಎಸ್.ಎಫ್.ಐನ ಸ್ಥಳೀಯ ತಾಲೂಕು ಸಮಿತಿಯು ತನ್ನ ಎರಡನೇ ಸಮ್ಮೇಳನವನ್ನು ನವೆಂಬರ್ 20 ರಂದು ಪಾಳಾದ ಮಹಾತ್ಮಾಜಿ [illegible] ನಡೆಸಿತು.

ವಿ.ಎಂ. ಜೋಷಿ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಾ ಕೋಮುವಾದದ ಅಪಾಯ ಹಾಗೂ ಅವನ್ನು ಎದುರಿಸಲು ಎಸ್.ಎಫ್.ಐ ಇನ್ನೂ ಹೆಚ್ಚು ಶ್ರಮಿಸಬೇಕೆಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಉ.ಕ. ಜಿಲ್ಲಾ ಕಾರ್ಯದರ್ಶಿಯಾದ ಸುರೇಶ ಹಾಂಡೇಲ ಮಾತನಾಡುತ್ತಾ ಇಂದಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಎಸ್.ಎಫ್.ಐ. ಯನ್ನು ಬಲಿಷ್ಠವಾಗಿ ಕಟ್ಟಿ ಬೆಳೆಸಬೇಕೆಂದರು. ಎಸ್.ಎಫ್.ಐನ ಜಿಲ್ಲಾಧ್ಯಕ್ಷರಾದ ಅಶೋಕ ಮೈಸೂರ ಮಠರವರು ಮಾತನಾಡುತ್ತಾ ಕೇಂದ್ರ ಸರಕಾರದ ಅಪಾಯಕಾರಿ ಆರ್ಥಿಕ ಕೈಗಾರಿಕಾ ನೀತಿಗಳನ್ನು ವಿವರಿಸಿ ಅದರ ವಿರುದ್ಧ ಹೋರಾಡಲು ಕರೆ ನೀಡಿದರು.

ಎಲ್.ಎನ್. ಚೆನ್ನಣ್ಣ, ಎ.ಎಸ್. ಪಾಟೀಲ್, ಎಸ್.ಯು. ಮಳಿಯಪ್ಪಗೌಡ ಮುಂತಾದವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಎಸ್.ಎಫ್.ಐ ತಾಲೂಕು ಅಧ್ಯಕ್ಷರಾದ ಗೋಪಾಲ ಕೃಷ್ಣ ಜಿ. ಹೆಗಡೆ ವಹಿಸಿದ್ದರು.

ಸ್ವಾಗತ ಭಾಷಣ, ಅತಿಥಿಗಳ ಪರಿಚಯ ಹಾಗೂ ಕಾರ್ಯಕ್ರಮ ನಿರ್ವಹಣೆಯನ್ನು ಮುಂಡಗೋಡ ತಾಲೂಕಾ ಸಮಿತಿ ಕಾರ್ಯದರ್ಶಿಯಾದ ಯುವರಾಜ ಕಂಬಾಳಿ ಮಠ ನಿರ್ವಹಿಸಿದರು.

ಈ ಸಮ್ಮೇಳನ ಹೊಸ ಪದಾಧಿಕಾರಿಗಳನ್ನು ಆರಿಸಿತು. ಅಧ್ಯಕ್ಷರಾಗಿ ಪ್ರಕಾಶ ಮೊಗೇರ, ಕಾರ್ಯದರ್ಶಿಯಾಗಿ ಸೋಮಲಿಂಗ ಕಾಳಪ್ಪ, 26 ಜನರನ್ನೊಳಗೊಂಡ ಸಮಿತಿಯನ್ನು ಆರಿಸಲಾಯಿತು.

ಈ ಸಮ್ಮೇಳನವು ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು. ಆಡಳಿತದಲ್ಲಿ ಕನ್ನಡ ಭಾಷೆ ಜಾರಿಯಾಗಬೇಕು, ಶಿಕ್ಷಣದಲ್ಲಿ ಹಿಂದಿ ಇಂಗ್ಲೀಷ್ ಕಡ್ಡಾಯವಾಗಿ ಹಿಂತೆಗೆಯಬೇಕು. ಕಾತೂರ ಹೈಸ್ಕೂಲ್ ಕಟ್ಟಡವನ್ನು ತಕ್ಷಣ ಕಟ್ಟಲು ಆರಂಭಿಸಲು, ಶಿಕ್ಷಣದಲ್ಲಿ ಹಿಂದಿ ಕಡ್ಡಾಯ ವಿರೋಧಿಸಿ ಡಿಸೆಂಬರ್ 4, 1993ರಂದು ಪ್ರತಿಭಟನಾ ದಿನಾಚರಣೆ, ತರಗತಿ ಬಹಿಷ್ಕಾರ, ಬಹಿರಂಗ ಸಭೆಗಳನ್ನು ನಡೆಸಲು ತೀರ್ಮಾನಿಸಲಾಯಿತು.

ದಕ್ಷಿಣ ಆಫ್ರಿಕಾ: ವರ್ಣ ಭೇಧ ಕೊನೆಗೊಳಿಸುವತ್ತ ಮತ್ತೊಂದು ಹೆಜ್ಜೆ
ತಾತ್ಕಾಲಿಕ ಸಂವಿಧಾನಕ್ಕೆ ಒಪ್ಪಿಗೆ

ವರ್ಣಭೇಧ ಕೊನೆಗೊಳಿಸುವತ್ತ ದಕ್ಷಿಣ ಆಫ್ರಿಕಾ ಇನ್ನೊಂದು ದೊಡ್ಡ ಹೆಜ್ಜೆ ಇಟ್ಟಿದೆ. 26 ಪಕ್ಷಗಳು ಭಾಗವಹಿಸುತ್ತಿರುವ ಸರ್ವಪಕ್ಷ ಸಂವಿಧಾನ ವೇದಿಕೆ ತಾತ್ಕಾಲಿಕ ಸಂವಿಧಾನಕ್ಕೆ ಬಹುಮತದಿಂದ ಅಸ್ತು ನೀಡಿದೆ. 26 ಪಕ್ಷಗಳಲ್ಲಿ 21 ಪಕ್ಷಗಳು ತಾತ್ಕಾಲಿಕ ಸಂವಿಧಾನಕ್ಕೆ ಒಪ್ಪಿಗೆ ನೀಡಿವೆ. ಸಂವಿಧಾನದ ಕೆಲವು ಸಲಹೆಗಳಿಗೆ ಇತರ ಪಕ್ಷಗಳು ವಿರೋಧವಾಗಿವೆ. ಪಾನ್ ಆಫ್ರಿಕನ್ ಕಾಂಗ್ರೆಸ್ ಎಂಬ ಕರಿಯರ ಸಂಘಟನೆ, ಜುಲು ಎಂಬ ಆದಿವಾಸಿ ಪಂಗಡದ ನಾಯಕನ ಪಕ್ಷ ಇಂಕಾತಾ ಫ್ರೀಡಂ ಪಾರ್ಟಿ, ಬಿಳಿಯರ ಬಲಪಂಥೀಯ ಸಂಘಟನೆ, ಆಫ್ರಿಕಾ ನೇರ್ ಪೀಪಲ್ಸ್ ಯೂನಿಯನ್ ಸಂವಿಧಾನ ವಿರೋಧಿಸುತ್ತಿರುವ ಪ್ರಮುಖ ಪಕ್ಷಗಳು.

ಆದರೆ ಬಹುಸಂಖ್ಯಾತ ಕರಿಯರನ್ನು ಹಾಗೂ ಬಿಳಿಯರನ್ನು ಪ್ರತಿನಿಧಿಸುವ ಪಕ್ಷಗಳಾದ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್, ಮತ್ತು ನ್ಯಾಶನಲ್ ಪಾರ್ಟಿಗಳು ಅಸ್ತು ನೀಡಿರುವುದರಿಂದ ಕೆಲವು ಪಕ್ಷಗಳ ವಿರೋಧ ಇದ್ದಾಗ್ಯೂ ತಾತ್ಕಾಲಿಕ ಸಂವಿಧಾನ ಜಾರಿಗೆ ಬರುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಒಂದು ವಾರದೊಳಗೆ ದಕ್ಷಿಣ ಆಫ್ರಿಕಾದ ಈಗಿನ ಪಾರ್ಲಿಮೆಂಟಿನ ಅನುಮೋದನೆ ಸಿಗುವುದೂ ಹೆಚ್ಚು ಕಡಿಮೆ ಖಚಿತ - ನ್ಯಾಶನಲ್ ಪಾರ್ಟಿಗೆ ಬಹುಮತ ಇರುವುದರಿಂದ.

'ಚಾರಿತ್ರಿಕ ಹೆಜ್ಜೆ'

ನೆಲ್ಸನ್ ಮಂಡೇಲಾ ತಾತ್ಕಾಲಿಕ ಸಂವಿಧಾನ ಅಂಗೀಕರಿಸಿರುವುದನ್ನು 'ಚಾರಿತ್ರಿಕ ಹೆಜ್ಜೆ' ಎಂದಿದ್ದಾರೆ. ಈ ತಾತ್ಕಾಲಿಕ ಸಂವಿಧಾನದ ಪ್ರಕಾರ ಈಗಿನ ಸರ್ಕಾರದ ಬದಲಿಗೆ ಬಹುಪಕ್ಷೀಯ ತಾತ್ಕಾಲಿಕ ಆಡಳಿತ ಕೌನ್ಸಿಲ್ ಆಡಳಿತ ವಹಿಸಿಕೊಳ್ಳಲಿದೆ. ಈಗಿನ ಎಲ್ಲಾ ಪಕ್ಷಗಳ ಸಶಸ್ತ್ರ ವಿಭಾಗಗಳೂ ಭದ್ರತಾ ಪಡೆಗಳು ಸೇರಿರುವ ಜಂಟಿ ಭದ್ರತಾ ಪಡೆಗಳು ಮಧ್ಯಂತರ ಅವಧಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತವೆ. ಏಪ್ರಿಲ್ 27 ರಲ್ಲಿ ನಡೆಯುವ ಪ್ರಥಮ ವರ್ಣಭೇದ - ರಹಿತ ಚುನಾವಣೆಯಲ್ಲಿ ಶೇಕಡಾ 5 ಕ್ಕಿಂತ ಹೆಚ್ಚು ಮತಗಳಿಸಿದ ಪಕ್ಷಗಳಿಗೆ ಸರ್ಕಾರದಲ್ಲಿ ಪ್ರಾತಿನಿಧ್ಯ ಇರುತ್ತದೆ. ಆದರೆ ಈ ಪಕ್ಷಗಳಿಗೆ ಬಹುಸಂಖ್ಯಾತ ಪಕ್ಷದ ನಿರ್ಧಾರ ಪಡೆಯುವ 'ವಿಟೋ' ಅಧಿಕಾರ ಚುನಾವಣೆಯಲ್ಲಿ ಇರುವುದಿಲ್ಲ. ಈ ಬಗ್ಗೆ ತೀಕ್ಷ್ಣವಾದ ಚೌಕಾಶಿ ನಡೆಯಿತು. ಚುನಾವಣೆಯಲ್ಲಿ ಬಹುಮತ ಪಡೆದರೂ ಎ.ಎನ್.ಸಿ.ಯನ್ನು ಬಲಹೀನಗೊಳಿಸುವ ಇತರ ಸಣ್ಣ ಪಕ್ಷಗಳ ಉಪಾಯ, ಎ.ಎನ್.ಸಿ. ದೃಢ ನಿಲುವಿನೆದುರು ನಡೆಯಲಿಲ್ಲ. ಇತರ ಸಣ್ಣ ಪಕ್ಷಗಳಿಗೆ ತಾವು ಕೊಚ್ಚಿ ಹೊಗುವ ಆತಂಕ ಇರದಂತೆ, ಎ.ಎನ್.ಸಿ. ಕೆಲವು ರಿಯಾಯಿತಿಗಳಿಗೆ ಒಪ್ಪಿತು. ಏಪ್ರಿಲ್ ಚುನಾವಣೆಗೆ ನಂತರ ಚುನಾಯಿತ ಚುನಾಯಿತ ಪಾರ್ಲಿಮೆಂಟು ರಚಿಸುವ ಸಂವಿಧಾನ ಶೇಕಡಾ 50 ಬಹುಮತದಿಂದ ಮಂಜೂರಾಗಬೇಕು ಎಂಬ ನಿಯಮಕ್ಕೆ ಒಪ್ಪಿತು.

ಇತರ ಹಲವು ವಿಷಯಗಳ ಬಗೆಗೂ ಎ.ಎನ್.ಸಿ. ಇದೇ ರೀತಿಯ ದೃಢ ನಿಲುವು ಹಾಗೂ ರಿಯಾಯಿತಿಗಳು ಮಿಶ್ರ ಪ್ರತಿಕ್ರಿಯೆಯಿಂದ ಹೆಚ್ಚಿನ ಪಕ್ಷಗಳಿಗೆ ಒಪ್ಪಿಗೆಯಾಗುವ ಸಂವಿಧಾನಕ್ಕೆ ಒಪ್ಪಿಗೆ ಪಡೆಯಲು ಸಾಧ್ಯವಾಗಿದೆ. ಈಗಿನ ವರ್ಣಭೇದದ ಸರ್ಕಾರ ಕೆಲವು ಕರಿಯ ನಾಯಕರ ವಿಧೇಯತೆ ಗಳಿಸಲು ರಚಿಸಿದ ಪ್ರತ್ಯೇಕ 'ಕರಿಯ ಪ್ರದೇಶ' ಅಥವಾ 'ಬಂಟುಸ್ತಾನ' ಗಳನ್ನು ಅಸ್ತಿತ್ವಕ್ಕೆ ತಂದ ಕಾನೂನನ್ನು ರದ್ದುಪಡಿಸಲಾಗಿದೆ.

ಸಂವೈಧಾನಿಕ ಕೋರ್ಟಿಗೆ ಜಡ್ಜ್‌ಗಳನ್ನು ಆಯ್ಕೆಮಾಡುವ ಅಧಿಕಾರ ತಾತ್ಕಾಲಿಕ ಸಂವಿಧಾನದ ಪ್ರಕಾರ ಅಧ್ಯಕ್ಷರಿಗೆ ಇರುವುದು. ಅಧ್ಯಕ್ಷರಾಗಿ ಎ.ಎನ್.ಸಿ. ಅಭ್ಯರ್ಥಿ ಆಯ್ಕೆಯಾಗುವ ಸಂಭವವಿದೆ. ಬಿಳಿಯರ ಪಕ್ಷಗಳು ಜಡ್ಜ್‌ಗಳನ್ನು ಈಗಿನ ಜಡ್ಜ್‌ಗಳನ್ನು ನೇಮಿಸಬೇಕೆಂದು ಪಟ್ಟುಹಿಡಿದಿದ್ದರು. ಆ ಮೂಲಕ ಎ.ಎನ್.ಸಿ. ಸರಕಾರಕ್ಕೆ ತೊಂದರೆ ಕೊಡಬಹುದೆಂದು ಭಾವಿಸಿದ್ದರು.

ಅದೇ ರೀತಿ ಭಾಷೆಯ ವಿಷಯದಲ್ಲೂ ಎ.ಎನ್.ಸಿ. ತನ್ನ ಪ್ರಜಾಸತ್ತಾತ್ಮಕ ನಿಲುವನ್ನು ಎತ್ತಿ ಹಿಡಿದಿದೆ. ಎಲ್ಲಾ ಹನ್ನೊಂದು ಪ್ರಮುಖ ಭಾಷೆಗಳೂ - ಇಂಗ್ಲೀಷ್ ಆಫ್ರಿಕಾನ್, ಮತ್ತು 9 ಕರಿಯರ ಭಾಷೆಗಳು - ಅಧಿಕೃತ ಭಾಷೆಗಳಾಗಿರುವವು ಎಂದು ನಿರ್ಧರಿಸಲಾಗಿದೆ. ಈಗ ಇಂಗ್ಲೀಷ್ ಮತ್ತು ಆಫ್ರಿಕಾನ್ ಮಾತ್ರ ಅಧಿಕೃತ ಭಾಷೆಗಳಾಗಿವೆ. ಹದಿನೇಳನೇ ಶತಮಾನದ ಡಚಸ್ ಒಂದು ರೂಪವಾದ ಆಫ್ರಿಕಾನ್ ಭಾಷೆ, ಬಿಳಿಯರ ಶೋಷಣೆ ಹೊದಿಸುವ ಭಾಷೆ ಎಂದು ಕರಿಯರು ಭಾವಿಸುತ್ತಾರೆ. ಆಫ್ರಿಕಾನ್ಸ್ ಹೊರಿಸುವ ವಿರುದ್ಧ ಹಲವಾರು ಪ್ರಸಿದ್ಧ ಹೋರಾಟಗಳು ನಡೆದಿವೆ.

ಈಗಿರುವ ಎಲ್ಲಾ ಸರಕಾರಿ ನೌಕರರ, ಅಧಿಕಾರಿಗಳ ಸೇವೆ ಮುಂದುವರಿಸುವುದು ಎಂದು ಭರವಸೆ ಕೊಡುತ್ತಾ, ಅವರಿಗೆ ಮುಂದೆ ಪೆನ್‌ಶನ್ ನೀಡುವ ಭರವಸೆ ಸಹ ನೀಡಲಾಗಿದೆ. ಇದರ ಜತೆಗೆ ವರ್ಣಭೇದ-ವಿರೋಧಿ ಸ್ವಾತಂತ್ರ್ಯ ಹೋರಾಟಗಾರರಿಗೂ ಪೆನ್‌ಶನ್ ನೀಡುವ ಬಗ್ಗೆ ಇತರ ಪಕ್ಷಗಳನ್ನು ಒಪ್ಪಿಸಿದೆ.

ಹೋರಾಟ ಮತ್ತು ಮಾತುಕತೆ

ಮಾತುಕತೆಗಳಲ್ಲಿ ಪ್ರಜಾಸತ್ತಾತ್ಮಕ ನೀತಿಯ ಆಧಾರದ ಮೇಲೆ ಪ್ರಮುಖ ನೀತಿಗೆ ಇತರ ಪಕ್ಷಗಳನ್ನು ಒಪ್ಪಿಸಲು ಎ.ಎನ್.ಸಿ.ಗೆ ಸಾಧ್ಯವಾಗಿದೆ. ಇದು ಸಾಧ್ಯವಾಗಿರುವುದು, ಎ.ಎನ್.ಸಿ.ಯ ವ್ಯಾಪಕ ಜನಬೆಂಬಲದ ಬಗೆಗೆ ಇತರ ವಿರೋಧ ಪಕ್ಷಗಳಿಗೆ ಅರಿವಿರುವುದರಿಂದ ಅಲ್ಲದೆ ಇತರ ಪಕ್ಷಗಳ ಮಸಲತ್ತಿನ ವಿರುದ್ಧ ಸಾಮೂಹಿಕ ಕಾರ್ಯಾಚರಣೆ ಮಾಡುವ ತಾಕತ್ತು ಈ ಚಳುವಳಿಗೆ ಇದೆ ಎಂಬುದು ಸ್ಪಷ್ಟವಾಗಿರುವುದರಿಂದ. ಅಗತ್ಯಬಿದ್ದರೆ ಸಶಸ್ತ್ರ ಹೋರಾಟ ಪುನಃ ಆರಂಭಿಸುವ ಆಯ್ಕೆಯನ್ನು ಎ.ಎನ್.ಸಿ. ಬಿಟ್ಟುಕೊಡದಿರುವುದು ವರ್ಣಭೇಧ- ಬೆಂಬಲಿಗರಿಗೆ ನಡುಕ ಹುಟ್ಟಿಸುವಂತಹುದು. ಅಷ್ಟೇ ಅಲ್ಲ ಇತರ ಪಕ್ಷಗಳ ನ್ಯಾಯಯುತ ಬೇಡಿಕೆಗಳನ್ನು ಎ.ಎನ್.ಸಿ. ಮುತ್ಸದ್ದಿತನದಿಂದ ಅಂಗೀಕರಿಸುವುದೂ ಸಫಲ ಮಾತುಕತೆಗಳಿಗೆ ಕಾರಣವಾಯಿತು. ಎ.ಎನ್.ಸಿ.ಯ ಬೆನ್ನೆಲುಬಾಗಿರುವ ಕಮ್ಯುನಿಸ್ಟ್ ಪಕ್ಷದ ಪಾತ್ರ ಇದರಲ್ಲಿ ಹಿರಿದು. ಹೋರಾಟ, ಮಾತುಕತೆಗಳ ಸರಿಯಾದ ಸಮನ್ವಯ ಸಾಧಿಸಿರುವ ಶ್ರೇಯಸ್ಸು ಎ.ಎನ್.ಸಿ. ಕಮ್ಯುನಿಸ್ಟ್ ಪಕ್ಷಕ್ಕೆ ಸಲ್ಲಬೇಕು.

ಅದೇ ಸಮಯದಲ್ಲಿ ವರ್ಣಭೇದ-ಬೆಂಬಲಿಗರು (ಬಿಳಿಯರು, ಕರಿಯರು) ಆಡಳಿತ, ಸೈನ್ಯ ಪೋಲೀಸು, ಆರ್ಥಿಕದಲ್ಲಿ ಪ್ರಬಲರಾಗಿದ್ದಾರೆ. ಅವರನ್ನು ಚಾಕಚಕ್ಯತೆಯಿಂದ ನಿರ್ವಹಿಸದಿದ್ದರೆ ಆರ್ಥಿಕ ರಾಜಕೀಯ ಅರಾಜಕತೆ ಹಬ್ಬುವ ಶಕ್ತಿ ಅವರಿಗಿದೆ ಎಂಬ ಎಚ್ಚರವನ್ನು ಎ.ಎನ್.ಸಿ. ವಹಿಸಿದೆ. ಒಟ್ಟಾರೆಯಾಗಿ ಎ.ಎನ್.ಸಿ. ತನ್ನ ಚಾರಿತ್ರಿಕ ಜವಾಬ್ದಾರಿಯನ್ನು ಬಹಳ ಜಾಗರೂಕತೆಯಿಂದ ನಿರ್ವಹಿಸುತ್ತಿದೆ.

ಲೋಕ ಸಂಚಾರ

--ಶರತ್ ಚಂದ್ರ

ಅತ್ತೂ ಕರೆದು ನಾಫ್ತಾಗೆ ಒಪ್ಪಿಸಿದ ಕ್ಲಿಂಟನ್

ನಾಫ್ತಾ (NAFTA- North American Free Trade Agreement) ಉತ್ತರ ಅಮೇರಿಕದ ಮೂರು ದೇಶಗಳು ಅಮೇರಿಕ, ಕೆನಡಾ, ಮೆಕ್ಸಿಕೋಗಳ ನಡುವಣ ವ್ಯಾಪಾರ ಒಪ್ಪಂದ. ಈ ಒಪ್ಪಂದದ ಪ್ರಕಾರ, ಈ ಮೂರು ದೇಶಗಳ ನಡುವಣ ಗಡಿ ವ್ಯಾಪಾರದ ಮಟ್ಟಿಗೆ ಇಲ್ಲವಾಗುತ್ತದೆ. ಸರಕುಗಳು, ಬಂಡವಾಳ, ಕಾರ್ಮಿಕರು ಈ ದೇಶಗಳ ನಡುವೆ ಮುಕ್ತವಾಗಿ ಚಲಿಸಬಹುದು. ಈ ಒಪ್ಪಂದಕ್ಕೆ ಅಮೇರಿಕದಲ್ಲಿ ತೀವ್ರ ವಿರೋಧವಿತ್ತು. ಅಮೇರಿಕಾದ ಪಾರ್ಲಿಮೆಂಟಿನ ಎರಡು ಅಂಗಗಳು- ಕಾಂಗ್ರೆಸ್, ಹಾಗೂ ಸೆನೆಟ್‌ನಲ್ಲಿ ಅದು ಅಂಗೀಕಾರಕ್ಕೆ ಮಂಡಿಸಲ್ಪಟ್ಟಿತ್ತು.

ಒಂದು ಹಂತದಲ್ಲಿ ಕಾಂಗ್ರೆಸ್‌ನಲ್ಲಿ ನಾಫ್ತಾ ಅಂಗೀಕಾರವಾಗುವುದಿಲ್ಲವೆಂಬುದು ಹೆಚ್ಚು ಕಡಿಮೆ ಖಚಿತವಾಗಿತ್ತು. ಅಧ್ಯಕ್ಷ ಕ್ಲಿಂಟನ್‌ರ ಡೆಮೊಕ್ರಾಟಿಕ್ ಪಕ್ಷದ ಸದಸ್ಯರೇ ಇದಕ್ಕೆ ಬಹುಸಂಖ್ಯೆಯಲ್ಲಿ ವಿರೋಧವಾಗಿದ್ದರು. ಅಮೇರಿಕದ ಕಾರ್ಮಿಕರು ತಮ್ಮ ಟ್ರೇಡ್‌ಯೂನಿಯನ್‌ಗಳ ಮೂಲಕ ನಾಫ್ತಾದ ವಿರುದ್ಧ ಭಾರಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದ್ದರು. ಅಮೇರಿಕದ ಕೈಗಾರಿಕೆಗಳು, ಉದ್ಯೋಗಗಳು ಕಡಿಮೆ ಕೂಲಿ ಇರುವ ಮೆಕ್ಸಿಕೋಕ್ಕೆ 'ರಫ್ತಾ'ಗುತ್ತವೆ ಎಂಬುದು ಈ ವಿರೋಧಕ್ಕೆ ಕಾರಣ. ಪರಿಸರವಾದಿಗಳೂ ಈ ಒಪ್ಪಂದದಿಂದಾಗಿ ಪರಿಸರ ಮಾಲಿನ್ಯ ಹೆಚ್ಚುತ್ತದೆ ಎಂಬ ಕಾರಣಕ್ಕೆ ನಾಫ್ತಾ ವಿರೋಧಿಸುತ್ತಿದ್ದರು. ಅಮೇರಿಕದ ಬಹುರಾಷ್ಟ್ರೀಯ ಕಂಪನಿಗಳು ಮಾತ್ರ ಈ ನಾಫ್ತಾ ಒಪ್ಪಂದಕ್ಕೆ ಬೆಂಬಲವಾಗಿದ್ದರು. ಕಳೆದ ವರ್ಷ ... ಡಾದಲ್ಲೂ ನಾಫ್ತಾ ಒಪ್ಪಂದ ಚುನಾವಣಾ ವಿಷಯವಾಗಿ ಅದರ ಬೆಂಬಲಿಗ ಆಳುವ ಪಕ್ಷ ಚುನಾವಣೆಯಲ್ಲಿ ಸೋತಿತು.

ಆದ್ದರಿಂದ ಅಧ್ಯಕ್ಷ ಕ್ಲಿಂಟನ್ ಕಾಂಗ್ರೆಸ್ ಸದಸ್ಯರನ್ನು ಗೆದ್ದುಕೊಳ್ಳಲು ಆಮಿಷ, ಬೆದರಿಕೆ, ಎಲ್ಲಾ ಬಳಸಿದ್ದಾರೆ ಎನ್ನಲಾಗಿದೆ. ಮಿಲಿಯಗಟ್ಟಲೆ ಡಾಲರುಗಳು ಹರಿದವಂತೆ. ನಾಫ್ತಾ ಒಪ್ಪಂದದ ಬಗ್ಗೆ ಹಲವಾರು ಸದಸ್ಯರಿಗೆ ಕ್ಲಿಂಟನ್ ಆಶ್ವಾಸನೆಗಳನ್ನು ನೀಡಿದ್ದರಂತೆ. ಅಂತೂ ಇಂತು ಅತ್ತೂ ಕರೆದು ಕ್ಲಿಂಟನ್ ನಾಫ್ತಾ ಒಪ್ಪಂದಕ್ಕೆ ಕಾಂಗ್ರೆಸ್ 234-200 ಮತಗಳಿಂದ ಅಂಗೀಕಾರ ನೀಡುವಂತೆ ಮಾಡಿದ್ದಾರೆ.

ಮುಕ್ತ ವ್ಯಾಪಾರ ಒಪ್ಪಂದ ಎಂದು ಕರೆಯಲ್ಪಡುವ ಈ ನಾಫ್ತಾ ನಿಜವಾಗಿಯೂ ಈ ದೇಶಗಳೊಳಗೆ ವ್ಯಾಪಾರದ ಮೇಲೆ ಇರುವ ಪ್ರತಿಬಂಧ ತೆಗೆಯುತ್ತಾ, ಇತರ ದೇಶಗಳ ರಫ್ತಿಗೆ ಇನ್ನೂ ಹೆಚ್ಚಿನ ಪ್ರತಿಬಂಧ ಹೇರಲಾಗುತ್ತದೆ. ಇದು ಭಾರತದಂತಹ ಮೂರನೇ ಜಗತ್ತಿನ ದೇಶಗಳ ರಫ್ತಿನ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಭಾರತದ ಬಟ್ಟೆ ಮತ್ತು ಉಡುಪುಗಳ ರಫ್ತುಗಳ ಮೇಲೆ ಇದು ದುಷ್ಪರಿಣಾಮ ಬೀರಲಿದೆ. ಈ ಕ್ಷೇತ್ರದಲ್ಲಿ ಇರುವ 125 ಕೋಟಿ ಡಾಲರುಗಳ ವ್ಯಾಪಾರದಲ್ಲಿ 95 ಕೋಟಿ ಡಾಲರುಗಳಷ್ಟು ಇತರ ದೇಶಗಳ ಮೇಲೆ ಪ್ರತಿಬಂಧ ಹೇರಲಾಗುತ್ತದೆ.

ಅಮೇರಿಕ- ದಕ್ಷಿಣ ಕೊರಿಯಾ ಜಂಟಿ ಕವಾಯಿತು

ಉತ್ತರ ಕೊರಿಯಾದ ಅಣುಶಕ್ತಿ ಕಾರ್ಯಕ್ರಮ ಮಿಲಿಟರಿ ಕಾರ್ಯಕ್ರಮ ಎಂದು ಗದ್ದಲ ಮಾಡುವ ಅಮೇರಿಕ ಆ ದೇಶದ ಮೇಲೆ ಬರಿಯ ಒಣ ಬೆದರಿಕೆ ಹಾಕುತ್ತಿಲ್ಲ. ಉತ್ತರ ಕೊರಿಯಾದ ಪ್ರತಿಭಟನೆ ಲೆಕ್ಕಿಸದೆ ವಾರ್ಷಿಕ ಜಂಟಿ ಕವಾಯಿತು ಆರಂಭಿಸಿದೆ. 36 ಸಾವಿರ ಅಮೇರಿಕನ್ ಸೈನಿಕರು ಆರೂವರೆ ಲಕ್ಷ ದಕ್ಷಿಣ ಕೊರಿಯಾ ಸೈನಿಕರು ಹತ್ತು ದಿನಗಳ ಈ ಜಂಟಿ ಕವಾಯಿತಿನಲ್ಲಿ ಭಾಗವಹಿಸಿದರು.

ಉತ್ತರ ಕೊರಿಯಾದ ತನ್ನ ಅಣು ಸ್ಥಾವರಗಳ ಮೇಲಿನ ಅಂತರ್‍ರಾಷ್ಟ್ರೀಯ ಪರೀಕ್ಷಣೆಗೆ ಅನುಮತಿ ಹಿಂತೆಗೆದುಕೊಂಡ ನೆಪದಲ್ಲಿ, ಉತ್ತರ ಕೊರಿಯಾದ ಮೇಲೆ ದಾಳಿ ಮಾಡುವ ಬೆದರಿಕೆ ಹಿನ್ನೆಲೆಯಲ್ಲಿ ಈ ಜಂಟಿ ಕವಾಯಿತು ಅತ್ಯಂತ ಪ್ರಚೋದನಕಾರಿ ಎಂದು ಬೇರೆ ಹೇಳಬೇಕಾಗಿಲ್ಲ.

ಕನಿಷ್ಟ ಕೂಲಿ ಪ್ರಕಟಣೆಯಲ್ಲಿ ಹಿಂಜರಿಕೆ ವಿಳಂಬ ಗೊಂದಲ

ಅಂಶವನ್ನು ಎಂದೂ ಪಾಲಿಸಿಲ್ಲ. ಕರಡು ಸೂಚನೆಗೆ ಆಕ್ಷೇಪಗಳನ್ನು ಪಡೆಯುವುದು, ಅವನ್ನು ಪಟ್ಟಿ ಮಾಡುವುದು, ಪಟ್ಟಿಯನ್ನು ಸಲಹಾ ಸಮಿತಿಯ ಮುಂದಿಡುವುದು, ಅದರ ಶಿಫಾರಸು ಪಡೆಯುವುದು ಹಾಗೂ ನಂತರ ಸರಕಾರ ಆ ಬಗ್ಗೆ "ನಿರ್ಣಯಿಸು" ವುದು ಇಷ್ಟಕ್ಕೇ ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಬೇಕಾಗುತ್ತಿದೆ ಎಂಬುದನ್ನೂ ನಾವು ಗಮನಿಸಿದ್ದೇವೆ.

ವಿವಿಧ ದರಗಳು

ಕೂಲಿದರಗಳು ವಿವಿಧ ವಲಯಗಳಲ್ಲಿ ಭಿನ್ನವಾಗಿರುತ್ತವೆ. ಮಾತ್ರವೇ ಅಲ್ಲ ವಿವಿಧ ಉದ್ಯೋಗಗಳಲ್ಲಿ, ವಿವಿಧ ಮಟ್ಟದ ನಿಪುಣತೆಗಳಿಗನುಸಾರವಾಗಿಯೂ ಭಿನ್ನವಾಗಿರುತ್ತವೆ. ಕೋಷ್ಟಕ 1ರ ದರಗಳು ನಿಪುಣರಲ್ಲದ ಕಾರ್ಮಿಕರಿಗಷ್ಟೆ ಅನ್ವಯವಾಗುತ್ತವೆ. ನಿಪುಣರಲ್ಲದ, ಅರೆ ನಿಪುಣ, ನಿಪುಣ, ಅತಿನಿಪುಣ ಎಂಬ ವಿಧಗಳಲ್ಲದೆ ಗುಮಾಸ್ತೆ/ಉಸ್ತುವಾರಿ ಸಿಬ್ಬಂದಿ (ಸೂಪರ್ ವೈಸರ್‌ಗಳು) ಹಾಗೂ ಇತರ ಸಾಮಾನ್ಯ ವಿಧಗಳೂ ಇವೆ. ಇಂತಹ ವಿಧಗಳು, ಹುದ್ದೆಗಳು ನೋಟಿಫಿಕೇಶನ್‌ನಿಂದ ನೋಟಿಫಿಕೇಶನ್‌ಗೆ ಭಿನ್ನವಾಗಿರುತ್ತವೆ. ಮೊದಲನೆಯದಾಗಿ, ನಾವೀಗಾಗಲೇ ವಾದಿಸಿರುವಂತೆ, ಅತಿ ಕೆಳಗಿನ ಹುದ್ದೆಗೆ ಕೂಲಿ ನಿಗದಿ ಮಾಡುವ ವಿಧಿ-ವಿಧಾನಗಳು ಇರಬೇಕು. ಎರಡನೆಯದಾಗಿ, ವಿವಿಧ ಹುದ್ದೆಗಳಿಗೆ ವಿವಿಧ ದರಗಳನ್ನು ನಿಗದಿಪಡಿಸಲು ಒಂದು ನಿರ್ದಿಷ್ಟ ಆಧಾರವಿರಬೇಕು. ಮೂರನೆಯದಾಗಿ, ಯಾವುದೇ ಉದ್ಯೋಗದಲ್ಲಿದ್ದರೂ ಗುಮಾಸ್ತೆ /ಟ್ರೈಪಿಸ್ಟ್, ಡ್ರೈವರ್, /ಜವಾನ, ವಾಚ್‌ಮನ್, ಫಿಟ್ಟರ್/ವೆಲ್ಡರ್ ಮುಂತಾದ ಕಸುಬುಗಳಿಗೆ ಒಂದೇ ರೀತಿಯ ಕೂಲಿದರವಿರಬೇಕು. ಏಕೆಂದರೆ ಸರಕಾರ ನೋಟಿಫೈ ಮಾಡುವುದು ಕನಿಷ್ಟ ದರಗಳನ್ನು, ಮಾಲಕನ ಕೊಡುವ ಸಾಮರ್ಥ್ಯವನ್ನು ಅವಲಂಬಿಸಿರುವ 'ನ್ಯಾಯವೇತನ'ವನ್ನಲ್ಲ. ಈ ಎಲ್ಲಾ ವಿಧಗಳ ಕಾರ್ಮಿಕರು ತಮ್ಮ ದಕ್ಷತೆಯನ್ನು ನಿರೀಕ್ಷಿತ ಮಟ್ಟದಲ್ಲಿ ಕಾದುಕೊಳ್ಳಬೇಕು ತಾನೇ?

ವಿವಿಧ ನೋಟಿಫಿಕೇಶನ್‌ಗಳನ್ನು ಪರೀಕ್ಷಿಸಿದರೆ ನಿಪುಣತೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾದಂತಹ ಇಂಜನಿಯರಿಂಗ್ ನಂತಹ ಉದ್ಯೋಗದಲ್ಲಿ ಅತಿ ನಿಪುಣ ಕೆಲಸಗಾರರಿಗೆ ನೋಟಿಫೈ ಮಾಡುವ ಕೂಲಿ ನಿಪುಣರಲ್ಲದ ಕೆಲಸಗಾರರಿಗೆ (ಕೋಷ್ಟಕ 1) ನಿಗದಿಮಾಡುವ ಕೂಲಿಗಿಂತ 200 ರಿಂದ 208 ಶೇ. ರಷ್ಟಿರುತ್ತದೆ. ನಿಪುಣ ಕೆಲಸಗಾರರಿಗೆ 132 ರಿಂದ 140 ಶೇ., ಅರೆ ನಿಪುಣ ಕೆಲಸಗಾರರಿಗೆ 107 ರಿಂದ 110 ಶೇ. ಇರುತ್ತವೆ. ಪ್ಲೈವುಡ್, ಹೆಂಚು ಮುಂತಾದವುಗಳಲ್ಲಿ ಅತಿನಿಪುಣ ಕೆಲಸಗಾರರು 143 ಶೇ. (ಪ್ಲೈವುಡ್), ನಿಪುಣ ಕೆಲಸಗಾರರು 138 ಶೇ. (ಹೆಂಚು ಮತ್ತು ಪ್ಲೈವುಡ್) ಹಾಗೂ 119-125 ಶೇ. (ಪ್ಲೈವುಡ್ ಮತ್ತು ಹೆಂಚು ಅನುಕ್ರಮವಾಗಿ) ಅರೆ ನಿಪುಣ ಕೆಲಸಗಾರರಿಗೆ ದೊರೆಯುತ್ತದೆ.

ನರ್ಸಿಂಗ್ ಹೋಂ, ಕಟ್ಟಡ ನಿರ್ಮಾಣ ಮುಂತಾದ ಉದ್ಯೋಗಗಳಲ್ಲಿ ವಿವಿಧ ನಿಪುಣತೆಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಉದಾಹರಣೆಗೆ ಆಯಾಗಳಿಂದ ಡಾಕ್ಟರುಗಳವರೆಗೆ, ಕೂಲಿಗಳಿಂದ ಇಂಜಿನಿಯರ್‌ಗಳವರೆಗೆ ವಿವಿಧ ಹುದ್ದೆಗಳಿವೆ. ನರ್ಸಿಂಗ್‌ನಂತಹ ಒಂದೇ ಕಸುಬಿನೊಳಗೂ ದರಗಳು ಭಿನ್ನವಾಗಿರುತ್ತವೆ. ನರ್ಸಿಂಗ್ ಆರ್ಡರ್ಲಿಗೆ ಆಯಾಗಳ ಕೂಲಿಯ 105 ಶೇ., ಪ್ರಯೋಗಾಲಯ ಸಹಾಯಕನಿಗೆ 117ಶೇ. ಗುಮಾಸ್ತನಿಗೆ 129 ಶೇ., ಮಿಡ್-ವೈಫ್‌ಗೆ 140 ಶೇ., ಐದು ವರ್ಷಗಳಿಂದ ಕಮ್ಮಿ ಅನುಭವದ ನರ್ಸ್‌ಗೆ 152 ಶೇ., ಸ್ಟಾಫ್ ನರ್ಸ್‌ಗೆ 160 ಶೇ., ಕ್ಲಿನಿಕಲ್ ಸೂಪರ್‌ವೈಸರ್‌ಗೆ 187ಶೇ., ಮೇಟ್ರನ್‌ಗೆ 199 ಶೇ. ಕಿರಿಯ ಡಾಕ್ಟರ್‌ಗಳಿಗೆ 235 ಶೇ. ಇತ್ಯಾದಿ. ಕಟ್ಟಡ ನಿರ್ಮಾಣದಲ್ಲೂ ಇಂತಹ ವಿವಿಧ ದರಗಳಿವೆ.

ಈ ವಿವಿಧ ದರ್ಜೆಗಳನ್ನು ನಿಪುಣರಲ್ಲದ (iiಮತ್ತು i) ಅರೆನಿಪುಣ (iiಮತ್ತು i), ನಿಪುಣ (iiಮತ್ತು i), ಅತಿನಿಪುಣ (iiಮತ್ತು i), ಉಚ್ಚ ತಂತ್ರಜ್ಞಾನ (iiಮತ್ತು i) ಎಂದು ವಿಂಗಡಿಸಿ ಪ್ರತಿ ಹಂತದಲ್ಲಿ ಅದರ ಕೆಳಗಿನ ಹಂತಕ್ಕಿಂತ 10 ಶೇ. ಹೆಚ್ಚು ನಿಗದಿಮಾಡಿದರೆ ಒಂದು ರೀತಿಯ ವ್ಯವಸ್ಥೆ ಬರಲು ಸಾಧ್ಯ ಆದರೆ ಆಗ ಅತೀ ಕೆಳಗಿನ ಹಂತದ ಕೂಲಿಯನ್ನು ಬದುಕುಳಿಯುವ ಕೂಲಿಗಿಂತ ಸ್ವಲ್ಪ ಹೆಚ್ಚಿನ ಮಟ್ಟದಲ್ಲಿ ನಿಗದಿ ಮಾಡಬೇಕಾಗುತ್ತದೆ.

ಈ ರೀತಿ ವ್ಯವಸ್ಥಿತಗೊಳಿಸುವವರೆಗೆ ಈಗಿರುವ ಭಿನ್ನದರಗಳನ್ನು ಉಳಿಸಿಕೊಳ್ಳಬಹುದು. ನಿಪುಣರಲ್ಲದ ಕೆಲಸಗಾರರಿಗೆ ನಿಗದಿ ಮಾಡುವ ಕೂಲಿಯ ಆಧಾರದ ಮೇಲೆ ಈ ಭಿನ್ನದರಗಳನ್ನು ನಿಗದಿಮಾಡಬಹುದು.

ತಕ್ಷಣದ ಬೇಡಿಕೆ

- ಸಿಐಟಿಯು 1309 ಬೆಲೆ ಸೂಚ್ಯಂಕ ಪಾಯಿಂಟ್ ಮಟ್ಟದಲ್ಲಿ 'ಬದುಕುಳಿಯುವ ಕೂಲಿ' 1,800 ರೂ. ಇರಬೇಕು ಹಾಗೂ ಬೆಲೆ ಏರಿಕೆಯನ್ನು ಸರಿಹೊಂದಿಸುವ ದರ ಅತೀ ಕೆಳಗಿನ ತರಗತಿಯ ಕಾರ್ಮಿಕರಿಗೆ ದಿನಕ್ಕೆ ಪ್ರತಿ ಪಾಯಿಂಟಿಗೆ 5 ಪೈಸೆಗಿಂತ ಕಮ್ಮಿಯಿರಬಾರದು ಎಂದು ಒತ್ತಾಯಿಸುತ್ತಿದೆ.
- ಮಾಲಕರ ಸಂಘಗಳು, ಕಾರ್ಮಿಕರ ಸಂಘಗಳು, ಸರಕಾರ ಲೆಕ್ಕ ಹಾಕಿರುವ (ಬಡತನದ ಮಟ್ಟ ಹಾಗೂ ಬದುಕುಳಿಯುವ ಮಟ್ಟದಲ್ಲೂ) ಎಲ್ಲಾ ಕೂಲಿಗಳ ಸರಾಸರಿ ದಿನಕ್ಕೆ 50 ರೂ. ಆಗುತ್ತದೆ. ಇದುವರೆಗೆ ನೋಟಿಫೈ ಮಾಡಿ ಜ್ಯಾರಿಗೊಳಿಸಿರುವ ಅತ್ಯುತ್ತಮ ದರ (ಇದು ಕರ್ನಾಟಕ ಹೈಕೋರ್ಟಿನಿಂದಲೂ ಸೈ ಎಂದೆನಿಸಿಕೊಂಡಿದೆ.) ಸಿನೆಮಾ ಕಾರ್ಮಿಕರಿಗೆ ದಿನಕ್ಕೆ ರೂ. 46.64 ಆಗುತ್ತದೆ. ಇವನ್ನೆಲ್ಲಾ ಗಮನಿಸಿ ಎಲ್ಲಾ ಉದ್ದಿಮೆಗಳಿಗೂ ಕನಿಷ್ಟ ದಿನ-ಗೂಲಿ 50 ರೂ. ಗಿಂತ ಕಡಿಮೆ ಇರಬಾರದು ಎಂದು ನಾವು ಒತ್ತಾಯಿಸುತ್ತೇವೆ.
- ಸಿಐಟಿಯು ಒತ್ತಾಯಿಸಿರುವ 1800 ರೂ. 'ಬದುಕುಳಿಯುವ ಮಟ್ಟದ' ಕೂಲಿ, ಇದನ್ನು *1,309 ಪಾಯಿಂಟುಗಳಿಗಿಂತ ಹೆಚ್ಚಿನ ಸೂಚ್ಯಂಕಕ್ಕೆ ಪಾಯಿಂಟಿಗೆ 5 ಪೈಸೆ ದರದ ತುಟ್ಟಿಭತ್ಯೆ ನೋಟಿಫೈ ಮಾಡಿದರೆ ಕ್ರಮೇಣ ತಲುಪಲು* ಸಾಧ್ಯ ಎಂಬುದನ್ನೂ ಸರಕಾರ ಅರಿತುಕೊಳ್ಳಬೇಕು. ಈ ದರಗಳನ್ನು ಅರೆ ನಿಪುಣ, ನಿಪುಣ ಹಾಗೂ ಅತಿ ನಿಪುಣ ಕೆಲಸಗಾರರಿಗೆ ಅನುಕ್ರಮವಾಗಿ 6, 7, 8 ಪೈಸೆ ಎಂದು ನಿಗದಿಪಡಿಸಿದರೆ ಅವರ ಕೂಲಿಯ ಮೌಲ್ಯವನ್ನು ಬೆಲೆಯೇರಿಕೆಗೆ ಅನುಗುಣವಾಗಿ ನಿಪುಣರಲ್ಲದ ಕೆಲಸಗಾರರ 120, 140, 160, ಶೇ. ಮಟ್ಟದಲ್ಲಿ ಸರಿಹೊಂದಿಸಿದಂತಾಗುತ್ತದೆ.
- ಈಗಾಗಲೇ ಕರಡು ಸೂಚನೆ ಪ್ರಕಟಿಸಿರುವಲ್ಲಿ ಹಾಗೂ ಆಕ್ಷೇಪಗಳನ್ನು ಮಂಡಿಸಲು ಅವಕಾಶ ನೀಡಿರುವ ಉದ್ಯೋಗಗಳಲ್ಲಿ ಅಂದರೆ ಹೋಟೆಲ್‌ಗಳು, ಪ್ರಿಂಟಿಂಗ್ ಪ್ರೆಸ್, ಚರ್ಮ ಹದಮಾಡುವುದು, ಬಿಸ್ಕತ್ ತಯಾರಿಕೆ, ಕಾಫಿ ಕ್ಯೂರಿಂಗ್, ಅರಣ್ಯಗಾರಿಕೆ, ಸಿಹಿತಿಂ ತಯಾರಿಕೆ, ಜಿನ್ನಿಂಗ್ ಹಾಗೂ ಕೃಷಿಯಲ್ಲಿ ಸರಕಾರ ತಕ್ಷಣ ಅಂತಿಮ ಸೂಚನೆಗಳನ್ನು ಪ್ರಕಟಿಸಬೇಕು ಎಂದು ಸಿಐಟಿಯು ಒತ್ತಾಯಿಸುತ್ತದೆ.
- ಬೇರೆಲ್ಲಾ ಉದ್ಯೋಗಗಳಲ್ಲಿ, ವಿಶೇಷವಾಗಿ, ಕೈಮಗ್ಗ, ಪವರ್‌ಲೂಮ್, ರೇಶ್ಮೆ ಬಟ್ಟೆ, ಬೀಡಿ, ಪ್ಲಾಂಟೇಷನ್, ಹೆಂಚು, ಗೇರುಬೀಜ, ಇಂಜಿನಿಯರಿಂಗ್, ಅಗರ್‌ಬತ್ತಿ ಗಾರ್ಮೆಂಟ್ ಇತ್ಯಾದಿಗಳಲ್ಲಿ ಸರಕಾರ ತಕ್ಷಣ ಕರಡು ಸೂಚನೆಗಳನ್ನು ಪ್ರಕಟಿಸಬೇಕು. ಇವುಗಳಲ್ಲಿ ಕನಿಷ್ಟ ಕೂಲಿ ದಿನಕ್ಕೆ 50 ರೂ. ಅಥವಾ ತಿಂಗಳಿಗೆ 1,500 ರೂ ಗಿಂತ ಕಮ್ಮಿಯಿರಬಾರದು. ತುಟ್ಟಿಭತ್ಯೆದರ 1,309 ಪಾಯಿಂಟಿಗಿಂತ ಪ್ರತಿ ಹೆಚ್ಚಿನ ಒಂದು ಪಾಯಿಂಟಿಗೆ 5,6,7 ಹಾಗೂ 8 ಪೈಸೆ ಇರಬೇಕು ಎಂದೂ ಸಿಐಟಿಯು ಒತ್ತಾಯಿಸುತ್ತದೆ.
- ಕನಿಷ್ಟ ಕೂಲಿಯನ್ನು ಕಟ್ಟುನಿಟ್ಟಾಗಿ ಜ್ಯಾರಿಗೊಳಿಸಲಾಗಿದೆಯೇ ಎಂದು ನೋಡಿಕೊಳ್ಳಲು ಸರಕಾರ ತಕ್ಷಣ ತ್ರಿಪಕ್ಷೀಯ ಸಮಿತಿಗಳನ್ನು ನೇಮಿಸಬೇಕು
- ದುಡಿಯುವ ಮಕ್ಕಳ ಶೋಷಣೆಯನ್ನು ತಡೆಯಲು ಹಾಸ್ಟೆಲ್‌ಗಳನ್ನು ಕಟ್ಟುವ, ಶಿಕ್ಷಣ ಸೌಲಭ್ಯಗಳನ್ನು ನೀಡುವ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.
- ದುಡಿಯುವ ಮಹಿಳೆಯರಿಗೆ ಸಂಬಂಧಪಟ್ಟ ಎಲ್ಲಾ ಕಾರ್ಮಿಕರ ಕಾನೂನುಗಳನ್ನು ಪಾಲಿಸುವಂತೆ, ವಿಶೇಷವಾಗಿ ಹೆರಿಗೆ ಸೌಲಭ್ಯವನ್ನು ತಪ್ಪದೇ ಒದಗಿಸುವಂತೆ ಸರಕಾರ ಕ್ರಮ ಕೈಗೊಳ್ಳಬೇಕು.
- ಅಸಂಘಟಿತ ವಲಯದ ಸರಕುಗಳ ಉತ್ಪಾದನೆಗೆ ಕಾರ್ಮಿಕರ ಸಹಕಾರ ಸಂಘಗಳನ್ನು ಸರಕಾರ ಪ್ರೋತ್ಸಾಹಿಸಬೇಕು.

ಮುಂದುವರಿಯುತ್ತದೆ

KRNM/BGS-405 MAG(2) PRB DECR 319-78/79

ಕಾಶ್ಮೀರ: ಬಿಜೆಪಿ, ಪಾಕಿಸ್ತಾನಗಳಿಗೆ ನಿರಾಸೆ

ಸನ್ನಿವೇಶತೂ ದೇಶ ಸಮಾಧಾನದಿಂದ ನಿಟ್ಟುಸಿರು ಬಿಡಬಹುದು. ಒಂದು ಸ್ಫೋಟಕ ಯಾಂತಕ ಸನ್ನಿವೇಶ, ದೇಶಕ್ಕೆ ಅಪಾರ ಹಾನಿಯುಂಟು ಮಾಡಬಹುದಾಗಿದ್ದ ಸನ್ನಿವೇಶ ಒದಗುವುದು ತಪ್ಪಿದೆ. ಉಗ್ರಗಾಮಿಗಳು, ಜತೆಗೆ ಒಂದಿಬ್ಬರು ಪಾಕಿಸ್ತಾನೀ ಗುಪ್ತಚರ ಏಜೆಂಟರು ಹಾಗೂ ಪ್ರಾರ್ಥನೆಗೆಂದು ಹೋಗಿದ್ದ ಕೆಲವು ಮುಗ್ಧ 25 ಮಂದಿ ನವೆಂಬರ್ 16ರ ಮುಂಜಾವಿಗೆ ಮೊದಲು ಹಜರತ್‌ಬಲ್ ದರ್ಗಾದಿಂದ ಹೊರಬಂದು ಸೇನೆಗೆ ಶರಣಾದರು. ದೇಶದೊಳಗೆ ಮಾತ್ರವಲ್ಲ ಕೊನೆಗೂ ಗಂಭೀರ ಪರಿಣಾಮಗಳಿಂದ ತುಂಬಿದ್ದ ಸನ್ನಿವೇಶ. ಆದರೆ ಇಲ್ಲಿಯೂ ಅಲ್ಲಿಯೂ, ಇದರ ರಾಜಕೀಯ ಲಾಭಗಿಟ್ಟಿಸಲು ರಾಷ್ಟ್ರೀಯವಾಗಿಯೂ, ಅಂತರಾಷ್ಟ್ರೀಯವಾಗಿಯೂ ಆಸಕ್ತಿಯಿಂದ ಕಾಯುತ್ತಿದ್ದವರ, ತಾವೇನು ಕಮ್ಮಿ ಎಂದು ತೋರಿಸಬಯಸುತ್ತಿದ್ದಂತೆ ದುಷ್ಟ ನಿರೀಕ್ಷೆಗೆ ನೀರೆರಚಿದಂತಾಯಿತು. ತಾಳ್ಮೆಯಿಂದ, ದೃಢತೆಯಿಂದ ಬಿಕ್ಕಟ್ಟನ್ನು ಎದುರಿಸುವ ಸರ್ಕಾರದ ನಿಲುವು ಕೊನೆಗೂ ಫಲಕಾರಿಯಾಯಿತು. ಸಿಪಿಐ(ಎಂ) ಹಾಗೂ ಎಡ ಪಕ್ಷಗಳು ಈ ನಿಲುವನ್ನು ಬಹುವಾಗಿ ಪ್ರತಿಪಾದಿಸಿದ್ದವು. ಆದರೆ ಸರಕಾರದ ಮೇಲೆ ಬಹಳ ಒತ್ತಡ, ಕುಮ್ಮಕ್ಕುಗಳು ಬಂದುವು. ಒಳಗೆ ಸಿಲುಕಿಕೊಂಡಿದ್ದ ಉಗ್ರಗಾಮಿಗಳಿಂದ ಸರಕಾರವನ್ನು ಉದ್ರೇಕಗೊಳಿಸಲು ಯತ್ನಿಸಿದರಷ್ಟೇ ಅಲ್ಲ, ದೇಶದೊಳಗೆ ಬಿಜೆಪಿಯಿಂದಲೂ ಬಂತು. ಕಟು ದೈಗುಳಗಳು, ವಿಷವುಗುಳುವ ಪ್ರಚಾರ ನಡೆಸಿ ದರ್ಗಾದ ಮೇಲೆ ಆಕ್ರಮಣ ನಡೆಸಿ ಉಗ್ರಗಾಮಿಗಳನ್ನು ಹೊರಗೆಳೆಯಿರಿ ಎಂದು ಅದು ಕೂಗಾಡಿತು. ಅವರೆಲ್ಲರ ಉದ್ದೇಶ ಸ್ಪಷ್ಟವಾಗಿತ್ತು. ಹಿಂದೆ ಸ್ವರ್ಣಮಂದಿರದಲ್ಲಿ ನಡೆಸಿದ "ಆಪರೇಶನ್ ಬ್ಲೂಸ್ಟಾರ್" ಪ್ರಮಾಣದ ಕಾರ್ಯಾಚರಣೆ ನಡೆದರೆ ಕಾಶ್ಮೀರ ಸಮಸ್ಯೆಯನ್ನು ಇನ್ನಷ್ಟು ಅಂತರಾಷ್ಟ್ರೀಯಕರಣಗೊಳಿಸಬಹುದು ಎಂದು ಪಾಕಿಸ್ತಾನದ ಲೆಕ್ಕಾಚಾರವಾಗಿದ್ದರೆ, ಬಿಜೆಪಿ ಇದನ್ನು ಬಳಸಿ ಕೋಮುಗಳ ನಡುವಿನ ಹಂದರವನ್ನು ದೊಡ್ಡದು ಮಾಡಿ ಆ ಮೂಲಕ ವಾತಾವರಣವನ್ನು ಕೋಮುಗ್ರಸ್ತಗೊಳಿಸಿ ಮತಗಳ ಸುಗ್ಗಿ ಪಡೆಯಬಹುದು ಎಂದು ಲೆಕ್ಕಾಚಾರ ಹಾಕಿತು. ಈ ಇಬ್ಬರ ಲೆಕ್ಕಾಚಾರಗಳೂ ತಲೆಕೆಳಕಾದುದರಿಂದ ದೇಶದ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳು ನಿರಾಳವಾಗಿ ಉಸಿರಾಡುವಂತಾಯಿತು.

ಸೇನೆ ಹಜರತ್ ಬಲ್ ದರ್ಗಾವನ್ನು ಸುತ್ತುವರಿದಿದ್ದ ಈ 33 ದಿನಗಳ ನಾಟಕೀಯ ಸನ್ನಿವೇಶದಲ್ಲಿ ವಿವಿಧ ರಾಜಕೀಯ ಪಕ್ಷಗಳ, ಸಂಘಟನೆಗಳು ಹೇಗೆ ವರ್ತಿಸಿದವು ಎಂಬುದು ಒಂದು ವಿಶ್ಲೇಷಣೆಗೆ ಅರ್ಹವಾದ ಸಂಗತಿ. ಅದರಿಂದ ಸೂಕ್ತ ಪಾಠಕಲಿಯಬಹುದು. ಅಂತಹ ಯಾವುದೇ ಆತುರದ ಕಾರ್ಯಾಚರಣೆಗೆ ನಡೆಸಬೇಡಿ ಎಂದು ಸರಕಾರವನ್ನು ಮತ್ತೆ ಮತ್ತೆ ಎಚ್ಚರಿಸಿದವರೆಂದರೆ ಎಡಶಕ್ತಿಗಳು. ಸಿಪಿಐ(ಎಂ) ಇದರ ಮುಂಚೂಣಿಯಲ್ಲಿತ್ತು. ತಿಳಿಗೇಡಿತನದ ದುಸ್ಸಾಹಕ್ಕೆ ಇಳಿಯಬೇಡಿ, ಮಾತುಕತೆಯ ಮೂಲಕ ಇತ್ಯಾರ್ಥಕ್ಕೆ ಬರುವ ದಾರಿ ಹುಡುಕಿ ಎಂದು ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸ್ಥಾಯಿ ಸಮಿತಿಯ ಸಭೆಯಲ್ಲಿ ಸಿಪಿಐ(ಎಂ)

ಪಿ.ಡಿ. ಸಂಪಾದಕೀಯ

ಕಾಶ್ಮೀರಿ ಸಮಸ್ಯೆಯನ್ನು ಇನ್ನಷ್ಟು ಅಂತರಾಷ್ಟ್ರೀಯರಂಗಕ್ಕೆ ಎಳೆಯಬಹುದೆಂಬ ಪಾಕಿಸ್ತಾನದ ಲೆಕ್ಕಾಚಾರ, ವಾತಾವರಣವನ್ನು ಕೋಮುಗ್ರಸ್ತಗೊಳಿಸಿ ಮತಗಳ ಸುಗ್ಗಿ ಪಡೆಯಬಹುದೆಂಬ ಬಿಜೆಪಿಯ ಲೆಕ್ಕಾಚಾರ ತಲೆಕೆಳಗಾಗಿ ದೇಶ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತಗಳು ಸಮಾಧಾನ ಪಡುವಂತಾಗಿದೆ.

ಸರಕಾರವನ್ನು ಎಚ್ಚರಿಸಿತು. ಬಿಜೆಪಿ ಬಿಟ್ಟು ಮತ್ತೆಲ್ಲಾ ಪಕ್ಷಗಳು ತಾಳ್ಮೆಯ, ಜಾಗರೂಕತೆಯ ನಿಲುವನ್ನು ಅನುಮೋದಿಸಿದರೆಂಬುದು ಸಮಾಧಾನದ ವಿಷಯ. ಸೇನೆಯವರು ಕೂಡಾ ದರ್ಗಾದ ಸುತ್ತಲಿದ್ದ ಈ ಸೂಕ್ಷ್ಮ ಸನ್ನಿವೇಶದಲ್ಲಿ ಉತ್ತಮ ರೀತಿಯಲ್ಲಿ ವರ್ತಿಸಿದರು. ಈ ಒಂದು ಸಂದರ್ಭದಲ್ಲಾದರೂ ರಾವ್ ಸರಕಾರ ಬಿಜೆಪಿಯ ನಿರಂತರ ಪ್ರಚಾರದ ಹೊಡೆತಕ್ಕೆ ಬಲಿಯಾಗದೆ ಪ್ರೌಢತೆಯನ್ನು ತೋರ್ಪಡಿಸಿತು. ಭಾರೀ ನಷ್ಟವುಂಟು ಮಾಡಬಹುದಾದ ಯಾವುದೇ ತರಾತುರಿಯ ಕ್ರಮವನ್ನು ಅದು ಕೈಗೊಳ್ಳಲಿಲ್ಲ.

ಏನಿಲ್ಲೆಂದರೂ ಕನಿಷ್ಟ ಬಿಜೆಪಿಯ ಸಂಕುಚಿತವಾದೀ ಅಬ್ಬರದ ಪಾತ್ರವಂತೂ ಬಯಲಿಗೆ ಬಂತು. ಬಿಜೆಪಿಗೆ ಭಾರತದ ಬಗ್ಗೆ, ರಾಷ್ಟ್ರೀಯ ಪರಂಪರೆಯ ಮೌಲ್ಯಗಳ ಬಗ್ಗೆ ಕಿಂಚಿತ್ತೂ ಆತಂಕವಿಲ್ಲ, ಅದಕ್ಕೆ ಬೇಕಾದದ್ದು ಅಧಿಕಾರ ಮಾತ್ರ ಹೇಗಾದರೂ ಮಾಡಿ ಅಧಿಕಾರಗಿಟ್ಟಿಸುವುದು ಮಾತ್ರ ಎಂಬ ಬಗ್ಗೆ ಈಗ ಎಳ್ಳಷ್ಟು ಸಂಶಯವುಳಿದಿಲ್ಲ. ದರ್ಗಾದೊಳಗೆ ತರಾತುರಿಯಿಂದ ಸೈನಿಕ ಕಾರ್ಯಾಚರಣೆ ನಡೆಸಿದ್ದರೆ ಎಂತಹ ಭಯಾನಕ ಪರಿಣಾಮವಾಗುತ್ತಿತ್ತು ಎಂಬುದನ್ನು ಒಬ್ಬ ಸಾಮಾನ್ಯ ಬುದ್ಧಿಯ ವ್ಯಕ್ತಿಯೂ ಅರಿತುಕೊಳ್ಳಬಲ್ಲ. ಆದರೆ ಬಿಜೆಪಿಗೆ ಮಾತ್ರ ಅರಿವಾಗಲಿಲ್ಲ. ಅಧಿಕಾರ ಗಿಟ್ಟಿಸುವ ಗೀಳು ಅದಕ್ಕೆ ಎಷ್ಟು ಅಂಟಿಕೊಂಡಿದೆಯೆಂದರೆ ಅದಕ್ಕಾಗಿ ಅದು ಅಂತರಾಷ್ಟ್ರೀಯ ವೇದಿಕೆಗಳಲ್ಲಿ ಭಾರತವನ್ನು ಅಸ್ಪೃಶ್ಯವನ್ನಾಗಿ ಮಾಡಲೂ ಅದು ಸಿದ್ಧವಾಗಿತ್ತು. ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಲಿಕೊಟ್ಟಾದರೂ ಅಧಿಕಾರ ಪಡೆಯುವ ಅದರ ಆಟವನ್ನು ಜನರು ಅರ್ಥ ಮಾಡಿಕೊಳ್ಳಬೇಕಾದ ಸಮಯವೀಗ ಬಂದಿದೆ.

ಉಗ್ರಗಾಮಿಗಳ, ಪಾಕಿಸ್ತಾನೀ ಏಜೆಂಟರ ಶರಣಾಗತಿಯಿಂದ ಒಂದು ಕಾಳಗ ಗೆದ್ದಂತಾಗಿದೆಯಷ್ಟೆ. ಸಮರವನ್ನು ಇನ್ನೂ ಗೆದ್ದಿಲ್ಲ. ಈ ಗಮನಾರ್ಹ ಯಶಸ್ಸಿನಿಂದಾಗಿ ತೆರೆದುಕೊಂಡಿರುವ ಅವಕಾಶವನ್ನು ರಾವ್ ಸರಕಾರ ಮತ್ತೊಮ್ಮೆ ವ್ಯರ್ಥಗೊಳಿಸಬಾರದು. ಸಮರ ಗೆಲ್ಲಬೇಕಾದರೆ ರಾವ್ ಸರಕಾರ ಕಾಶ್ಮೀರ ಸಮಸ್ಯೆಗೆ ಮೂಲಭೂತ ಪರಿಹಾರ ಕಂಡು ಹಿಡಿಯುವ ಕೆಲಸದಲ್ಲಿ ತೊಡಗಬೇಕು. ಇದು ಸಾಧ್ಯವಾಗುವುದು ಕಾಶ್ಮೀರಕ್ಕೆ ಗರಿಷ್ಟ ಸ್ವಾಯತ್ತತೆ ನೀಡುವ ಒಂದು ಯೋಜನೆಯನ್ನು, ಜನ ಆಡಳಿತದೊಂದಿಗೆ ಪರಸ್ಪರ ಸಹಕರಿಸಲು ಅವಕಾಶ ಮಾಡಿಕೊಡುವಂತೆ ಎಲ್ಲಾ ರಾಜಕೀಯ ಪಕ್ಷಗಳಿಂದ ಸಲಹಾ ಸಮಿತಿಗಳ ರಚನೆಯ ಪ್ರಸ್ತಾಪವನ್ನು ಕಾಶ್ಮೀರಿಗಳ ಮುಂದಿಡಬೇಕು, ಜತೆಗೆ ಹಿಜ್‌ಬಲು ಮುಜಾಹಿದೀನ್ ಹಾಗೂ ಇತರ ಪಾಕಿಸ್ತಾನೀ ಪರ ಮಂದಿಯನ್ನು ಕಾಶ್ಮೀರಿ ಜನತೆಯಿಂದ ದೂರಸರಿಸಲು ದೃಢ ಕ್ರಮಗಳನ್ನು ಕೈಗೊಳ್ಳಬೇಕು. ತಮ್ಮ ಕಾಶ್ಮೀರ ಸ್ವಂತಿಕೆ ಭದ್ರವಾಗಿರುತ್ತದೆ ಎಂಬ ಭಾವನೆ ಕಾಶ್ಮೀರಿಗಳಲ್ಲಿ ಮೂಡುವಂತಾಗಲಿ. ಕಾಶ್ಮೀರಿ ಜನಗಳ ಆಕಾಂಕ್ಷೆಗಳನ್ನು ಈಡೇರಿಸಬಲ್ಲ, ಕೊನೆಯಲ್ಲಿ ತಾವು ಭಾರತದ ಅಭಿನ್ನ ಅಂಗ ಎಂದು ಭಾವನೆಯನ್ನು ಅವರಲ್ಲಿ ಮೂಡಿಸಬಲ್ಲಂತಹುದು ನಮ್ಮ ಮುಂದೆ ಉಳಿದಿರುವ ಏಕೈಕ ದಾರಿ.

ಅಂಚೆಯಲ್ಲಿ ಇಷ್ಟೊಂದು ವಿಳಂಬವೇಕೆ?

ನಿಮ್ಮ ಪತ್ರಗಳು ಅಂಚೆಯಲ್ಲಿ ಬಹಳ ವಿಳಂಬವಾಗಿ ತಲುಪುತ್ತಿದೆಯೇ? 'ಐಕ್ಯ-ರಂಗ' ಪತ್ರಿಕೆ ಅಂಚೆಯ ಮೂಲಕ ತಲುಪುವಾಗ ತುಂಬಾ ವಿಳಂಬವಾಗುತ್ತಿದೆಯೇ? ಸಾಮಾನ್ಯವಾಗಿ ಯಾವುದೇ ವಿಳಂಬಕ್ಕೆ ಜನಗಳು ಮೊದಲು ಪತ್ರಿಕೆಯ ಅಥವಾ ಅಂಚೆ ವಿಭಾಗದ ನೌಕರರ ಅಲಸ್ಯ ಕಾರಣವೆನ್ನುತ್ತಾರೆ. ಆದರೆ ನಿಜಸಂಗತಿಯೇನು? ಒಂದು ತಿಂಗಳ ಹಿಂದೆ ದಿಲ್ಲಿ, ನವದೆಹಲಿ ರೈಲ್ವೇ ನಿಲ್ದಾಣಗಳಲ್ಲಿ ಸಾರ್ವಜನಿಕರ ಪತ್ರ, ಪತ್ರಿಕೆಗಳನ್ನೊಳಗೊಂಡ 25 ಸಾವಿರ ಅಂಚೆ ಚೀಲಗಳು ಎಲ್ಲೆಂದರಲ್ಲಿ ಬಿದ್ದಿದ್ದವು. ಈ ದೊಡ್ಡ ರೈಲ್ವೇ ನಿಲ್ದಾಣಗಳ ಪ್ರತಿಯೊಂದು ಪ್ಲಾಟ್ ಫಾರಂನಲ್ಲೂ ಅಚೆ ಚೀಲಗಳ ರಾಶಿಗಳೇ ಕಾಣುತ್ತಿದ್ದವು. ಅವನ್ನು ಅತ್ಯಂತ ಅವ್ಯವಸ್ಥಿತ ರೀತಿಯಲ್ಲಿ ಕಳಿಸಲಾಯಿತು. ಆದ್ದರಿಂದ ಈಗಲೂ ಸಾವಿರಾರು ಅಂಚೆ ಚೀಲಗಳು ರವಾನೆಯಾಗದೆ ಉಳಿದಿವೆ. ಇದಕ್ಕೇನು ಕಾರಣ? ಅಖಿಲ ಭಾರತ 'ಆರ್. ಎಂ.ಎಸ್. ಹಾಗೂ ಎಂ.ಎಂ.ಎಸ್. ನೌಕರರ ಸಂಘದ ಮಾಸಿಕ ಪತ್ರಿಕೆ 'ಆರ್.ಎಂ.ಎಸ್. ವರ್ಕರ್'ನ ನವೆಂಬರ್ 1993ರ ಸಂಚಿಕೆಯ ಈ ಕೆಳಗಿನ ಸಂಪಾದಕೀಯ ಇದರ ಮೇಲೆ ಬೆಳಕು ಬೀರುತ್ತಿದೆ.

.......ಈ ರೋಗಕ್ಕೆ ಕಾರಣ ಹುಡುಕಲು ಬಹಳ ದೂರ ಹೋಗಬೇಕಾಗಿಲ್ಲ. ದೇಶದ ಸುಮಾರು ಎಲ್ಲಾ ಅಂಚೆ ರವಾನೆ ಕಚೇರಿಗಳಲ್ಲಿ ಸ್ಥಳಾವಕಾಶದ ಅಭಾವ, ಅಂಚೆ ರವಾನೆ ಮೋಟಾರ್ ವ್ಯಾನ್‌ಗಳ ಸಂಖ್ಯೆಯಲ್ಲಿ ಕಡಿತ ಹಾಗೂ ರೈಲುಗಳಿಗೆ ಜೋಡಿಸಿರುವ ಅಂಚೆ ರವಾನೆ ವ್ಯಾನುಗಳನ್ನೂ ಶೇ. 80 ರಷ್ಟನ್ನು ಹಿಂದಕ್ಕೆ ತಗೆದುಕೊಂಡಿರುವುದೇ ಇದಕ್ಕೆ ಪ್ರಮುಖ ಕಾರಣಗಳು.

ದೇಶದ ಎಲ್ಲಾ ಮಹಾನಗರ, ನಗರಗಳಲ್ಲಿ ಕಳೆದ 3 ದಶಕಗಳಿಂದ ಹೊಸ ಅಂಚೆ ರವಾನೆ ಕಚೇರಿಗಳನ್ನು ತೆರೆದಿಲ್ಲ. ಹಿಂದೆ ಅಂಚೆ ಸಾರಿಗೆ ಹಲವು ಪಟ್ಟು ಹೆಚ್ಚಿದೆ.

ಅಂಚೆ ರವಾನೆ ವ್ಯಾನುಗಳ ಸಂಖ್ಯೆಯೂ ಅಗತ್ಯಕ್ಕಿಂತ ಬಹಳ ಕಡಿಮೆ. 1991 ರಲ್ಲಿ ಮಧ್ಯ ಏಶಿಯಾ ಯುದ್ಧದ ಸಮಯದಲ್ಲಿ ಅದರಲ್ಲೂ 20ಶೇ. ಕಡಿತ ಮಾಡಲಾಯಿತು. ಯುದ್ಧ ಮುಗಿದು ಹೋದರು ಈ ಕಡಿತ ಮುಂದುವರಿಯುತ್ತಲೇ ಇದೆ. ಇದರಿಂದಾಗಿಯೇ ಅಂಚೆ ಚೀಲಗಳ "ಓವರ್ ಲೋಡಿಂಗ್" ಹಾಗೂ ವಿಳಂಬ.

ರೈಲು ಮೂಲಕ ಅಂಚೆ ರವಾನೆಯಲ್ಲಿ ಉಂಟಾಗಿರುವ ಅಡೆ-ತಡೆ ವಿಳಂಬಕ್ಕೆ ಅತಿ ದೊಡ್ಡ ಕಾರಣ - ಅಂಚೆ ಸಾಗಿಸುವ ರೈಲುಗಳ ಸಂಖ್ಯೆ ಹೆಚ್ಚಿಸಲಿಲ್ಲ ಮಾತ್ರವಲ್ಲ, ಈಗಿರುವ ರೈಲುಗಳಲ್ಲೂ ರವಾನೆ ವ್ಯಾನುಗಳು ಸಿಗುತ್ತಿಲ್ಲ.

ಅಂಚೆ ಕಚೇರಿಗಳಲ್ಲಿ ಅಂಚೆಗಳನ್ನು ಪ್ರತ್ಯೇಕಿಸುವ (ಸಾರ್ಟಿಂಗ್) ಕೆಲಸವನ್ನು ವ್ಯವಸ್ಥೆಗೊಳಿಸಿರುವ ರೀತಿಯಿಂದಾಗಿ ಅಲ್ಲಿ ಕೆಲಸದ ಹೊರೆ ವಿಪರೀತ ಹೆಚ್ಚಿದೆ. ದೇಶಾದ್ಯಂತ ಟಿ.ಎಂ.ಬಿ.ಗಳು ಅಂಚೆ ಚೀಲಗಳನ್ನು ತಂದು ಗುಡ್ಡೆ ಹಾಕುವ ಕೇಂದ್ರಗಳಾಗಿವೆಯಷ್ಟೆ, ಅಲ್ಲಿಂದ ಅವುಗಳನ್ನು ಕಳಿಸುವ ಸರಿಯಾದ ವ್ಯವಸ್ಥೆಯಿಲ್ಲದೆ ಸಾವಿರಾರು ಚೀಲಗಳು ದಿನಗಟ್ಟಲೆ ಅಲ್ಲೇ ಬಿದ್ದಿರುತ್ತವೆ.

ಆಶ್ಚರ್ಯವೆಂದರೆ ಅಂಚೆ ಇಲಾಖೆಗೆ ಈ ಎಲ್ಲಾ ಸಮಸ್ಯೆಗಳ ಅರಿವೇ ಇದ್ದಂತಿಲ್ಲ. ಈ ಇಲಾಖೆಯ ಅಸ್ತಿತ್ವವೇ ಅಂಚೆಯ ರವಾನೆ ಹಾಗೂ ವಿತರಣೆಯ ಮೇಲೆ ನಿಂತಿದ್ದರೂ ಇದು ಅಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೊಳಗಾಗಿರುವ ಅಂಶ. ನಿಜಸ್ಥಿತಿಯೇನು ಎಂಬ ಬಗ್ಗೆ ಅಂಚೆ ಇಲಾಖೆಗೆ ಗೊತ್ತೇ ಇದ್ದಂತಿಲ್ಲ. ಪರಿಸ್ಥಿತಿಯನ್ನು ಎದುರಿಸುವ ಅಪೇಕ್ಷೆಯೂ ಇದ್ದಂತಿಲ್ಲ. ಸಂಪೂರ್ಣ ಉದ್ದೇಶಹೀನತೆಯ ವಾತಾವರಣ. ತಕ್ಷಣ ಯುದ್ಧೋಪಾದಿಯಲ್ಲಿ ಭವಿಷ್ಯದ ಬಗ್ಗೆ ಯೋಜನೆ ರೂಪಿಸದಿದ್ದರೆ ದೇಶದಲ್ಲಿ ಈ ಶತಮಾನ ಮುಗಿಯುವ ವೇಳೆಗೆ ಅಂಚೆ ವ್ಯವಸ್ಥೆ ಕುಸಿದು ಬೀಳುವುದು ಖಂಡಿತ.

ಸೋಲದೆ ಸಾಗಿದೆ ಸಂಗ್ರಾಮ

ಪುಟ 1ರಿಂದ

ನಿತ್ಯಾನಂದ ಸ್ವಾಮಿ ಭಾಗವಹಿಸಿದ್ದರು. ಕಾರ್ಮಿಕ ಮಂತ್ರಿಗಳು ಮತ್ತೆ ಎರಡು ದಿನ ಕಾಲಾವಕಾಶವನ್ನು ಕೋರಿದರು.

ಸರ್ಕಾರ ಭರವಸೆಯನ್ನು ಈಡೇರಿಸಲು ಹಿಂದೇಟು ಹಾಕಿದರೆ ಸತ್ಯಾಗ್ರಹದ ಸ್ವರೂಪವನ್ನು ಬದಲಾಯಿಸಿ ಆಮರಣ ಉಪವಾಸ ಸತ್ಯಾಗ್ರಹದಂತಹ ಕ್ರಮವನ್ನು ಕೈಗೊಂಡು ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಲಾಯಿತು.

ನಗರದ ಬೇರೆ ಬೇರೆ ಭಾಗಗಳಿಂದ ಕಾರ್ಮಿಕರು ಪ್ರತಿದಿನ ಮೆರವಣಿಗೆಯಲ್ಲಿ ಬಂದು ಸತ್ಯಾಗ್ರಹಿಗಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. 22 ರಂದು ಯಶವಂತಪುರ, ಪೀಣ್ಯ ಪ್ರದೇಶದಿಂದ 23 ರಂದು ಕೃಷ್ಣ ರಾಜಪುರ, ವೈಟ್‌ಫೀಲ್ಡ್ ಪ್ರದೇಶದಿಂದ, ಮತ್ತು 24 ರಂದು ಮೈಸೂರ್ ರಸ್ತೆ ಕನಕಪುರ ರಸ್ತೆ ಪ್ರದೇಶದಿಂದ ಕಾರ್ಮಿಕ ಸ್ತ್ರೀ,ಪುರುಷರು ಮೆರವಣಿಗೆಯಲ್ಲಿ ಬಂದು ಸತ್ಯಾಗ್ರಹಿಗಳೊಂದಿಗೆ ಧರಣಿ ನಡೆಸಿದರು. 25 ರಂದು ಶ್ರೀರಾಮಪುರ, ರಾಜಾಜಿನಗರ ಮತ್ತು ಮಾಗಡಿ ರಸ್ತೆ ಪ್ರದೇಶದಿಂದ ಕಾರ್ಮಿಕರ ಮೆರವಣಿಗೆ ನಡೆಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಪಿ. ರಾಮಚಂದ್ರರಾವ್ ಅವರು ಸತ್ಯಾಗ್ರಹದ ಶಿಬಿರಕ್ಕೆ ಭೇಟಿ ನೀಡಿ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿದರು. ಕರ್ನಾಟಕದ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಒಂದು ಮೈಲುಗಲ್ಲಾಗಲಿರುವ ಈ ಹೋರಾಟಕ್ಕೆ ಎಲ್ಲ ಜನವಿಭಾಗಗಳ ಬೆಂಬಲ ದೊರಕಿಸಲು ತಮ್ಮ ಪಕ್ಷ ಶ್ರಮಿಸುವುದು ಎಂದು ಹೇಳಿದರು. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಭೀಮಸಿ ಕಲಾದಗಿ, ಮತ್ತು ಚಂದ್ರಶೇಖರ ಬಾಳೆ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಪಿ. ಜಗನ್ನಾಥ್, ಜೆ.ಎನ್. ನಾಗರಾಜ್, ಬೀಡಿ ಕಾರ್ಮಿಕರ ಮುಖಂಡರಾದ ಮಹಮ್ಮದ್ ದಸ್ತಗೀರ್ ಮತ್ತು ಕೆ. ಶಂಕರ್, ನೇಕಾರರ ಮುಖಂಡರಾದ ಎಸ್. ಪ್ರಸನ್ನ ಕುಮಾರ್ ಮತ್ತು ಡಿ.ಎಂ. ಕಲಾಶಿ, ದುಡಿಯುವ ಮಹಿಳೆಯರ ನಾಯಕಿ ಕಾಮ್ರೇಡ್ ವರಲಕ್ಷ್ಮಿ ಹೋಟೆಲ್ ಕಾರ್ಮಿಕರ ಮುಖಂಡ ಇ.ಕೆ.ಎನ್. ರಾಜನ್, ಎಸ್.ಎಫ್.ಐನ ರಾಜ್ಯ ಅಧ್ಯಕ್ಷರಾದ ಜೆ.ಸಿ. ಬಯ್ಯಾರೆಡ್ಡಿ ಮತ್ತು ಪ್ರಕಾಶ್, ಡಿ.ವೈ. ಎಫ್.ಐ.ನ ಮುಖಂಡರಾದ ಗುರುಶಾಂತ್ ಮತ್ತು ಗೋಪಾಲ ಕೃಷ್ಣ, ತೋಟ ಕಾರ್ಮಿಕರ ಮುಖಂಡರಾದ ಕಾಮ್ರೆಡ್ ಸಿ. ನಂಜುಂಡಪ್ಪ, ಮಂಡಲ ಪಂಚಾಯಿತಿ ನೌಕರರ ಹಾಗೂ ಮುನಿಸಿಪಾಲಿಟಿ ನೌಕರರ ಮುಖಂಡರಾದ ಕಾಮ್ರೆಡ್ ಎಸ್.ಕೆ. ಉಪಾಧ್ಯಾಯ, ಕೋಲಾರ ಜಿಲ್ಲೆಯ ರೈತ ಮುಖಂಡರಾದ ಕಾಮ್ರೇಡ್ ಜಿ.ವಿ. ಶ್ರೀರಾಮರೆಡ್ಡಿ, ಬೆಂಗಳೂರು ಜಿಲ್ಲೆಯ ಕಾರ್ಮಿಕ ಮುಖಂಡರಾದ ಕಾಮ್ರೇಡ್ ಆರ್. ಶ್ರೀನಿವಾಸ್ ಮತ್ತು ಕೆ.ಎಸ್. ಸುಬ್ರಮಣ್ಯ ಮೊದಲಾದ ಹಿರಿಯ ನಾಯಕರು ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿ ಅವರ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ನಗರದ ಬೇರೆ ಬೇರೆ ಕಾರ್ಮಿಕ ಸಂಘಗಳಿಂದ ಸತ್ಯಾಗ್ರಹಿಗಳಿಗೆ ಎಲ್ಲ ವಿಧದ ನೆರವು ಹರಿದು ಬರತೊಡಗಿದೆ. ಕರ್ನಾಟಕ ಪ್ರಾಂತ ರೈತ ಸಂಘವು ಜೋಳದ ರೊಟ್ಟಿಗಳನ್ನು ರೈತರಿಂದ ಸಂಗ್ರಹಿಸಿ ಕಳುಹಿಸುತ್ತಿದೆ. ಸಿಐಟಿಯು ನೇತೃತ್ವದ ಬೆಂಗಳೂರು ಆಟೋ ಚಾಲಕರ ಸಂಘದ ಕಾರ್ಯಕರ್ತಕರು ಅವರ ಮುಖಂಡರಾದ ಕಾಮ್ರೇಡ್ ಸುಬ್ಬರಾವ್ ಅವರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ಊಟ ಉಪಚಾರದ ವ್ಯವಸ್ಥೆಗಾಗಿ ಹಗಲು ರಾತ್ರಿ ದುಡಿಯುತ್ತಿದ್ದಾರೆ.

ಕಾರ್ಮಿಕ ಹಿತೈಷಿ ವೈದ್ಯರು ಸತ್ಯಾಗ್ರಹಿಗಳಿಗೆ ಆವಶ್ಯಕ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದ್ದಾರೆ. ಈ ಎಲ್ಲ ಪರಿಸರದ ಮಧ್ಯದಲ್ಲಿ ಸತ್ಯಾಗ್ರಹಿಗಳು ತಮ್ಮ "ಹೋರಾಟ ಎಲ್ಲಿಯವರೆಗೆ.........ಗೆಲ್ಲುವ ವರೆಗೆ" ಎಂಬ ನಿಲುವಿನಲ್ಲಿ ಹೆಚ್ಚು ಹೆಚ್ಚು ಗಟ್ಟಿಯಾಗುತ್ತಿದ್ದಾರೆ. ರಾಜ್ಯದ ಕಾರ್ಮಿಕ ಚಳುವಳಿಗೆ ಹೊಸ ತಿರುವ ನೀಡಲಿರುವ ಈ ಹೋರಾಟವನ್ನು ರೂಪಿಸಿರುವ ಸಿಐಟಿಯು ತೀರ್ಮಾನ ಸಕಾಲಿಕವೂ ಸ್ವಾಗತಾರ್ಹವೂ ಆಗಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಮಾತಿಗೂ ಕೃತಿಗೂ ಮೈಲಿಗಳ ಅಂತರ!

ಪುಟ 1ರಿಂದ

ಗುತ್ತಿಗೆಗಳನ್ನು ನೀಡಿದೆ. ಹೇಗಿದೆ ಮಾತು ಮತ್ತು ಕೃತಿ?

3

ಮಾತು ಸಹಕಾರಿ ಸಂಘಗಳ ಹೆಸರಿನಲ್ಲಿ ಸಾವಿರಾರು ಎಕರೆಗಳ ಭೂಮಿಯ ಕಬಳಿಕೆಯನ್ನು ನಿರ್ಣಾಯಕವಾಗಿ ಮಟ್ಟಹಾಕಿ ಲಕ್ಷಾಂತರ ಅಮಾಯಕ ಸದಸ್ಯರ ಹಿತವನ್ನು ಕಾಪಾಡಿ ಈ ಸಹಕಾರ ಸಂಘಗಳನ್ನು ದೈತ್ಯ ಶಕ್ತಿಗಳ ಹಿಡಿತದಿಂದ ಪಾರು ಮಾಡಿದ್ದೇವೆ.

ಕೃತಿ ಈ ಸಹಕಾರಿ ಗೃಹ ಸಂಘಗಳ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸುವುದರಿಂದ ಲಕ್ಷಾಂತರ ಸದಸ್ಯರ ಹಿತಗಳನ್ನು ಹೇಗೆ ಕಾಪಾಡಿದಂತಾಗುವುದು? ಪ್ರಾಮಾಣಿಕವಾಗಿ ನಡೆಯುವ ಮತ್ತು ದೈತ್ಯ ಶಕ್ತಿಗಳ ಹಿಡಿತದಲ್ಲಿರುವ ಸಹಕಾರಿ ಸಮೂಹಗಳ ಬಗ್ಗೆ ತಾರತಮ್ಯ ನೀತಿ ಬೇಡವೇ? ಸದಸ್ಯರಿಗೆ "ಗೃಹ"ಗಳನ್ನು ಒದಗಿಸುವ ಪರ್ಯಾಯ ಯೋಜನೆ ಬೇಡವೇ?

4

ಮಾತು ಆಡಳಿತದಲ್ಲಿ ರಾಜಕೀಯರಂಗದಲ್ಲಿ ಭ್ರಷ್ಟಾಚಾರದ ಬೇರುಗಳನ್ನೇ ಕಿತ್ತೊಗೆದಿದ್ದೇವೆ.

ಕೃತಿ ಆಡಳಿತದಲ್ಲಿ ಭ್ರಷ್ಟಾಚಾರದ ಬೇರುಗಳನ್ನೇ ಕಿತ್ತು ಹಾಕಲಾಗಿದೆ ಎಂಬ ಹೇಳಿಕೆ ತೀರಾ ಬೂಟಾಟಿಕೆಯ ಹೇಳಿಕೆ ಎಂದೇ ಹೇಳಬೇಕಾಗುತ್ತದೆ. ಬಹಳ ಕಾಲಧಿಂದ ಆಡಳಿತದಲ್ಲಿ ಭ್ರಷ್ಟಾಚಾರ ಸಾರ್ವತ್ರಿಕವಾಗಿ ಅದು ಮೇಲ್ಮಟ್ಟದಲ್ಲಿ ಅಧಿಕವಾಗುತ್ತಾ ಹೋಗುತ್ತಿರುವ ಪ್ರಕ್ರಿಯೇ ಈಗ ಸಂಪೂರ್ಣವಾಗಿ ನಿಂತಿದೆ ಎಂದು ಹೇಳಿದರೆ ಯಾರು ತಾನೇ ನಂಬಿಯಾರು. ಮುಖ್ಯಮಂತ್ರಿಗಳ ಮಟ್ಟದಲ್ಲಿ ಕಡಿಮೆ ಎಂದು ಹೇಳಿದರೆ ಒಪ್ಪಬಹುದು. ಅಲ್ಲಿಯೂ ಸಂಪೂರ್ಣವಾಗಿ ನಿಂತಿದೆ ಎಂದು ಹೇಳುವುದು ಕೂಡಾ ಸರಿಹೋಗದು.

ಇನ್ನು ರಾಜ್ಯಕೀಯ ರಂಗವಲ್ಲಿ ಭ್ರಷ್ಟಾಚಾರದ ಬೇರುಗಳನ್ನೇ ಕಿತ್ತು ಹಾಕಲಾಗಿದೆ ಎಂಬ ಮಾತಿಗೆ ಅರ್ಥವಿಲ್ಲ ಅದು ಸತ್ಯವೂ ಅಲ್ಲ. ಹಾಗಿದ್ದರೆ ವಿದ್ಯಾಕ್ಷೇತ್ರದ ಖಾಸಗಿ ಮೇನೇಜ್‌ಮೆಂಟುಗಳ 'ಲಾಬಿ' ಆದಾಯವಾಗಿ ಆಳುವ ರಾಜಕೀಯ ಪಕ್ಷದ ಪ್ರಭೃತಿಗಳ ಮೂಲಕವಲ್ಲವೇ ಬೇರೆ ಯಾರ ಮೂಲಕ ವರ್ತಿಸುವುದು? ಹಾಗೆಂದರೆ ಲಿಕ್ಕರ್ ಲಾಭಿ ಏನೇನು ಕೆಲಸ ಮಾಡುತ್ತಿಲ್ಲವೇ? ಲ್ಯಾಂಡ್ ಗ್ರಾಂಟ್ ಕಮಿಟಿಗಳ ಅಧ್ಯಕ್ಷರಾಗಿರುವ ನೂರಾರು ಎಂ.ಎಲ್.ಎ.ಗಳು ಹಾಗಾದರೆ ಯಾಕೆ ತಮ್ಮ ಕ್ಷೇತ್ರಗಳಲ್ಲಿದ್ದು ಕೆಲಸ ಮಾಡುವುದಿಲ್ಲ? ಬದಲು ಅವರು ಯಾಕೆ ಬೆಂಗಳೂರಿನಲ್ಲೇ ವಿಭಿನ್ನ ಗುಂಪಿನವರಾಗಿ ವರ್ತಿಸುತ್ತಿದ್ದಾರೆ? ಅವರು 'ದೊಡ್ಡ ಹಣ'ದ ಬೆಂಬಲವಿಲ್ಲದೆ ಸತತವಾಗಿ ಬೆಂಗಳೂರು ಮತ್ತು ದಿಲ್ಲಿಯಲ್ಲಿ ವಿಭಿನ್ನ ಗುಂಪಿನ ಚಟುವಟಿಕೆಗಳನ್ನು ಮಾಡಲು ಹೇಗೆ ಸಾಧ್ಯ?

ಮಾತು ಮತ್ತು ಕೃತಿಗೆ ಎಷ್ಟು ಅಂತರ!

5

ಮಾತು ಗೃಹ ನಿರ್ಮಾಣ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಸಂಪೂರ್ಣವಾಗಿ ಸ್ಥಗಿತವಾಗಿದ್ದ ಕೆಲಸಗಳನ್ನು ಪುನಃಶ್ಚೇತನಗೊಳಿಸಿ ಇದೇ ಯೋಜನೆಗೆ ಹೊಸ ಹುರುಪು ಮತ್ತು ಹೊಸ ಅರ್ಥವನ್ನು ಕೊಟ್ಟಿದ್ದು. ಈಗ ಒಂದು ವರ್ಷದಲ್ಲಿ ಒಂದು ಲಕ್ಷ ಮನೆಯನ್ನು ನಿರ್ಮಿಸುವ ಪಕ್ಕಾ ಯೋಜನೆಯನ್ನು ಹಮ್ಮಿಕೊಂಡು ಅಗತ್ಯವಾದ ಹಣವನ್ನು ಮಂಜೂರು ಮಾಡಿ ಬಿಡುಗಡೆ ಮಾಡುತ್ತಿದ್ದೇವೆ.

ಕೃತಿ ಲಕ್ಷಾಂತರ ಮನೆಗಳನ್ನು ಈಗಿನ ಸರ್ಕಾರದ ಆರ್ಥಿಕ ದುಃಸ್ಥಿತಿಯಲ್ಲಿ ಅದೂ ಭೂಕಂಪ, ಅತಿವೃಷ್ಟಿಯಿಂದ ವಿಪರೀತ ಮನೆಗಳು ಬಿದ್ದಿರುವಾಗ ಹಾಗೂ ಬೆಳೆಗಳು ನಾಶವಾಗಿರುವಾಗ ಇಡೀ ಕರ್ನಾಟಕದ ಯೋಜನೆಯಲ್ಲೇ 600 ಕೋಟಿಗಿಂತಲೂ ಅಧಿಕ ಮೊಬಲಗು ಕಡಿಮೆಯಾಗಿರುವಾಗ ಕೃಷ್ಣಾ ನೀರಾವರಿ ಯೋಜನೆ ಸಾವಿರಾರು ಕೋಟಿಗಳನ್ನು ಅಪೇಕ್ಷಿಸುತ್ತಿರುವಾಗ -ಹೇಗೆ ಸಾಧ್ಯ. ಇದು ಕೇವಲ ಸಾಮಾನ್ಯ ಜನರ ಕಿವಿಗಳಿಗೆ ಇಂಪು ಮಾಡುವ ಹೇಳಿಕೆಯಲ್ಲದೇ, ಬೇರೇನೂ ಅಲ್ಲವೆಂಬುದು ನಮ್ಮ ಅಭಿಪ್ರಾಯ.

ಹೀಗೆ, ವೀರಪ್ಪ ಮೊಯಿಲಿ ಸರಕಾರವು ಈ ಒಂದು ವರ್ಷದಲ್ಲಿ ನಾವು ಸಾಧಿಸಿದ್ದೇವೆ ಎಂದು ಹೇಳಿಕೊಳ್ಳುವ ಹತ್ತು ಹಲವು ಕಾರ್ಯಗಳ ಕುರಿತು ವಿಮರ್ಶಿಸಿದಾಗ, ಅವುಗಳಲ್ಲಿ ಸ್ವಲ್ಪ ಸ್ವಲ್ಪ ಹಣ ತೋರಿಕೆಗೆ ವಿನಿಯೋಗಿಸಲ್ಪಟ್ಟಿರುವುದು ಸತ್ಯವಾದರು, ಹೆಚ್ಚಿನ ಹಣ ತೊಡಗಿಸಲಾಗಲಿಲ್ಲವೆಂಬುದು ಸ್ಪಷ್ಟ... ಎಷ್ಟೋ ಧೋರಣೆಗಳ ಕುರಿತು 'ಕಟುವಾಗಿ ಈ ಧೋರಣೆಗಳನ್ನು ನಾವು ಅನುಷ್ಠಾನಕ್ಕೆ ತರುತ್ತಿದ್ದೇವೆ' ಎಂಬ ಹೇಳಿಕೆಗಳನ್ನು ವೀರಪ್ಪ ಮೊಯಿಲಿಯವರ ಸರಕಾರ ಕೊಡುತ್ತಾ ಬರುತ್ತಿರುವುದು ಸತ್ಯವಾದರೂ, ವಾಸ್ತವಿಕವಾಗಿ ಈ ಧೋರಣೆಗಳು ಹೇಳಿದ ಕಾಲದಿಂದ ಶುರುವಾಗಿ ಕ್ರಮೇಣ ಸಡಿಲವಾಗುತ್ತಾ ಹೋಗುತ್ತಿರುವುದು ವಾಸ್ತವಿಕ.

ಕಾಂಗ್ರೆಸ್(ಐ) ದೇಶದಲ್ಲಿ ಕರ್ನಾಟಕ ರಾಜ್ಯವನ್ನು ಸೇರಿಸಿಕೊಂಡು, ಕ್ಷೀಣಿಸುತ್ತಿರುವ ತನ್ನ ರಾಜಕೀಯ ಪ್ರಭಾವ ಉಳಿಸಿಕೊಳ್ಳಲಿಕ್ಕೆ ಬೇರೆ ಬೇರೆ ವ್ಯಕ್ತಿಗಳನ್ನು ಮುಖ್ಯಮಂತ್ರಿಗಳಾಗಿ ಜನತೆಯ ಮುಂದೆ ತಮ್ಮ ಐದು ವರ್ಷದ ಕಾಲದಲ್ಲಿ ತಂದು ನಿಲ್ಲಿಸಿದರೂ, ಮೂಲಭೂತವಾಗಿ ಕಾಂಗ್ರೆಸ್(ಐ) ಪಕ್ಷ ಹಾಗೂ ಕಾಂಗ್ರೆಸ್(ಐ)ಯ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ನೀತಿ ದೇಶದ ಅಧಿಕ ಜನತೆಗೆ ಹಾಗೂ ದೇಶದ ಅಭಿವೃದ್ಧಿಗೆ ಹಾನಿಕಾರಕವಾಗಿರುವುದರಿಂದ, ಅದು ಸಾಧ್ಯವಾಗುತ್ತಿಲ್ಲ.

ಮುಖ್ಯಮಂತ್ರಿಗಳು ಪ್ರಾಮಾಣಿಕರಾಗಿದ್ದರೆ ಸಾಲದು ಅವರ ಮಾತು ಜನಪ್ರಿಯವಾಗಿದ್ದರೆ ಸಾಲದು... ಅವರ ಧೋರಣೆಗಳು ಜನಪರವಾಗಿದ್ದು, ಅವುಗಳ ಜಾರಿಗೆ ಬೇಕಾದ ರಾಜಕೀಯ ಇಚ್ಛಾಶಕ್ತಿ ಮತ್ತು ಹಣ ಒದಗಿಸುವುದು ಮುಖ್ಯ.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, [illegible]